ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46


ಅಕ್ಟೋಬರ್ 7 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 170 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


ಚಾಮುಂಡಿಬೆಟ್ಟದಲ್ಲಿ
ರಥೋತ್ಸವ



ಪೂರ್ಣ ವರದಿ ಪುಟ–3

ಮುಡಾ ಹಗರಣ; ಮಾಜಿ ಆಯುಕ್ತ ದಿನೇಶ್‌ಕುಮಾರ್ ಕಬಳಿಸಿದ್ದ

40 ಕೋಟಿ ಮೌಲ್ಯದ ಆಸ್ತಿ ಇಡಿ ಮುಟ್ಟುಗೋಲು





ದಿನೇಶ್‌ಕುಮಾರ್

ಬೆಂಗಳೂರು: ಮುಡಾ ಹಗರಣ ಪ್ರಕರಣದಲ್ಲಿ ಹಣ ವರ್ಗಾವಣೆ ತನಿಖೆಗೆ ಸಂಬಂಧಿಸಿದಂತೆ ಮತ್ತೆ 40 ಕೋಟಿ ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ (ಇಡಿ) ತಿಳಿಸಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕೆಲವು ಸೈಟ್‌ಗಳನ್ನು ಒಳಗೊಂಡಂತೆ 34 ಸ್ಥಿರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಅ.4ರಂದು ತಾತ್ಕಾಲಿಕ ಆದೇಶ ಹೊರಡಿಸಲಾಗಿತ್ತು ಎಂದು ಇಡಿ ಹೇಳಿದೆ.

ಈ ಆಸ್ತಿಗಳ ಮಾರುಕಟ್ಟೆ ಮೌಲ್ಯ 40.08 ಕೋಟಿ ರೂ. ಎಂದು ಜಾರಿ ನಿರ್ದೇಶನಾಲಯ ಹೇಳಿಕೆಯಲ್ಲಿ ತಿಳಿಸಿದೆ. ಕರ್ನಾಟಕ ಲೋಕಾಯುಕ್ತ ಪೊಲೀಸರ ಎಫ್‌ಐಆರ್ ನಂತರ ಅಖಾಡಕ್ಕೆ ಇಳಿದ ಜಾರಿ ನಿರ್ದೇಶನಾಲಯ ಹಣ ವರ್ಗಾವಣೆ ಕುರಿತಂತೆ ತನಿಖೆ ಶುರು ಮಾಡಿತ್ತು. ಜಾರಿ ನಿರ್ದೇಶನಾಲಯ ಈ ಹಿಂದೆಯೂ ಇದೇ ರೀತಿಯ ಆಸ್ತಿಗಳ ಮುಟ್ಟುಗೋಲು ಆದೇಶಗಳನ್ನು ಹೊರಡಿಸಿತ್ತು. ಈ ತನಿಖೆಯ ಭಾಗವಾಗಿ ಇದುವರೆಗೆ 400 ಕೋಟಿ ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ ಮಾಜಿ ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್‌ನನ್ನು ಇಡಿ ಬಂಧಿಸಿದ್ದು ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿ ಜೈಲಿನಲ್ಲಿದ್ದಾರೆ. ದಿನೇಶ್ ಕುಮಾರ್ ಬಳಿಯ 40.8 ಕೋಟಿ ರೂ. ಮೌಲ್ಯದ 32 ಸೈಟ್‌ಗಳನ್ನು ಇದೀಗ ಇಡಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ನಕಲಿ ದಾಖಲೆಗಳನ್ನು ದಿನೇಶ್‌ಕುಮಾರ್ ಸೃಷ್ಟಿ ಮಾಡಿ, ಆ ಮೂಲಕ ಸೈಟ್‌ಗಳನ್ನು ಮರುಹಂಚಿಕೆ ಮಾಡಿ ಲಾಭ ಮಾಡಿಕೊಂಡಿದ್ದರು. ಇದಕ್ಕೆ ಸಾಕ್ಷ್ಯ ಎಂಬಂತೆ ಹಣ ಪಡೆದು ಆಸ್ತಿ ಗಳಿಕೆ ಮಾಡಿರುವುದಕ್ಕೆ ದಾಖಲೆ ಪತ್ತೆಯಾಗಿದೆ ಎಂದು ಇಡಿ ಹೇಳಿದೆ.

ಹಾಸನಾಂಬೆ ದರ್ಶನಕ್ಕೆ ಎಐ ತಂತ್ರಜ್ಞಾನ; ಅ.9ರಿಂದ 23ರವರೆಗೂ ದೇವಿ ದರ್ಶನ

- 24 ಗಂಟೆಯೂ ದೇವಿ ದರ್ಶನಕ್ಕೆ ಅವಕಾಶ
- ವಿಐಪಿಗಳಿಗೆ ಬೆಳಗ್ಗೆ 10.30 ರಿಂದ 12.30ರವರೆಗೆ ಮಾತ್ರ ಪ್ರವೇಶ
- ಒಬ್ಬ ವಿಐಪಿ ಜೊತೆ ನಾಲ್ವರಿಗೆ ಮಾತ್ರ ಅವಕಾಶ
- 300 ರೂ, ಸಾವಿರ ರೂ ಟಿಕೆಟ್ ಮಾರಾಟ
- ಅ.9, ಅ.23 ರಂದು ದರ್ಶನ ಭಾಗ್ಯ ಇಲ್ಲ
- ದಿನಕ್ಕೆ ಸಾವಿರ ಪಾಸ್ ಮಾತ್ರ ವಿತರಣೆ



ಹಾಸನ, ಅ.6– ಹಾಸನಾಂಬ ದರ್ಶನೋತ್ಸವಕ್ಕೆ ದಿನಗಣನೆ ಆರಂಭವಾಗಿದೆ. ಸಾಲಗಾಮೆ ರಸ್ತೆಯ ಜಿಲ್ಲಾ ಖಜಾನೆಯಿಂದ ಹಾಸನಾಂಬೆ ಒಡವೆಗಳನ್ನು ಬೆಳ್ಳಿ ರಥದಲ್ಲಿ ದೇವಾಲಯಕ್ಕೆ ರವಾನಿಸಲಾಗಿದೆ. ಅ.9 ರಿಂದ 23 ರವರೆಗೆ ಹಾಸನಾಂಬ ಜಾತ್ರಾ ಮಹೋತ್ಸವ ನಡೆಯಲಿದೆ. ಪ್ರಧಾನ ಅರ್ಚಕ ನಾಗರಾಜ್ ಒಡವೆಗಳಿಗೆ ಪೂಜೆ ಸಲ್ಲಿಸಿದ್ದು, ತಹಸೀಲ್ದಾರ್, ಪೊಲೀಸರ ಸಮ್ಮುಖದಲ್ಲಿ ಮಂಗಳವಾದ್ಯಗಳೊಂದಿಗೆ ಒಡವೆಗಳನ್ನು ದೇವಸ್ಥಾನಕ್ಕೆ ರವಾನಿಸಲಾಗಿದೆ.

ಹಾಸನಾಂಬೆ ಉತ್ಸವದ ಹಿನ್ನೆಲೆಯಲ್ಲಿ ಕ್ಷೇತ್ರದ ಶಾಸಕರು, ಸಂಸದರೊಂದಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಭೆ ನಡೆಸಿ ಚರ್ಚೆ ನಡೆಸಿದರು. ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಅ.9 ರಿಂದ 23ರ ವರೆಗೂ ಹಾಸನಾಂಭೆ ದೇಗುಲ ತೆರೆದಿರುತ್ತದೆ ಎಂದು ತಿಳಿಸಿದರು.

ಈ ಬಾರಿ 24 ಗಂಟೆ ಕಾಲ ದೇವಸ್ಥಾನ ಬಾಗಿಲು ತೆರೆದಿರುತ್ತದೆ. ಆದರೆ ಪೂಜಾ ಕೈಂಕರ್ಯಕ್ಕೆ ಕೆಲ ಸಮಯ ಬೇಕಾಗುತ್ತದೆ. ಪೂಜಾ ಸಮಯ ಬಿಟ್ಟು ಉಳಿದ ಸಮಯದಲ್ಲಿ ಭಕ್ತಾಧಿಗಳಿಗೆ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ. ಕಳೆದ ವರ್ಷ 6.80 ಕೋಟಿ ರೂಪಾಯಿ ಹಣ ಖರ್ಚಾಗಿತ್ತು. ಈ ವರ್ಷ ಇನ್ನೂ ಸ್ವಲ್ಪ ಹೆಚ್ಚಿನ ಹಣ ಖರ್ಚಾಗಬಹುದು ಎಂದು ಸಚಿವರು ಹೇಳಿದರು.

ದಿನಪೂರ್ತಿ ವಿಐಪಿ ದರ್ಶನ ಇಲ್ಲ: ಒಬ್ಬ ಗಣ್ಯ ವ್ಯಕ್ತಿ ಅವರ ಕುಟುಂಬ ಜೊತೆ ಬಂದರೆ ಒಳ್ಳೆಯದು. 1+4 ರೀತಿ ವಿಐಪಿಗಳು ಅವರ ಕುಟುಂಬಸ್ಥರು ಅಥವಾ ಬೆಂಬಲಿಗರನ್ನಾದರೂ ಕರೆತರಲಿ ಅವರನ್ನು ಮಾತ್ರ ಬಿಡಲಿದ್ದಾರೆ. ಇದಕ್ಕಾಗಿ ಹಾಸನ ಎಡಿಸಿ ಅವರನ್ನು ನಿಯೋಜನೆ ಮಾಡಲಾಗಿದೆ. ಆದರೆ ದಿನಪೂರ್ತಿ ವಿಐಪಿ ದರ್ಶನ ಇಲ್ಲ. ಬೆಳಗ್ಗೆ 10.30 ರಿಂದ ಮಧ್ಯಾಹ್ನ 12.30 ರವರೆಗೆ ವಿಐಪಿ ದರ್ಶನಕ್ಕೆ ಅವಕಾಶ ನೀಡಲಾಗಿದೆ. ಆ ಬಳಿಕ ವಿಐಪಿ ಗೇಟ್‌ಗೆ ಬೀಗ ಹಾಕಲಾಗುವುದು. ಹಾಗೆಂದ ಮಾತ್ರಕ್ಕೆ ವಿಐಪಿಗಳನ್ನು ನಿರ್ಲಕ್ಷಿಸಿದ್ದೇವೆ ಅಂತ ಅಲ್ಲ. ಹಿಂದೆ ವಿಐಪಿ ಪಾಸ್‌ಗಳಿಂದಾಗಿ ಸಾರ್ವಜನಿಕರು ಪರದಾಡುವಂತಾಗಿತ್ತು. ■ 6ನೇ ಪುಟಕ್ಕೆ

ಜಾತಿಗಣತಿ ಬೆಂಗಳೂರು ವ್ಯಾಪ್ತಿ ಅ.24, ಇತರೆಡೆ ಅ.12ರವರೆಗೆ ವಿಸ್ತರಣೆ

ಇದಕ್ಕೆ ಅನುಗುಣವಾಗುವಂತೆ ಶಾಲಾ ಶಿಕ್ಷಕರ ಕರ್ತವ್ಯ ನಿಯೋಜನೆ

ಬೆಂಗಳೂರು, ಅ.6– ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಅವಧಿಯನ್ನು ವಿಸ್ತರಿಸಲಾಗಿದ್ದು, ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಅ.24 ಹಾಗೂ ರಾಜ್ಯದ ಇತರೆಡೆ ಅ.12 ರವರೆಗೆ ಸಮೀಕ್ಷೆ ಮುಂದುವರೆಯಲಿದೆ.

ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯಲ್ಲಿ ಶಿಕ್ಷಕರು ಪಾಲ್ಗೊಂಡಿರುವ ಕಾರಣ ಸರ್ಕಾರಿ ಮತ್ತು ಅನುದಾನಿತ ಶಾಲಾ ತರಗತಿ ಸಮಯವನ್ನು ಮರು ನಿಗದಿಪಡಿಸಿ ಶಿಕ್ಷಣ ಇಲಾಖೆ ಸೋಮವಾರ ಆದೇಶ ಹೊರಡಿಸಿದ್ದು, ಇದರೊಂದಿಗೆ ಸಮೀಕ್ಷೆ ಅವಧಿ ವಿಸ್ತರಣೆಯೂ ಖಚಿತಗೊಂಡಿದೆ.

ಸಮೀಕ್ಷೆಯ ಅವಧಿ ವಿಸ್ತರಿಸಿರುವ ಮುಂದಿನ ದಿನಗಳಲ್ಲಿ ಶಾಲಾ ತರಗತಿಗಳನ್ನು ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಿರ್ವಹಿಸಿ, ನಂತರದ ಅವಧಿಯಲ್ಲಿ ನಿಯೋಜಿತ ಶಿಕ್ಷಕರು ಸಮೀಕ್ಷಾ ಕಾರ್ಯದಲ್ಲಿ ಭಾಗವಹಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ. ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ■ 6ನೇ ಪುಟಕ್ಕೆ

ಬಿಹಾರ ಚುನಾವಣೆ ಘೋಷಣೆ

ಎರಡು ಹಂತದಲ್ಲಿ ಮತದಾನ; ನ.14ಕ್ಕೆ ಫಲಿತಾಂಶ ಪ್ರಕಟ!

ನವದೆಹಲಿ: ಬಿಹಾರ ವಿಧಾನಸಭೆ ಚುನಾವಣೆ ದಿನಾಂಕವನ್ನು ಕೇಂದ್ರ ಚುನಾವಣಾ ಆಯೋಗ ಘೋಷಿಸಿದ್ದು, ಎರಡು ಹಂತದಲ್ಲಿ ಮತದಾನ ನಡೆಯಲಿದೆ. ನವೆಂಬರ್ 6ರಂದು ಮೊದಲ ಹಂತದ ಮತದಾನ ನಡೆದರೆ, ನವೆಂಬರ್ 11ಕ್ಕೆ ಎರಡನೇ ಹಂತದ ಮತದಾನ ನಡೆಯಲಿದ್ದು ನ.14ಕ್ಕೆ ಫಲಿತಾಂಶ ಹೊರಬೀಳಲಿದೆ. ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್‌ಕುಮಾರ್, ಚುನಾವಣಾ ದಿನಾಂಕ ಘೋಷಿಸಿದರು. 243 ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದ್ದು ರಾಜ್ಯದಲ್ಲಿ 7.43 ಕೋಟಿ ಮತದಾರರಿದ್ದಾರೆ. ಈ ಪೈಕಿ 3.29 ಕೋಟಿ ಪುರುಷ ಮತದಾರರಿದ್ದರೆ, 3.50 ಕೋಟಿ ಮಹಿಳಾ ಮತದಾರರಿದ್ದಾರೆ. ಮೊದಲ ಬಾರಿಗೆ 14 ಲಕ್ಷ ಮತದಾರರು ಮತ ಚಲಾಯಿಸಲಿದ್ದಾರೆ. ನ.6ರಂದು 121 ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಮತದಾನ ನಡೆದರೇ ನ.11ರಂದು 122 ಕ್ಷೇತ್ರಗಳಿಗೆ ಎರಡನೇ ಹಂತದ ನಡೆಯಲಿದೆ.

ನವೆಂಬರ್ ಕ್ರಾಂತಿ ಬರೀ ಭ್ರಾಂತಿ



ಕೊಪ್ಪಳ: ರಾಜ್ಯ ರಾಜಕಾರಣದಲ್ಲಿ ನವೆಂಬರ್‌ನಲ್ಲಿ ಯಾವ ಕ್ರಾಂತಿಯೂ ಇಲ್ಲ, ಭ್ರಾಂತಿಯೂ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಹೇಳಿದ್ದಾರೆ.

ಕೊಪ್ಪಳದ ಬಸಾಪುರ ಲಘು ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನವೆಂಬರ್‌ನಲ್ಲಿ ಕ್ರಾಂತಿಯಾಗಲಿದೆ ಎಂಬ ಬಿಜೆಪಿ ನಾಯಕರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದರು.

ರಾಜ್ಯ ರಾಜಕಾರಣದಲ್ಲಿ ನವೆಂಬರ್‌ನಲ್ಲಿ ಯಾವ ಕ್ರಾಂತಿಯೂ ನಡೆಯಲ್ಲ. ಅವೆಲ್ಲಾ ಭ್ರಾಂತಿಯಷ್ಟೇ ಎಂದರು. ಇದೇ ವೇಳೆ ಜಾತಿ ಸಮೀಕ್ಷೆ ಕುರಿತು ಮಾತನಾಡಿದ ಅವರು, ಜಾತಿ ಸಮೀಕ್ಷೆಯಲ್ಲಿ ಯಾರನ್ನೂ ತುಳಿಯುತ್ತಿಲ್ಲ. ರಾಜ್ಯದಲ್ಲಿ ಸಮಾಜಿಕ, ಆರ್ಥಿಕ ಗಣತಿ ಆಗಬೇಕಿದೆ. ಈ ಸಮೀಕ್ಷೆ ಮಾಡದೇ ಹೋದರೆ ನಮಗೆ ಯಾವ ದತ್ತಾಂಶ ಸಿಗಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಜನರಿಗೆ ಉದ್ಯೋಗ ಸಿಕ್ಕಿದೆಯಾ, ಶಿಕ್ಷಣ ದೊರೆತಿದೆಯಾ ಎನ್ನುವುದನ್ನು ನಾವು ತಿಳಿಯಬೇಕಿದೆ.

ಇದನ್ನೆಲ್ಲಾ ಹೇಗೆ ತಿಳಿಯುವುದು. ಸಮೀಕ್ಷೆ ಮಾಡುವುದರಿಂದ ಈ ದತ್ತಾಂಶ ನಮಗೆ ಸಿಗಲಿದೆ. ರಾಜ್ಯದ ಸಮಾಜಿಕ ಹಾಗೂ ಆರ್ಥಿಕ ಸ್ಥಿತಿ ಗತಿಗಳ ಅಂಕಿ ಅಂಶ ನಮಗೆ ಬೇಕಾಗಿದೆ. ನಾವು ಯಾವುದೇ ■ 6ನೇ ಪುಟಕ್ಕೆ

ಸಿಲ್ಕ್ ಇಂಡಿಯಾ ಪ್ರದರ್ಶನ, ಮಾರಾಟ ಮೇಳಕ್ಕೆ ಚಾಲನೆ



ಸಿಲ್ಕ್ ಇಂಡಿಯಾ ರೇಷ್ಮೆ ಸೀರೆಗಳ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ನಟಿ ಎಂ.ಜೆ.ಭವ್ಯ ಚಾಲನೆ ನೀಡಿದರು.

ಮೈಸೂರು, ಅ.6(ಎಂಕೆ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಅ.15ರವರೆಗೆ ಏರ್ಪಡಿಸಿರುವ ಪರಿಶುದ್ಧ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟದ 'ಸಿಲ್ಕ್ ಇಂಡಿಯಾ–2025' ಮೇಳಕ್ಕೆ ಸೋಮವಾರ ಚಾಲನೆ ನೀಡಲಾಯಿತು. ಸ್ಯಾಂಡಲ್‌ವುಡ್ ನಟಿ ಎಂ.ಜೆ.ಭವ್ಯ, ಟೇಪ್ ಕತ್ತರಿಸಿ, ದೀಪ ಬೆಳಗಿಸಿ ರೇಷ್ಮೆ ಸೀರೆಗಳನ್ನು ವೀಕ್ಷಣೆ ಮಾಡುವ ಮೂಲಕ ಮೇಳಕ್ಕೆ ಚಾಲನೆ ನೀಡಿದರಲ್ಲದೆ ಮೈಸೂರಿನ ಜನತೆ ಸಿಲ್ಕ್ ಇಂಡಿಯಾ ಮೇಳದ ಸದುಪಯೋಗ ಪಡೆದುಕೊಳ್ಳುವಂತೆ ಕೋರಿದರು.

ಮೇಳದಲ್ಲಿ 19 ರಾಜ್ಯಗಳ 55 ಮಳಿಗೆಗಳಿದ್ದು, 77ಕ್ಕೂ ಹೆಚ್ಚು ಕುಶಲಕರ್ಮಿಗಳು ಭಾಗವಹಿಸಿದ್ದಾರೆ. ವಾತಾವರಣಕ್ಕೆ ಅನುಗುಣವಾಗಿ ಅಸ್ಸಾಂ, ಬಿಹಾರ ಮತ್ತು ಛತ್ತೀಸ್‌ಗಢ್‌ನ ತಸ್ಸರ್, ಎರಿ, ಮುಲ್ಬಾರಿ ಮತ್ತು ಮುಗಾ ರೇಷ್ಮೆ ಸೀರೆಗಳು ಪ್ರಮುಖ ಆಕರ್ಷಣೆಯಾಗಿವೆ.

ಹಾಗೆಯೇ ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ರೇಷ್ಮೆ ಸೀರೆಗಳು, ಧರ್ಮಾವರಂ, ಕಾಂಚಿಪುರಂ ಸಿಲ್ಕ್, ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಕೊಲ್ಕೊತ್ತಾ ಗಣಪತಿ ಸೀರೆಗಳು, ಢಾಕ ಸೀರೆಗಳು, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಬಲ್ಲೂರಿ ರೇಷ್ಮೆ, ಮಟ್ಕಾ ಸೀರೆಗಳು, ಪ್ರಿಂಟೆಡ್ ಸೀರೆಗಳು, ಪಶ್ಮೀನಾ ಸೀರೆಗಳು, ಡಿಸೈನರ್ ಡ್ರೆಸ್ ಮೇಟಿರಿಯಲ್‌ಗಳು ಮತ್ತು ಸೀರೆಗಳು, ಬಾಗಲ್ಪುರ್ ರೇಷ್ಮೆ ಸೀರೆ ಮತ್ತು ಡ್ರೆಸ್, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಹೇಶ್ವರಿ ಮತ್ತು ಕೋಟಾ ಸಿಲ್ಕ್, ಟೆಂಪಲ್ ಬಾರ್ಡರ್ ಉಳ್ಳ ಮುಲ್ಬಾರಿ ಸಿಲ್ಕ್, ಕೊಲ್ಕೋತ್ತಾ ರೇಷ್ಮೆ ಸೀರೆಗಳು, ಬನಾರಸ್ ಮತ್ತು ಜಮದಾನಿ ರೇಷ್ಮೆ, ಶಿಫಾನ್ ಸೀರೆಗಳು, ಬುಟ್ಟಿ ಸೀರೆಗಳು, ಚಂದೇರಿ ಸಿಲ್ಕ್ ಮತ್ತು ಕೈ ಅಚ್ಚಿನ ಸೀರೆಗಳು ಪ್ರದರ್ಶನಗೊಳ್ಳಲಿದೆ. ಇದಲ್ಲದೆ ಕುರ್ತಾ, ಸ್ಟೋಲ್ಸ್, ಶಾಲುಗಳು, ಸಲ್ವಾರ್ ಕಮೀಜ್ ಮತ್ತು ಉಡುಪಿನ ಬಟ್ಟೆಗಳು, ಕುಶನ್ ಕವರ್‌ಗಳು ಮತ್ತು ಬೆಡ್ ಶೀಟ್‌ಗಳು ಲಭ್ಯವಿವೆ. ವ್ಯವಸ್ಥಾಪಕ ಅಭಿನಂದನ್ ಉಪಸ್ಥಿತರಿದ್ದರು.

ಮಣಿಪಾಲ್ ಆಸ್ಪತ್ರೆಯಲ್ಲಿ ಹೃದ್ರೋಗಶಾಸ್ತ್ರದ ಮೇಲೆ ಕೇಂದ್ರೀಕರಿಸಿದ ವಿಶೇಷ ಸಂವಾದಾತ್ಮಕ ಅಧಿವೇಶನ



ವಿಶ್ವ ಹೃದಯ ದಿನದ ಅಂಗವಾಗಿ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ತಡೆಗಟ್ಟುವ (ಪ್ರಿವೆಂಟಿವ್) ಹೃದ್ರೋಗಶಾಸ್ತ್ರದ ಮೇಲೆ ಕೇಂದ್ರೀಕರಿಸಿದ ವಿಶೇಷ ಸಂವಾದಾತ್ಮಕ ಅಧಿವೇಶನ ಯೋಜಿಸಲಾಗಿತ್ತು.

ಮೈಸೂರು,ಅ.6–ವಿಶ್ವ ಹೃದಯ ದಿನದ ಅಂಗವಾಗಿ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಭಾನುವಾರ ತಡೆಗಟ್ಟುವ (ಪ್ರಿವೆಂಟಿವ್) ಹೃದ್ರೋಗಶಾಸ್ತ್ರದ ಮೇಲೆ ಕೇಂದ್ರೀಕರಿಸಿದ ವಿಶೇಷ ಸಂವಾದಾತ್ಮಕ ಅಧಿವೇಶನ ಯೋಜಿಸಲಾಗಿತ್ತು.

ವರ್ಷದ ಜಾಗತಿಕ ಧ್ಯೇಯವಾಕ್ಯವಾದ 'ಡೋಂಟ್ ಮಿಸ್ ಎ ಬೀಟ್ (ಒಂದು ಮಿಡಿತವನ್ನು ತಪ್ಪಿಸಿಕೊಳ್ಳಬೇಡಿ)'ಗೆ ಅನುಗುಣವಾಗಿ, ಈ ಕಾರ್ಯಕ್ರಮವು ನಿರಂತರ ಜಾಗರೂಕತೆ, ನಿಯಮಿತ ತಪಾಸಣೆ ಮತ್ತು ಹೃದಯ–ಆರೋಗ್ಯಕರ ಅಭ್ಯಾಸಗಳ ಮೂಲಕ ಹೃದಯದ ಆರೋಗ್ಯದ ಅಪಾಯಗಳು ಮತ್ತು ರೋಗಗಳ ತಡೆಗಟ್ಟುವಿಕೆ ಕುರಿತು ಮಾಹಿತಿ ನೀಡಲಾಯಿತು.

ಹೃದಯರಕ್ತನಾಳೀಯ ಕಾಯಿಲೆಯು ವಿಶ್ವದಾದ್ಯಂತ ಸಾವಿಗೆ ಪ್ರಮುಖ ಕಾರಣವಾಗಿದೆ. ಆದರೆ ಸಂಶೋಧನೆಯು 80%ರಷ್ಟು ಅಕಾಲಿಕ ಹೃದಯ ಕಾಯಿಲೆ ಮತ್ತು ಪಾರ್ಶ್ವವಾಯುಗಳನ್ನು ಸರಳ ಜೀವನ ಶೈಲಿ ಬದಲಾವಣೆಗಳು, ಆರಂಭಿಕ ಹಸ್ತಕ್ಷೇಪದ ಮೂಲಕ ತಡೆಗಟ್ಟಬಹುದು ಎಂದು ಮೈಸೂರಿನ ಮಣಿಪಾಲ್ ಆಸ್ಪತ್ರೆ ಪ್ರಮುಖ ತಜ್ಞ ಡಾ.ಉಪೇಂದ್ರ ಶೆಣೈ ತಿಳಿಸಿದರು.

ಇದೇ ವೇಳೆ ಪರಿಧಮನಿಯ ಅಪಧಮನಿಯ ಅಡಚಣೆಯ ಪ್ರಮಾಣವನ್ನು ಆಧರಿಸಿ ಶಿಫಾರಸು ಮಾಡಲಾದ ಆಂಜಿಯೋಪ್ಲಾಸ್ಟಿ ಮತ್ತು ಬೈಪಾಸ್ ಸರ್ಜರಿಯಂತಹ ಪ್ರಮುಖ ಚಿಕಿತ್ಸಾ ಆಯ್ಕೆಗಳ ಬಗ್ಗೆಯೂ ಚರ್ಚಿಸಲಾಯಿತು.

ಕನ್ಸಲ್ಟೆಂಟ್–ಕಾರ್ಡಿಯೋ ಥೊರಾಸಿಕ್ ಮತ್ತು ವಾಸ್ಕ್ಯುಲರ್ ಶಸ್ತ್ರಚಿಕಿತ್ಸೆ, ಡಾ.ಕೇಶವಮೂರ್ತಿ ಸಿ.ಬಿ, ಹಿರಿಯ ಕನ್ಸಲ್ಟೆಂಟ್–ಇಂಟರ್ವೆನ್ಷನಲ್ ಕಾರ್ಡಿಯಾಲಜಿ, ಡಾ.ಶರತ್‌ಬಾಬು ಕನ್ಸಲ್ಟೆಂಟ್–ಇಂಟರ್ವೆನ್ಷನಲ್ ಕಾರ್ಡಿಯಾಲಜಿ, ಹಾಗೂ ಕಾವ್ಯಾ ಜೆ ಹಿರಿಯ ಆಹಾರ ತಜ್ಞೆ ಸೇರಿದಂತೆ ಇನ್ನಿತರರು ಅಧಿವೇಶನದಲ್ಲಿ ಉಪಸ್ಥಿತರಿದ್ದರು.

ಆರ್‌ಎಸ್‌ಎಸ್ ಪ್ರಜಾಪ್ರಭುತ್ವ, ಜಾತ್ಯಾತೀತ ವಿರೋಧಿ

ಮಾಜಿ ಸಚಿವ ಬಿ.ಕೆ.ಚಂದ್ರಶೇಖರ್ ಕಿಡಿ

ಮೈಸೂರು,ಅ.6(ಎಂಕೆ)– ಆರ್‌ಎಸ್‌ಎಸ್‌ನ 100ನೇ ವರ್ಷದ ಸಂಭ್ರಮಾಚರಣೆಗೆ ವಿರೋಧ ವ್ಯಕ್ತಪಡಿಸಿರುವ ಕಾಂಗ್ರೆಸ್ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಬಿ.ಕೆ. ಚಂದ್ರಶೇಖರ್, ಕೇಂದ್ರದಲ್ಲಿರುವ ಬಿಜೆಪಿ ಪಕ್ಷ ಆರ್‌ಎಸ್‌ಎಸ್‌ನ ನೂರನೇ ವರ್ಷದ ಆಚರಣೆ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಹೇಳಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಆರ್‌ಎಸ್‌ಎಸ್ ಪ್ರಜಾ ಪ್ರಭುತ್ವ ಮತ್ತು ಜಾತ್ಯಾತೀತ ವಿರೋಧಿಯಾಗಿದ್ದು, ಹಿಂದುತ್ವವೇ ಅದರ ಮೂಲ ಅಜೆಂಡಾವಾಗಿದೆ. ಸಾವರ್ಕರ್, ಹೆಗ್ಗಡೆವಾರ್ ಅವರನ್ನು ಹಿಂದುತ್ವದ ನಾಯಕರೆಂದು ಬಿಂಬಿಸಿ, ಇಡೀ ದೇಶವನ್ನು ಹಿಂದೂ ರಾಷ್ಟ್ರವಾಗಿಸುವ ಗುರಿ ಹೊಂದಿದೆ ಎಂದರು.

ಪ್ರಧಾನಿಗಳ ಕೈಗೊಂಬೆ: ಪ್ರಧಾನಿ ನರೇಂದ್ರ ಮೋದಿ ಅವರು, ಚುನಾವಣಾ ಆಯೋಗಕ್ಕೆ ಮುಖ್ಯ ಆಯುಕ್ತರನ್ನು ನೇಮಕ ಮಾಡುವ ಸಮಿತಿಯಲ್ಲಿದ್ದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯ ಮೂರ್ತಿಗಳನ್ನು ಹೊರಗಿಟ್ಟು, ಕೇಂದ್ರದ ಸಚಿವರನ್ನು ಸಮಿತಿಗೆ ಸೇರ್ಪಡೆಗೊಳಿಸುವ ಮೂಲಕ ಚುನಾವಣಾ ಆಯೋಗವನ್ನು ತಮ್ಮ ಕೈಗೊಂಬೆಯನ್ನಾಗಿಸಿಕೊಳ್ಳುವ ಮೂಲಕ ಚುನಾವಣಾ ಆಯೋಗದ ಸ್ವಾತಂತ್ರ್ಯವನ್ನು ಹರಣ ಮಾಡಲಾಗಿದೆ ಎಂದು ದೂರಿದರು.



ಚಂದ್ರಶೇಖರ್

ಸಮೀಕ್ಷೆಗೆ ವಿರೋಧ ಸರಿಯಲ್ಲ: ರಾಜ್ಯದಲ್ಲಿ ನಡೆಯುತ್ತಿರುವ ಸಾಮಾಜಿಕ–ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಬಿಜೆಪಿ ಸೇರಿದಂತೆ ಇತರೇ ಪಕ್ಷಗಳು ವಿರೋಧ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ. ಸಮೀಕ್ಷೆಯಲ್ಲಿ ಜಾತಿಯ ಮಾಹಿತಿ ಜೊತೆಗೆ ಕುಟುಂಬದ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ಕೂಡ ಆಗಲಿದೆ. ಇದು ಕೇವಲ ಜಾತಿ ಸಮೀಕ್ಷೆಯಲ್ಲ. ಹಾಗಾಗಿ ಜನತೆ ಗಣತಿದಾರರರಿಗೆ ಮಾಹಿತಿ ನೀಡುವ ಮೂಲಕ ಸಮೀಕ್ಷೆಗೆ ನೆರವಾಗಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ನಗರ ವಕ್ತಾರ ಮಹೇಶ್ ಇತರರು ಉಪಸ್ಥಿತರಿದ್ದರು.

ಸಂದರ್ಶನಕ್ಕೆ ಆಹ್ವಾನ

ಮೈಸೂರು,ಅ.6– ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿನ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ತಾತ್ಕಾಲಿಕ ಪ್ಲೇಸ್‌ಮೆಂಟ್ ಆಫೀಸರ್ ಹಾಗೂ ತಾತ್ಕಾಲಿಕ ಲ್ಯಾಬ್ ಇನ್‌ಸ್ಟ್ರಕ್ಟರ್ ಹುದ್ದೆಗೆ ನೇಮಕಾತಿ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳನ್ನು ತಮ್ಮ ಅರ್ಜಿಗಳೊಂದಿಗೆ ಅ.10ರಂದು ನಡೆಯಲಿರುವ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ. ಆಸಕ್ತರು ವಿವರ ಮತ್ತು ನಿಗದಿತ ಅರ್ಜಿ ನಮೂನೆಗಳನ್ನು ಮೈಸೂರು ವಿವಿ ವೆಬ್‌ಸೈಟ್ www. uni-mysore.ac.in ನಲ್ಲಿ ಪಡೆಯಬಹುದಾಗಿರುತ್ತದೆ ಎಂದು ವಿವಿ ಆಡಳಿತ ಉಪ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅ.18ಕ್ಕೆ ಯಾದಗಿರಿಯಲ್ಲಿ ರೈತ ಸಮಾವೇಶ

ಮೈಸೂರು, ಅ.6(ಎಂಕೆ)– ರಾಜ್ಯದಲ್ಲಿ ಬರ ಮತ್ತು ನೆರೆ ಸಮಸ್ಯೆಯಿಂದ ರೈತರು ಬಳಲುತ್ತಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರ ರೈತರ ಎಲ್ಲಾ ಬೆಳೆ ಸಾಲ ಮನ್ನಾ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅ.18ರಂದು ಯಾದಗಿರಿಯಲ್ಲಿ ರೈತ ಸಮಾವೇಶ ಆಯೋಜಿಸಲಾಗಿದೆ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಹವಾಮಾನ ವೈಪರೀತ್ಯ, ಋತುಮಾನಗಳಲ್ಲಿನ ಬದಲಾವಣೆಯಿಂದಾಗಿ ರೈತರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕಳೆದ 23 ವರ್ಷದಲ್ಲಿ 17 ವರ್ಷ ಅತಿವೃಷ್ಟಿ, 4 ವರ್ಷ ಬರ ಅನುಭವಿಸಿರುವ ರೈತರು ನೀರಿನ ಸಮಸ್ಯೆ, ಬಿತ್ತನೆ ಬೀಜದ ಸಮಸ್ಯೆ ಎದುರಿಸುತ್ತಿದ್ದಾರೆ. ಬೆಳೆ ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ನೀಡುವಲ್ಲಿ ಅನುಸರಿಸುತ್ತಿರುವ ಮಾನದಂಡ ಸರಿ ಇಲ್ಲ. ಆಗಷ್ಟೇ ಮೊಳಕೆಯೊಡೆದು ನಾಶವಾದರೆ ಪರಿಹಾರ ನೀಡುವುದಿಲ್ಲ ಎಂಬ ನಿಯಮದಿಂದ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರ ಬೆಳೆಯ ಸಂಪೂರ್ಣ ಸಾಲಮನ್ನಾ ಮಾಡಬೇಕು. ಬೆಳೆ ನಷ್ಟ ಅನುಭವಿಸಿದ ರೈತರಿಗೆ ಎಕರೆಗೆ 50 ಸಾವಿರ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ರೈತ ಮುಖಂಡ ಹೊಸಕೋಟೆ ಬಸವರಾಜು ಮತ್ತಿತರರಿದ್ದರು.



ನಾಗೇಂದ್ರ

ಪಿಎಚ್.ಡಿ ಪದವೀಧರರು



ಬಿ.ಎಂ.ದರ್ಶನ್

ಮೈಸೂರು,ಅ.6–ಡಾ.ಕಲ್ಯಾಣಿ ಸುರೇಶ್ ಅವರ ಮಾರ್ಗದರ್ಶನದಲ್ಲಿ ಬಿ.ಎಂ.ದರ್ಶನ್ ಅವರು ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮದಲ್ಲಿ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧಕ್ಕೆ ಅಮೃತ ವಿಶ್ವವಿದ್ಯಾಪೀಠಂ ಪಿಹೆಚ್‌ಡಿ ಪದವಿ ನೀಡಿದೆ. ಇತ್ತೀಚೆಗೆ ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆದ ಅಮೃತ ವಿಶ್ವವಿದ್ಯಾಪೀಠಂನ ಘಟಿಕೋತ್ಸವದಲ್ಲಿ ಕೇಂದ್ರ ಕಾನೂನು ಹಾಗೂ ನ್ಯಾಯ ಸಚಿವ ಅರ್ಜುನ್‌ರಾಮ್ ಮೇಘವಾಲ್ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು.



ಎಂ.ಎಂ. ಕಲ್ಪಶ್ರೀ

ಡಾ. ಕೆ.ಕೃಷ್ಣ ಅವರ ಮಾರ್ಗದರ್ಶನದಲ್ಲಿ ಎಂ.ಎಂ. ಕಲ್ಪಶ್ರೀ ಅವರು ಸಸ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ, ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಶ್ವದ ಅಗ್ರ ಶೇ.2 ವಿಜ್ಞಾನಿಗಳಲ್ಲಿ ಅಮೃತ ವಿಶ್ವವಿದ್ಯಾಪೀಠಂನ ಡಾ.ಶಿವಪ್ರಸಾದ್ ಸೇರ್ಪಡೆ

ಮೈಸೂರು, ಅ.6–ಅಮೃತ ವಿಶ್ವವಿದ್ಯಾಪೀಠಂ, ಮೈಸೂರು ಕ್ಯಾಂಪಸ್‌ನ ವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕ ಡಾ.ಶಿವಪ್ರಸಾದ್ ಕೆ. ಅವರು ಎಲ್ಸ್‌ವಿಯರ್ ಮತ್ತು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ವಿಶ್ವದ ಅಗ್ರ ಶೇ.2 ವಿಜ್ಞಾನಿಗಳಲ್ಲಿ ಸ್ಥಾನ ಪಡೆದಿದ್ದಾರೆ. ಈ ಪ್ರತಿಷ್ಠಿತ ಮನ್ನಣೆಯು 2025ನೇ ವರ್ಷದ ದತ್ತಾಂಶವನ್ನು ಆಧರಿಸಿ ಪ್ರಕಟಿಸಲಾಗಿದೆ.

ಡಾ.ಶಿವಪ್ರಸಾದ್ ಅವರ ಮುಖ್ಯ ಸಂಶೋಧನಾ ಕ್ಷೇತ್ರ ರಸಾಯನಶಾಸ್ತ್ರ, ಅಜೈವಿಕ ಮತ್ತು ವಸ್ತು ರಸಾಯನಶಾಸ್ತ್ರವಾಗಿದ್ದು, ದತ್ತಾಂಶದ ಪ್ರಕಾರ, ಅವರು ಜಾಗತಿಕವಾಗಿ 226072 ಶ್ರೇಣಿ ಪಡೆದಿದ್ದಾರೆ. ತಮ್ಮ ಸಂಶೋಧನಾ ಕ್ಷೇತ್ರದಲ್ಲಿ 992 ಶ್ರೇಣಿ, 10 h-index ಮತ್ತು 4 hm-index ಅನ್ನು ಹೊಂದಿದ್ದಾರೆ.

ಈ ಮನ್ನಣೆಯು ಡಾ.ಶಿವಪ್ರಸಾದ್ ಅವರ ವೈಜ್ಞಾನಿಕ ಸಂಶೋಧನೆಗೆ ನೀಡಿದ ಮಹತ್ವದ ಕೊಡುಗೆಗಳನ್ನು ಮತ್ತು ರಸಾಯನಶಾಸ್ತ್ರ ಕ್ಷೇತ್ರದಲ್ಲಿ ಅವರ ಹೆಚ್ಚುತ್ತಿರುವ ಪ್ರಭಾವಕ್ಕೆ ಸಾಕ್ಷಿಯಾಗಿದೆ. ಅವರ ಸಾಧನೆಯು ಅಮೃತ ವಿಶ್ವವಿದ್ಯಾಪೀಠಂಗೆ ಮಾತ್ರವಲ್ಲದೆ ಮೈಸೂರಿನ ಶೈಕ್ಷಣಿಕ ಮತ್ತು ಸಂಶೋಧನಾ ಸಮುದಾಯಕ್ಕೂ ಹೆಮ್ಮೆ ತಂದಿದೆ.



ಡಾ.ಶಿವಪ್ರಸಾದ್

ನಿಧನ



ಸುಷ್ಮಾ

ಮೈಸೂರು,ಅ.6–ಮೈಸೂರಿನ ವಿನಾಯಕನಗರ 5ನೇ ಮೇನ್, 6ನೇ ಕ್ರಾಸ್ ನಿವಾಸಿ ಆರ್.ರವಿ ಅವರ ಪತ್ನಿ ಸುಷ್ಮಾ (36) ಅವರು ಅಲ್ಪಕಾಲದ ಅಸ್ವಸ್ಥತೆಯಿಂದ ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಪತಿ, ಒರ್ವ ಪುತ್ರಿ ಮತ್ತು ಸ್ನೇಹಿತರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಸೋಮವಾರ ಬೆಳಗ್ಗೆ ನಗರದ ಗೋಕುಲಂ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಬಸವರಾಜ್

ಮೈಸೂರು: ಮೈಸೂರಿನ ಯಾದವಗಿರಿ ನಿವಾಸಿ, ಕೈಗಾರಿಕೋದ್ಯಮಿ ಬಸವರಾಜ್(68) ಅವರು ಸೋಮವಾರ ನಿಧನರಾದರು. ಮೃತರು ಪತ್ನಿ, ಪುತ್ರಿ ಅಗಲಿದ್ದು, ಇಲವಾಲದಲ್ಲಿರುವ ಗೋಲ್ಡನ್ ಕಜ್ಡ್ ವೆಲ್‌ನೆಸ್ ರೆಸಾರ್ಟ್‌ನಲ್ಲಿ ಮಂಗಳವಾರ ಬೆಳಗ್ಗೆ 10 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಅನ್ವರಿ ಬೇಗಂ

ಮೈಸೂರು: ಮೈಸೂರಿನ ವಿವಿ ಮೊಹಲ್ಲಾ ಆದಿಪಂಪ ರಸ್ತೆ ನಿವಾಸಿ ಶಫಿ ಅಹಮದ್ ಅವರ ಪತ್ನಿ ಅನ್ವರಿ ಬೇಗಂ(86) ಸೋಮವಾರ ನಿಧನರಾದರು. ಮೃತರು ಪುತ್ರ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಟಿಪ್ಪು ಸರ್ಕಲ್ ಬಳಿ ಇರುವ ಮುಸ್ಲಿಂ ಖಬರಸ್ತಾನದಲ್ಲಿ ಇಂದು ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಆರ್ಚಿ ಡಿ'ಸಿಲ್ವಾ

ಮೈಸೂರು: ಮೈಸೂರಿನ ರೈತ ಆರ್ಚಿ ಡಿ'ಸಿಲ್ವಾ(58) ಅವರು ಭಾನುವಾರ ನಿಧನರಾಗಿದ್ದು, ಮೃತರು ಪುತ್ರ–ಪುತ್ರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ನಾಳೆ (ಮಂಗಳವಾರ) ಸಂಜೆ 4 ಗಂಟೆಗೆ ಬೆಳವಾಡಿಯಲ್ಲಿರುವ ಕ್ರೈಸ್ತರ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.10.2025 ಮಂಗಳವಾರ, ಮಳೆ ನಕ್ಷತ್ರ: ಹಸ್ತ 27.09.2025 ರಿಂದ 10.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಹುಣ್ಣಿಮೆ, ಬೆಳಗ್ಗೆ ಸತ್ಯನಾರಾಯಣ ಪೂಜೆ, ಸಾಯಂಕಾಲ ಗರುಡೋತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಲಕ್ವ, ಪ್ಯಾರಲಿಸಿಸ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹ ರೋಗಿಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ : ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಶೃಂಗೇರಿ ಶ್ರೀ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025, ಪೂರ್ಣಿಮಾ, ಶ್ರೀ ಭುವನೇಶ್ವರಿ ಅಲಂಕಾರ, ಶ್ರೀ ಕುಬೇರಲಕ್ಷ್ಮೀ ಹೋಮ, ಸ್ಥಳ: ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ, ಬೆಳಗ್ಗೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಬಿಳಿಮುಟ್ಟು, ಮೂಗು ಕಟ್ಟುವುದು, ಮೂಗು ಸುರಿಯುವುದು, ಮೂಗಿನಿಂದ ರಕ್ತ ಬರುವುದು, ಮೂಗಿನಲ್ಲಿ ದುರ್ಮಾಂಸ, ಸೀನುವಿಕೆ, ಕೆಂಪುಕಣ್ಣುಗಳು, ಮೂಗು, ಗಂಟಲು, ಕಣ್ಣುಗಳು ಮತ್ತು ಬಾಯಿಯಲ್ಲಿ ತುರಿಕೆ, ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10 ರಿಂದ.

■ **ಶ್ರೀ ಕಾವೇರಿ ಕೊಡಗು ಮಹಿಳಾ ಸಂಘ :** 19ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷರಾದ ಶ್ರೀಮತಿ ಕೊಲ್ಲಿರ ಬೊಳ್ಳಮ್ಮ ಕುಟ್ಟಪ್ಪ, ಸ್ಥಳ: ಕೊಡವ ಸಮಾಜದ ಆವರಣ, ವಿಜಯನಗರ, ಬೆಳಗ್ಗೆ 10.30ಕ್ಕೆ.

■ **ವ್ಯವಸ್ಥಾಪಕರು:** ದಸರಾ ಕೇಕ್ ಶೋ–2025, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್, ಮಹಾರಾಜ ಮೈದಾನದ ಪಕ್ಕ, ಬೆಳಗ್ಗೆ 11 ರಿಂದ.

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಮೈಸೂರು ನಗರ ಮತ್ತು ತಾಲೂಕು ನಾಯಕ ಜನಾಂಗದ ಸಂಘ :** ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಶಾಸಕ ಕೆ.ಹರೀಶ್‌ಗೌಡ, ಉಪಸ್ಥಿತರು : ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಅನಿಲ್‌ಕುಮಾರ್, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷೆ ಡಾ.ಪುಷ್ಪಅಮರನಾಥ್ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಮುಖ್ಯ ಅತಿಥಿಗಳು : ಸಂಸದರಾದ ಯದುವೀರ್ ಒಡೆಯರ್ ಹಾಗೂ ಸುನೀಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಡಿ.ರವಿಶಂಕರ್, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ, ಎಸ್, ಕೆ.ವಿವೇಕಾನಂದ, ಕೆ.ಶಿವಕುಮಾರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಹಿರಿಯ ಕಾನೂನು ಸಹಾಯಕ ಪ್ರಾಧ್ಯಾಪಕ ಡಾ.ರಂಗಸ್ವಾಮಿ, ಸ್ಥಳ: ಕಲಾಮಂದಿರ, ಮಧ್ಯಾಹ್ನ 12.30ಕ್ಕೆ.

■ **ಶ್ರೀ ಅಮೃತೇಶ್ವರ ದೇವಸ್ಥಾನ :** ಶ್ರೀ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠದ ಉಭಯ ಜಗದ್ಗುರುಗಳ ಅನುಗ್ರಹಗಳೊಂದಿಗೆ ಶರನ್ನವರಾತ್ರಿ ಪ್ರಯುಕ್ತ 75ನೇ ವರ್ಷದ ಸಹಸ್ರ ಚಂಡೀ ಮಹಾಯಾಗ, ವಿಸ್ತಾರ ಸಹಸ್ರಚಂಡಿ ಅಮೃತ ಮಹೋತ್ಸವ, ಹುಣ್ಣಿಮೆಯಂದು ವಿಸ್ತಾರ ಸಹಸ್ರ ಚಂಡಿಕಾಯಾಗದ ಅಮೃತ ಮಹೋತ್ಸವದ ಪೂರ್ಣಾಹುತಿ, ಮಹಾಮಂಗಳಾರತಿ, ರಾಷ್ಟ್ರಾಶೀರ್ವಾದ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಮೃತೇಶ್ವರ ದೇವಸ್ಥಾನ.

■ **ಡಯೋಸಿಸ್ ಆಫ್ ಮೈಸೂರು :** ಮೈಸೂರು ಧರ್ಮಪ್ರಾಂತ್ಯದ ನೂತನ ಬಿಷಪ್ (ಧರ್ಮಾಧ್ಯಕ್ಷ) ಆಗಿ ಡಾ. ಫ್ರಾನ್ಸಿಸ್ ಸೆರಾವೋ ಅಧಿಕಾರ, ಉಪಸ್ಥಿತರು : ಬೆಂಗಳೂರಿನ ಆರ್ಚ್ ಬಿಷಪ್ ಡಾ.ಪೀಟರ್ ಮಚಾಡೊ ಹಾಗೂ ಭಾರತ ಮತ್ತು ನೇಪಾಳದ ಅಪೋಸ್ಟೋಲಿಕ್ ಬೋಧಕ ಡಾ. ಲಿಯೋಪೋಲ್ಡೊ ಗಿರೆಲ್ಲಿ, ಅಧ್ಯಕ್ಷತೆ : ಭಾರತ ಮತ್ತು ನೇಪಾಳದ ಅಪೋಸ್ಟೋಲಿಕ್ ಬೋಧಕ ಡಾ. ಲಿಯೋಪೋಲ್ಡೊ ಗಿರೆಲ್ಲಿ, ಸ್ಥಳ: ಸೇಂಟ್ ಜೋಸೆಫ್ ಕೆಥೆಡ್ರಲ್, ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ, ಸಂಜೆ 4.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ– ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಎಂ.ಡಿ. ಸುಮತಿ ಮುರಾರಿ ಹಾಗೂ ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಕೆ. ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್, 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು, ವಿಜ್ಞಾನ ಕ್ಷೇತ್ರದಲ್ಲಿನ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆಯ ವಿಶ್ರಾಂತ ನಿರ್ದೇಶಕರಾದ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್ ಅವರೊಂದಿಗೆ ಸಂವಾದ. ಭಾಗವಹಿಸುತ್ತಾರೆ– ಉಮೇಶ್ ಎಸ್.ಎಸ್., 9.00 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ–ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, ಆರ್.ಲೋಕೇಶ್ವರಿ ಹಾಗೂ ಬಿ.ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಕಥಾಕಾಲಕ್ಷೇಪ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ– ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಪಂಜರದಲ್ಲಿ ಮೀನು ಸಾಕಾಣಿಕೆ ಈ ಕುರಿತು ಪಾಂಡವಪುರ ತಾಲ್ಲೂಕು, ಅಂತನ ಹಳ್ಳಿಯ ಟಿ.ಬಿ. ಪ್ರಶಾಂತ್ ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು –ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ನಾಟಕ –ಕುಟುಂಬಾಯಣ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

■ **ಸಾಧನಾ ಮಂದಿರ :** ಸರಸ್ವತಿ ಪೂಜಾ, ಸಂಜೆ 4.45 ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6 ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷದ್, ರಂಗಭೂಮಿ ಟ್ರಸ್ಟ್, ಕೊಡಗು :** ಅಡ್ಡಂಡ ಕಾರ್ಯಪ್ಪ ಅವರ ನಿಜಮಹಾತ್ಮ ಬಾಬಾ ಸಾಹೇಬ ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಲೋಕಾರ್ಪಣೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೃತಿ ಕುರಿತು : ಸಾಮಾಜಿಕ ಕಾರ್ಯಕರ್ತ ವಾದಿರಾಜ್, ಉಪಸ್ಥಿತರು : ಹಿರಿಯ ಸಮಾಜ ಸೇವಕ ವೆಂಕಟರಾಮ್, ಆದಿತ್ಯ ಆಸ್ಪತ್ರೆ ಆಡಳಿತಾಧಿಕಾರಿ ಡಾ. ಚಂದ್ರಶೇಖರ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 5.30ಕ್ಕೆ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು:** ಬೆಳದಿಂಗಳ ಸಂಗೀತ–284, ಪಂಡಿತ್ ಪ್ರವೀಣ್ ಗೋಡ್ಖಿಂಡಿ (ಬಾನ್ಸುರಿ) ಮತ್ತು ವಿದ್ವಾನ್ ಆರ್. ಕುಮರೇಶ್ (ವಯೋಲಿನ್) ಅವರಿಂದ ಜುಗಲ್‌ಬಂದಿ, ವಿದ್ವಾನ್ ಅರ್ಜುನ್‌ಕುಮಾರ್ (ಮೃದಂಗ), ಪಂಡಿತ್ ರವೀಂದ್ರ ಯಾವಗಲ್ (ತಬಲ), ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ದೀಕ್ಷಿತ್ ಆರೋಗ್ಯ ಧಾಮ:** ಹುಣ್ಣಿಮೆ ವಿಶೇಷ ಮಾಸದ ಪ್ರಯುಕ್ತ ಆನಂದ ಆರೋಗ್ಯ ಕಾರ್ಯಕ್ರಮ, ವಿದುಷಿ ಹೆಚ್.ಸಿ. ಭಾರತಿ ಅವರಿಂದ ಸುಗಮ ಸಂಗೀತ, ಕಲಾಶ್ರೀ ಗಣೇಶ್ ಭಟ್–ಕೀಬೋರ್ಡ್, ವಿದ್ವಾನ್ ಮೈಸೂರು ನಾಗರಾಜ್–ತಬಲಾ, ವಿದ್ವಾನ್ ಅರುಣ್ ಕುಮಾರ್–ರಿದಂ ಪ್ಯಾಡ್, ಡಾ. ಅಜಯ್ ಕೌಶಿಕ್ ಅವರಿಂದ ಮಂಡಿ ನೋವಿಗೆ ಕಾರಣಗಳು ಹಾಗೂ ಚಿಕಿತ್ಸೆ ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ:** ಸಂಜೆ 6ಕ್ಕೆ ತಿಂಗಳ ತಿಳಿವು ಕಾರ್ಯಕ್ರಮ, ಸಾನ್ನಿಧ್ಯ: ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ತಿಂಗಳ ಅತಿಥಿ: ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಆಯುಕ್ತ ಹೆಚ್.ಎಸ್.ಗೋವಿಂದೇಗೌಡ, ವಿಷಯ: ವೃತ್ತಿ ರಂಗಗೀತೆಗಳ ಗಾಯನ, ಉಪಸ್ಥಿತರು: ಮಾಜಿ ಎಂಎಲ್‌ಸಿ ಡಿ.ಮಾದೇಗೌಡ, ಡಾ.ಎಸ್.ಪಿ.ಯೋಗಣ್ಣ, ಬಸವಣ್ಣ, ಎಸ್.ಪುರುಷೋತ್ತಮ್, ಕೆ.ಕೆಂಪಲಿಂಗರಾಜು, ಪ್ರೊ.ಜಿ.ಚಂದ್ರಶೇಖರ್, ಸಂಜೆ 6.30 ರಿಂದ ಎಸ್.ಪುರುಷೋತ್ತಮ್, ಹೆಚ್.ಎಸ್. ಗೋವಿಂದೇಗೌಡ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಪರಮಹಂಸ ಧ್ಯಾನ ಕೇಂದ್ರ, ರಾಮಕೃಷ್ಣ ವೃತ್ತದ ನೆಲಮಹಡಿ.

■ **ಹೆಚ್.ಪ್ರಸನ್ನ ಮತ್ತು ಶ್ರೀಮತಿ ಹೇಮಲತಾ ಟ್ರಸ್ಟ್:** ವಿದುಷಿ ನಾಗಶ್ರೀ ಎಂ.ಬಿ. ಮತ್ತು ವಿದ್ವಾನ್ ಎಸ್.ವಿಜಯಕುಮಾರ್ ಅವರ ಶಿಷ್ಯೆ ಕುಮಾರಿ ಅದಿತಿ ಹೆಚ್.ಪಿ. ಅವರಿಂದ ಭರತನಾಟ್ಯ ಪ್ರಸ್ತುತಿ, ವಿನೀತ್ ಪುರವಂಕರ–ಗಾಯನ, ಎಸ್. ವಿಜಯಕುಮಾರ್–ನಟುವಂಗ, ವೈ.ಪಿ. ವಿಕ್ರಂ ಭಾರದ್ವಾಜ್–ಮೃದಂಗ, ಶ್ರೀಮತಿ ಚರಣ್ಯ ಅಶ್ವಿನ್–ವೀಣಾ, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

ದೈನಂದಿನ ಆಕರ್ಷಣೆಗಳು

ಮ. 1, 4 ಮತ್ತು ಸಂಜೆ 7	:	ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9	:	ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ, ದಿನ 4 ಟ್ರಿಪ್),
ಬೆ. 10ರಿಂದ 10ರವರೆಗೆ	:	ದಸರಾ ವಸ್ತುಪ್ರದರ್ಶನ.

ಮೈಸೂರು ಮಿತ್ರ
ಮಂಗಳವಾರ 7 ಅಕ್ಟೋಬರ್ 2025

ಚಾಮುಂಡಿಬೆಟ್ಟದಲ್ಲಿ ರಥೋತ್ಸವ

ರಥದಲ್ಲಿ ಆಸೀನಳಾದ ತಾಯಿ ಚಾಮುಂಡೇಶ್ವರಿಗೆ ಹಣ್ಣು-ಜವನ ಎಸೆದು ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದ ಅಪಾರ ಭಕ್ತ ಮಹಾಶಯರು



ಚಾಮುಂಡಿಬೆಟ್ಟದಲ್ಲಿ ಸೋಮವಾರ ನೆರವೇರಿದ ರಥೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ನೆರೆದಿರುವುದು.

ಮೈಸೂರು, ಅ.6(ಎಂಟಿವೈ)– ಚಾಮುಂಡಿ ಬೆಟ್ಟದಲ್ಲಿ ಸೋಮವಾರ ಜರುಗಿದ ಚಾಮುಂಡೇಶ್ವರಿ ರಥೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡು ನಾಡದೇವಿಗೆ ಜಯ ಘೋಷಣೆ ಕೂಗಿ, ಹಣ್ಣು-ಜವನ ಸಮರ್ಪಿಸುವ ಮೂಲಕ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ನಾಡದೇವಿಯ ರಥೋತ್ಸವಕ್ಕೆ ವಿವಿಧೆಡೆಯಿಂದ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು ರಥ ಸಾಗುವ ದೇವಾಲಯದ ಸುತ್ತಲೂ ಕಿಕ್ಕಿರಿದು ನೆರೆದು ರಥದಲ್ಲಿ ಸಿಂಹವಾಹಿನಿ ಅಲಂಕಾರದಲ್ಲಿ ಕಂಗೊಳಿಸುತ್ತಿದ್ದ ನಾಡದೇವಿಯ ಕಣ್ತುಂಬಿಕೊಂಡರು. ರಥೋತ್ಸವದ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ಮುಂಜಾನೆಯಿಂದಲೇ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್, ಬೆಳಗ್ಗೆ ದೇವಾಲಯಕ್ಕೆ ಆಗಮಿಸಿ ವಿಶೇಷ ಪೂಜಾ ಕಾರ್ಯದಲ್ಲಿ ಪಾಲ್ಗೊಂಡರು. ಆಭರಣಗಳಿಂದ ವಿಶೇಷ ರೀತಿ ಅಲಂಕಾರ ಮಾಡಿದ್ದ ಉತ್ಸವ ಮೂರ್ತಿಯನ್ನು ದೇವಾಲಯದಿಂದ ಬಿಗಿ ಭದ್ರತೆ, ಸಕಲ ಗೌರವದೊಂದಿಗೆ ರೈಲ್ವೆ ವರ್ಕ್ ಶಾಪ್‌ನ ರಾಟೆ ಆಧಾರಿಸಿದ ಕ್ರೇನ್ ಮಾದರಿಯ ಸ್ಟಾಂಡ್ ಮೂಲಕ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.

ಬೆಳಗ್ಗೆ 9.32ರಿಂದ 9.52ರೊಳಗಿನ ಶುಭ ಲಗ್ನದಲ್ಲಿ ರಥೋತ್ಸವಕ್ಕೆ ಮುಹೂರ್ತ ನಿಗದಿಯಾಗಿತ್ತು. ಬೆಳಗ್ಗೆ 10.05ಕ್ಕೆ ರಾಜವಂಶಸ್ಥರೂ ಆದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ರಥ ಎಳೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಅರಮನೆಯ ಛತ್ರಿ ಚಾಮರ, ಬಿರುದು-ಬಾವಲಿಗಳೊಂದಿಗೆ ಆರಂಭವಾದ ರಥೋತ್ಸವದಲ್ಲಿ ಮಂಗಳವಾದ್ಯ, ಪೊಲೀಸ್ ಬ್ಯಾಂಡ್ ವಾದನದ ತಂಡ ಜಾತ್ರಾ ಮೆರಗು ನೀಡಿತು.

ನಾಡಿಗೆ ಒಳಿತಾಗಲೆಂದು ಪ್ರಾರ್ಥಿಸಿದ್ದೇವೆ

ನಾಡಿಗೆ ಒಳಿತಾಗಲಿ, ಉತ್ತಮ ಮಳೆಯಾಗಿ ರೈತರಿಗೆ ಒಳ್ಳೆಯ ಫಲ ಕೈ ಸೇರಲೆಂದು ಪ್ರಾರ್ಥಿಸಿ ವಿಶೇಷ ಪೂಜೆ ಸಲ್ಲಿಸಲಾಗಿದೆ. ದಸರಾ ಮುಗಿದ ನಂತರ ಸಂಪ್ರದಾಯದಂತೆ ಇಂದು ರಥೋತ್ಸವ ನೆರವೇರಿದೆ.

-ಪ್ರಮೋದಾದೇವಿ ಒಡೆಯರ್, ರಾಜವಂಶಸ್ಥರು

21 ಸುತ್ತು ಸಿಡಿಮದ್ದು: ರಥೋತ್ಸವ ಸಾಗುವ ಹಾದಿಯಲ್ಲಿ ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿಗೆ ಪುಷ್ಪಾರ್ಚನೆ ವೇಳೆ ಸಿಡಿಮದ್ದು ಸಿಡಿಸುವ ಫಿರಂಗಿ ದಳವೇ ಇಂದು ಚಿಕ್ಕ ಟ್ರ್ಯಾಲಿ ಬಳಸಿ 21 ಬಾರಿ ಸಿಡಿಮದ್ದು ಸಿಡಿಸಿದರು.

45 ನಿಮಿಷದಲ್ಲಿ ರಥೋತ್ಸವ ಮುಕ್ತಾಯ: ಬಳಿಕ ಚಾಮುಂಡೇಶ್ವರಿ ದೇವಾಲಯದ ಸುತ್ತಲೂ ಒಂದು ಸುತ್ತು ರಥ ಎಳೆಯಲಾಯಿತು. ರಥೋತ್ಸವ 10.50ಕ್ಕೆ ದೇವಾಲಯದ ಮಹಾದ್ವಾರ ತಲುಪಿತು. ರಥದ ಮೇಲಿರಿಸಲಾಗಿದ್ದ, ಉತ್ಸವಮೂರ್ತಿಯನ್ನು ಸುರಕ್ಷಿತವಾಗಿ ಕ್ರೇನ್ ಸಹಾಯದಿಂದ ಕೆಳಗಿಳಿಸಲಾಯಿತು. ಆ ನಂತರ ದೇವಾಲಯದ ಒಳಗೆ ಕೊಂಡೊಯ್ದು ಪೂಜೆ ಸಲ್ಲಿಸಿ, ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು.

ಬಿಗಿ ಭದ್ರತೆ: ರಥದ ಬಳಿ ಯಾರು ಸುಳಿಯದಂತೆ ಕಟ್ಟೆಚ್ಚರ ವಹಿಸಲಾಗಿತ್ತು. ಪೊಲೀಸ್ ಹಾಗೂ ಕಮಾಂಡೋ ಪಡೆ ರಥದ ಸುತ್ತಲೂ ರೋಪ್ ಹಿಡಿದು ಚಕ್ರದ ಬಳಿ ಯಾರೂ ಸುಳಿಯದಂತೆ ನೋಡಿಕೊಂಡರು.

ಹಣ್ಣು-ಜವನ: ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು ನಾಡದೇವಿಯಲ್ಲಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿ, ಹಣ್ಣು-ಜವನ ಎಸೆದರು. ಹಾಗಾಗಿ ಭಕ್ತರಿಗೆ ಹಣ್ಣು-ಜವನ ಮಾರಾಟ ಮಾಡುವವರ ಸಂಖ್ಯೆಯೂ ಹೆಚ್ಚಾಗಿತ್ತು.

ಸುರಕ್ಷತೆ: ಭಕ್ತರು ಹಣ್ಣು-ಜವನ ಎಸೆಯುವ ಹಿನ್ನೆಲೆಯಲ್ಲಿ ಉತ್ಸವ ಮೂರ್ತಿಗೆ ಅಲಂಕಾರ ಮಾಡಿದ್ದ ಆಭರಣಗಳ ಸುರಕ್ಷತೆಗಾಗಿ ಉತ್ಸವಮೂರ್ತಿ ಇದ್ದ ರಥದ ಗುಡಿಯ ಸುತ್ತಲೂ ಪರದೆ ಬಿಡಲಾಗಿತ್ತು. ಇದರಿಂದ ಭಕ್ತರು ಎಸೆದ ಹಣ್ಣು-ಜವನ ಉತ್ಸವ ಮೂರ್ತಿಗೆ ತಾಕದೆ ರಥದ ಮೇಲಷ್ಟೇ ಬೀಳುತ್ತಿತ್ತು.

ಈ ಸಂದರ್ಭದಲ್ಲಿ ಶಾಸಕ ಜಿ.ಟಿ. ದೇವೇಗೌಡ, ಲಲಿತಾ ಜಿ.ಟಿ.ದೇವೇಗೌಡ ದಂಪತಿ, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಎಂ.ಜಿ.ರೂಪ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.




ರಥೋತ್ಸವಕ್ಕೂ ಮುನ್ನ ದೇವಾಲಯದಲ್ಲಿ ನಡೆದ ವಿಶೇಷ ಪೂಜಾ ಕಾರ್ಯದಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಪಾಲ್ಗೊಂಡಿರುವುದು.



ಚಿಕ್ಕ ಟ್ರ್ಯಾಲಿ ಬಳಸಿ ಸಿಡಿಮದ್ದು ಸಿಡಿಸುತ್ತಿರುವುದು

ವೈದ್ಯಕೀಯ ಕ್ಷೇತ್ರದಲ್ಲಿನ ಮಾನವೀಯ ಕೆಲಸಕ್ಕೆ ಮೂವರಿಗೆ ನೊಬೆಲ್ ಪ್ರಶಸ್ತಿ ಘೋಷಣೆ



ಮೇರಿ ಈ. ಬ್ರಂಕೋ ಫ್ರೆಡ್ ರಾಮ್ಸ್‌ಡೆಲ್ ಶಿಮೋನ್ ಸಕಾಗುಚಿ

ಸ್ಟಾಕ್‌ಹೋಮ್, ಅ.6– ರೋಗ ನಿರೋಧಕ ಶಕ್ತಿ ಹೆಚ್ಚಳಕ್ಕೆ ಸಂಬಂಧಿಸಿದ ಸಂಶೋಧನೆಗಾಗಿ ವಿಜ್ಞಾನಿಗಳಾದ ಅಮೆರಿಕದ ಮೇರಿ ಈ. ಬ್ರಂಕೋ, ಫ್ರೆಡ್ ರಾಮ್ಸ್‌ಡೆಲ್ ಹಾಗೂ ಜಪಾನ್‌ನ ಶಿಮೋನ್ ಸಕಾಗುಚಿ ಅವರಿಗೆ 2025ನೇ ಸಾಲಿನ ವೈದ್ಯಕೀಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ಘೋಷಿಸಲಾಗಿದೆ.

ಸ್ಟಾಕ್‌ಹೋಮ್‌ನ ಕರೊಲಿನ್ಸ್ಕಾ ಇನ್‌ಸ್ಟಿಟ್ಯೂಟ್‌ನಲ್ಲಿ ವೈದ್ಯಕೀಯ ನೊಬೆಲ್ ಪುರಸ್ಕೃತರ ಹೆಸರುಗಳನ್ನು ಸೋಮವಾರ ಪ್ರಕಟಿಸುವುದರೊಂದಿಗೆ ಈ ವರ್ಷದ ನೊಬೆಲ್ ಪುರಸ್ಕಾರ ಘೋಷಣೆಗೆ ಚಾಲನೆ ಸಿಕ್ಕಂತಾಗಿದೆ.

ಕ್ಯಾನ್ಸರ್‌ಗೆ ಹೊಸ ವಿಧಾನದಲ್ಲಿ ಚಿಕಿತ್ಸೆ ನೀಡಲು ಸಾಧ್ಯವಾಗಬಲ್ಲ 'ಮೈಕ್ರೋಆರ್‌ಎನ್‌ಎ' ಆವಿಷ್ಕಾರಕ್ಕಾಗಿ ಅಮೆರಿಕದ ವಿಕ್ಟರ್ ಆಯಂಬ್ರೋಸ್ ಮತ್ತು ಗ್ಯಾರಿ ರುವ್ಕುನ್ ಅವರಿಗೆ ಕಳೆದ ವರ್ಷ ವೈದ್ಯಕೀಯ ಕ್ಷೇತ್ರದ ನೊಬೆಲ್ ಪುರಸ್ಕಾರ ದೊರೆತಿತ್ತು.

ಭೌತವಿಜ್ಞಾನ, ರಸಾಯನ ವಿಜ್ಞಾನ ಕ್ಷೇತ್ರಗಳ ಪ್ರಶಸ್ತಿ ವಿಜೇತರ ಹೆಸರನ್ನು ಕ್ರಮವಾಗಿ ಮಂಗಳವಾರ ಹಾಗೂ ಬುಧವಾರ ಪ್ರಕಟಿಸಲಾಗುತ್ತದೆ. ಸಾಹಿತ್ಯ ಕ್ಷೇತ್ರದ ಪುರಸ್ಕಾರವನ್ನು ಗುರುವಾರ ಹಾಗೂ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಶುಕ್ರವಾರ ಘೋಷಿಸಲಾಗುತ್ತದೆ. ಅ.13 ರಂದು ಅರ್ಥಶಾಸ್ತ್ರ ನೊಬೆಲ್ ಪುರಸ್ಕಾರ ಘೋಷಿಸಲಾಗುತ್ತದೆ. ಡಿಸೆಂಬರ್ 10ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ರಾಜ್ಯದಲ್ಲಿ 18 ಸಾವಿರಕ್ಕೂ ಅಧಿಕ ಶಿಕ್ಷಕರ ನೇಮಕಕ್ಕೆ ಸಿದ್ಧತೆ



ಮಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳಿಗೆ 13,000 ಶಿಕ್ಷಕರು ಹಾಗೂ ಅನುದಾನಿತ ಶಾಲೆಗಳಿಗೆ ಸುಮಾರು 5,500 ಶಿಕ್ಷಕರು ಸೇರಿದಂತೆ 18.500 ಕ್ಕೂ ಅಧಿಕ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗಳ ಸಿದ್ಧತೆ ನಡೆಯುತ್ತಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ಸರ್ಕಾರದ ಅವಧಿಯಲ್ಲಿ ಕೇವಲ 4,700 ಶಿಕ್ಷಕರ ನೇಮಕಾತಿ ನಡೆದಿತ್ತು ತಾನು ಶಿಕ್ಷಣ ಸಚಿವನಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಈಗಾಗಲೇ 13,000 ಶಿಕ್ಷಕರ ನೇಮಕಾತಿ ನಡೆದದ್ದು, ಮತ್ತೆ 18, 500 ಶಿಕ್ಷಕರ ನೇಮಕಾತಿಗೆ ಸಿದ್ಧತೆ ನಡೆದಿದೆ ಎಂದರು.

ಪರಿಶಿಷ್ಟ ಜಾತಿಯಲ್ಲಿನ ಒಳ ಮೀಸಲಾತಿ ಕುರಿತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ವರದಿ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬವಾಗಿದೆ ಎಂದು ಅವರು ತಿಳಿಸಿದರು.

ಎಲ್‌ಕೆಜಿಯಿಂದ 12ನೇ ತರಗತಿವರೆಗೆ ಕೆಪಿಎಸ್ ಮಾದರಿಯಡಿ ಶೇ. 80 ರಷ್ಟು ಸರಕಾರಿ ಶಾಲೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಈ ಶಾಲೆಗಳಲ್ಲಿ ಫಲಿತಾಂಶದ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಿ ಪರೀಕ್ಷೆಯಲ್ಲಿ ನಕಲು ಮಾಡುವುದಕ್ಕೆ ಕಡಿವಾಣ ಹಾಕಲಾಗಿದೆ ಎಂದು ಅವರು ಹೇಳಿದರು.

ಇದೇ ವೇಳೆ 3 ನೇ ಸ್ತರದ ಪರೀಕ್ಷಾ ಪದ್ಧತಿಯೂ ಕೂಡಾ ಮಕ್ಕಳ ಫಲಿತಾಂಶವನ್ನು ಉತ್ತಮ ಪಡಿಸಲು ಸಹಕಾರಿಯಾಗಿದೆ. ಈ ಪರೀಕ್ಷಾ ವ್ಯವಸ್ಥೆಯಿಂದ 2ನೇ ಸ್ತರ ಹಾಗೂ 3ನೇ ಸ್ತರದ ಎಸೆಸೆಲ್ಸಿ ಪರೀಕ್ಷೆಯಲ್ಲಿ 11,6000 ಮಕ್ಕಳು ಉತ್ತೀರ್ಣರಾಗಿದ್ದು, ಪಿಯುಸಿಯಲ್ಲಿಯೂ 56 ಸಾವಿರಕ್ಕೂ ಅಧಿಕ ಮಕ್ಕಳು ಉತ್ತೀರ್ಣರಾಗಿದ್ದಾರೆ ಎಂದು ತಿಳಿಸಿದರು.

ಮುಕ್ತ ವಿವಿ ಶೈಕ್ಷಣಿಕ ದಾಖಲಾತಿಯಲ್ಲಿ ವಿಕಲಚೇತನರಿಗೆ ಶೇ.5 ಮೀಸಲು ಕಲ್ಪಿಸುವಂತೆ ಸಲಹೆ

ಅಂಗವಿಕಲ ವ್ಯಕ್ತಿಗಳ ಹಕ್ಕು ಅಧಿನಿಯಮ ಅನುಷ್ಠಾನದ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಮಾಹಿತಿ ಸಂಗ್ರಹ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ್ದ ಅಂಗವಿಕಲ ವ್ಯಕ್ತಿಗಳ ಹಕ್ಕು ಅಧಿನಿಯಮ ಅನುಷ್ಠಾನದ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಅ.6– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು(ಕರಾಮುವಿ) ಶೈಕ್ಷಣಿಕ ದಾಖಲಾತಿಯಲ್ಲಿ ವಿಕಲಚೇತನರಿಗೆ ಶೇ.5ರಷ್ಟು ಮೀಸಲಾತಿ ಕಲ್ಪಿಸುವಂತೆ ಅಂಗವಿಕಲ ವ್ಯಕ್ತಿಗಳ ಹಕ್ಕು ಅಧಿನಿಯಮ ಅನುಷ್ಠಾನದ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ತಿಳಿಸಿದ್ದಾರೆ.

ಮೈಸೂರಿನ ಕರಾಮುವಿ ಕಾರ್ಯಾಲಯಕ್ಕೆ ಸೋಮವಾರ ಭೇಟಿ ನೀಡಿದ್ದ ಅವರು, ವಿವಿಯಲ್ಲಿ ವಿಶೇಷ ಬಿ.ಇಡಿ ಹಾಗೂ ಎಂ.ಇಡಿ ಪದವಿಗಳನ್ನು ತೆರೆದು, ವಿಕಲಚೇತನರಿಗೆ ಅನುಕೂಲ ಮಾಡಿಕೊಡಬೇಕು. ಪಿ.ಹೆಚ್‌ಡಿ ಸೇರಿದಂತೆ ಎಲ್ಲಾ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ಬಯಸಿ ಬರುವವರಿಗೆ ಶೇ.5ರಷ್ಟು ಮೀಸಲಾತಿ ಕಲ್ಪಿಸಿಕೊಡಬೇಕು. ಈ ಸಂಬಂಧ ವಿವಿಯಿಂದ ಪತ್ರ ನೀಡಿದರೆ ಅನುಮತಿಗೆ ಸಹಕರಿಸಲಾಗುವುದು. ವಿಶೇಷ ವಿಕಲಚೇತನರಿಗೆ ಸರ್ಕಾರದ ಸೌಲಭ್ಯ-ಸವಲತ್ತುಗಳನ್ನು ತಲುಪಿಸುವಲ್ಲಿ ವಿವಿಗಳ ಪಾತ್ರ ಮಹತ್ವದ್ದಾಗಿದೆ ಎಂದರು.

ಇದೇ ವೇಳೆ ಕರಾಮುವಿ ಡೀನ್(ಶೈಕ್ಷಣಿಕ) ಪ್ರೊ.ಎಂ.ರಾಮನಾಥಂ ನಾಯ್ಡು ಅವರು ದಾಸ್ ಸೂರ್ಯವಂಶಿ ಅವರನ್ನು ವಿವಿಯ ಸ್ಟುಡಿಯೊ, ಪ್ರವೇಶಾತಿ ವಿಭಾಗ, ಅಧ್ಯಯನ ಸಾಮಗ್ರಿ ವಿಭಾಗ, ಗ್ರಂಥಾಲಯ ಹಾಗೂ ಪರೀಕ್ಷಾಂಗ ವಿಭಾಗಗಳಿಗೆ ಕರೆದೊಯ್ದು, ಇಲ್ಲಿನ ವ್ಯವಸ್ಥೆ ಬಗ್ಗೆ ವಿವರಿಸಿದರು. ವಿವಿ ಕಾರ್ಯ ವೈಖರಿ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿದ ದಾಸ್ ಸೂರ್ಯವಂಶಿ, ವಿವಿ ಸಹಯೋಗದಲ್ಲಿ ಸಮ್ಮೇಳನ ಆಯೋಜಿಸುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುಕ್ತ ವಿವಿಯ ಹಣಕಾಸು ಅಧಿಕಾರಿ ಪ್ರೊ.ನಿರಂಜನ್ ರಾಜ್, ಕುಲಸಚಿವ(ಪರೀಕ್ಷಾಂಗ) ಪ್ರೊ.ಸಿ.ಎಸ್. ಆನಂದ್ ಕುಮಾರ್, ಡೀನ್(ಅಧ್ಯಯನ ಕೇಂದ್ರ) ಡಾ.ಚಂದ್ರೇಗೌಡರು, ಶಿಕ್ಷಣ ಶಾಸ್ತ್ರ ವಿಭಾಗದ ಮುಖ್ಯಸ್ಥರು, ಅಧ್ಯಾಪಕ ಮತ್ತು ಅಧ್ಯಾಪಕೇತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಬಸ್ಯಾ : ಯಾಕೆ ಹೆಣ್ಣು ನೋಡೋಕೆ ಗಂಡಿನ ಕಡೆಯವರೇ ಹೋಗ್ತಾರೆ?

ಸಂತು : ಗಂಡು ನೋಡೋಕೆ ಹೆಣ್ಣು ಹೋಗೋಲ್ಲ. ಯಾಕೆಂದರೆ ಮಾಡ್ಕೊಂಡಿರುವ ಮೇಕಪ್ ದಾರೀಲಿ ಹಾಳಾಗುತ್ತೆ ಅಂತ.

ಮೈಸೂರು ಮಿತ್ರ
ಮಂಗಳವಾರ, 7 ಅಕ್ಟೋಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಮನೆಯಲ್ಲಿ ಸೋಫಾ ಸೆಟ್, ಡಿನ್ನರ್ ಸೆಟ್, ಮೇಕಪ್ ಸೆಟ್ ಇಟ್ಟುಕೊಂಡಿದ್ದರೂ ಕೂಡ, ಮನುಷ್ಯನಿಗೆ ಸರಿಯಾದ ಮೈಂಡ್ ಸೆಟ್ ಇಲ್ಲದಿದ್ದರೆ, ಎಲ್ಲಿಯೂ ಸೆಟ್ಟಾಗಲಾರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಪತ್ತಿಗಾದವನೇ ನಿಜವಾದ ಗೆಳೆಯ.

ನಿಮ್ಮ ಪತ್ರಗಳು

■ ಜಾತಿ ಗಣತಿ ಎಂಬ ಹೊಸ ವರಸೆ

ಮಾನ್ಯರೆ,

ಕರ್ನಾಟಕ ರಾಜ್ಯ ಸರ್ಕಾರ ನಡೆಸುತ್ತಿರುವ ಜಾತಿಗಣತಿ ಬಗ್ಗೆ ರಾಜ್ಯಾದ್ಯಂತ ವ್ಯಾಪಕ ಟೀಕೆ ಟಿಪ್ಪಣಿಗಳು ಕೇಳಿ ಬರುತ್ತಿವೆ. ಪ್ರಸ್ತುತ ಸನ್ನಿವೇಶದಲ್ಲಿ ಜಾತಿ ಗಣತಿಯ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆ ಪ್ರಜ್ಞಾವಂತ ನಾಗರಿಕರನ್ನು ಕಾಡಿದರೆ ಅಚ್ಚರಿಯಿಲ್ಲ. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ರಾಜಕೀಯ ಲಾಭ ಪಡೆಯಲು ಜಾತಿಗಣತಿ ಎಂಬ ಹೊಸ ವರಸೆ ತೆಗೆದಿದೆ ಎಂಬ ಟೀಕೆ ಆಡಳಿತ ಪಕ್ಷದ ಕೆಲವು ಮುಖಂಡರೇ ವ್ಯಕ್ತಪಡಿಸುತ್ತಿದ್ದಾರೆ. ಜಾತಿಗಣತಿಗೆ ನೇಮಕಗೊಂಡ ಅಧಿಕಾರಿಗಳು ಅಥವಾ ನೌಕರರು ಮನೆ ಮನೆಗೆ ಭೇಟಿ ನೀಡಿದಾಗ ಮಾಹಿತಿ ನೀಡುವುದು ಕಡ್ಡಾಯವಲ್ಲ ಎಂದು ರಾಜ್ಯ ಹೈಕೋರ್ಟ್ ಈಗಾಗಲೇ ತೀರ್ಪು ನೀಡಿರುವುದ ರಿಂದ ಜಾತಿಗಣತಿ ತನ್ನ ಕಿಮ್ಮತ್ತನ್ನು ಕಳೆದುಕೊಂಡು ಒಂದು ಪ್ರಹಸನವಾಗಿ ಪರಿಣಮಿಸಿದೆ. ಇದಕ್ಕೆ ಇಂಬು ನೀಡುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗಣತಿದಾರರಿಗೆ ಆಸ್ತಿ ವಿವರಗಳನ್ನು ನೀಡುವುದನ್ನು ನಿರಾಕರಿಸುವ ಮೂಲಕ ಜಾತಿ ಗಣತಿ ಪ್ರಕ್ರಿಯೆಗೆ ಬಹುದೊಡ್ಡ ಪೆಟ್ಟನ್ನೇ ನೀಡಿದ್ದಾರೆ. ಮತ್ತೊಂದು ಕಡೆ, ಗಣತಿಗೆ ನೇಮಕಗೊಂಡ ಸರ್ಕಾರಿ ನೌಕರರೇ ಪ್ರತಿಭಟನೆಗೆ ಇಳಿದಿರುವುದು ಸೋಜಿಗದ ಸಂಗತಿ. ಈ ಎಲ್ಲಾ ಬೆಳವಣಿಗೆಗಳ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಜಾತಿಗಣತಿ ಯೋಜನೆ ತಲೆಕೆಳಗಾಗಿದ್ದು, ಮುಂದೆ ಇದು ಯಾವ ಸ್ವರೂಪ ಪಡೆದುಕೊಳ್ಳುವುದೋ ಎಂಬುದು ಕುತೂಹಲಕಾರಿಯಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ದೀಪಾಲಂಕಾರ ನೋಡಲು ರಾತ್ರಿ 10 ಗಂಟೆಗೆ ಹೋಗಬಹುದಿತ್ತಲ್ವಾ!

ಮಾನ್ಯರೆ,

ಅ.3 ರಂದು ರಾತ್ರಿ 7.25ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೈಸೂರಿನ ದೀಪಾಲಂಕಾರ ನೋಡಲು ಹೋದಾಗ ಇದೇ ರೀತಿ ದೀಪಾಲಂಕಾರ ನೋಡಲು, ನಗರ, ಹೊರ ಊರಿನ ಪ್ರವಾಸಿಗರು ಕೂಡ ನೋಡಲು ಹೋಗಿದ್ದರು. ಸಿಎಂ ಪ್ರದಕ್ಷಿಣೆಯಿಂದ ಹೋದಲ್ಲೆಲ್ಲಾ ರಸ್ತೆಗಳನ್ನು ಬಂದ್ ಮಾಡಿದ್ದರಿಂದ ಸಹಜವಾಗಿಯೇ ಜನರು ರೋಸಿ ಹೋಗಿದ್ದರು. ಭಾರೀ ಟ್ರಾಫಿಕ್ ಜಾಮ್ ಉಂಟಾಗಿತ್ತು. ರೋಸಿ ಹೋದ ಕೆಲವರು ಧಿಕ್ಕಾರದ ಘೋಷಣೆ, ಕೆಲವೆಡೆ ಮೋದಿ ಮೋದಿ ಘೋಷಣೆ ಕೂಗಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಜನರಿಗೆ ತೊಂದರೆಯಾಗುತ್ತದೆ ಎನ್ನುವುದು ಸಿಎಂಗೆ, ಸೆಸ್ಕನವರಿಗೆ, ಜಿಲ್ಲಾಡಳಿತಕ್ಕೆ ತಿಳಿದಿದ್ದರೂ ಈ ರೀತಿ ಮಾಡಿ ಸಾರ್ವಜನಿಕರಿಗೆ ತೊಂದರೆ ಕೊಟ್ಟಿದ್ದೇಕೆ? ಅಧಿಕಾರವಿದೆ ಏನು ಮಾಡಿದರೂ ನಡೆಯುತ್ತದೆ ಎನ್ನುವ ಧೋರಣೆಯೇ? ಇನ್ನು ಮುಂದಿನ ವರ್ಷಗಳಲ್ಲಾದರೂ ದೀಪಾಲಂಕಾರ ನೋಡಲು ಸಿಎಂ ಹೋಗಲೇಬೇಕೆಂದಿದ್ದರೆ ರಾತ್ರಿ 10 ಗಂಟೆಯ ನಂತರ ಹೋಗಲಿ. ಆಗ ಸಾರ್ವಜನಿಕರ ವಾಹನಗಳ ಸಂಖ್ಯೆ ಕಡಿಮೆಯಾಗಿರುತ್ತದೆ. ಸಿಎಂ ಸುತ್ತ ಇರುವ ಹೊಗಳುಭಟ್ಟರು ಇದನ್ನು ಅರ್ಥ ಮಾಡಿಕೊಳ್ಳಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು,

■ ಬೆಳಗ್ಗೆ 7.30ಕ್ಕೆ ಮೈಸೂರಿನಿಂದ ಹೊಸ ರೈಲು ಸೇವೆ ಆರಂಭಿಸಲಿ

ಮಾನ್ಯರೆ,

ಪ್ರಸ್ತುತ, ಬೆಳಿಗ್ಗೆ 6.45ಕ್ಕೆ ಹೊರಡುವ ಚಾಮುಂಡಿ ಎಕ್ಸ್‌ಪ್ರೆಸ್ ರೈಲಿನ ನಂತರ ಮುಂದಿನ ಪ್ರಮುಖ ರೈಲು ಬೆಳಿಗ್ಗೆ 8.40ಕ್ಕೆ ಶೆಡ್ಯೂಲ್ ಆಗಿರುವ ಮಾಲ್ಗುಡಿ ಎಕ್ಸ್‌ಪ್ರೆಸ್ ನಿಗದಿತ ಸಮಯಕ್ಕೆ ಸರಿಯಾಗಿ ಬಂದ ಇತಿಹಾಸವೇ ಇಲ್ಲ ಎನ್ನುವಷ್ಟು ವಿಳಂಬವಾಗುತ್ತಿದೆ. ಇದರಿಂದಾಗಿ, ಬೆಂಗಳೂರಿಗೆ ಕೆಲಸಕ್ಕೆ ಹೋಗುವ ಸಾರ್ವಜನಿಕರು ಮತ್ತು ಸರ್ಕಾರಿ ನೌಕರರು ಸಮಯಕ್ಕೆ ಸರಿಯಾಗಿ ಕಚೇರಿ ತಲುಪಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಮಂಗಳವಾರ ಮತ್ತು ಗುರುವಾರ ಓಡುತ್ತಿರುವ ವಾರಣಾಸಿ ಎಕ್ಸ್‌ಪ್ರೆಸ್ ಟ್ರೈನ್‌ನ ಮಾದರಿಯಲ್ಲಿ ಪ್ರತಿ ದಿನ ಬೆಳಗ್ಗೆ 7.30ಕ್ಕೆ ಮೈಸೂರಿನಿಂದ ಬೆಂಗಳೂರಿಗೆ ಹೊರಡುವಂತೆ ಹೊಸ ರೈಲು ಸೇವೆಯನ್ನು ಪ್ರಾರಂಭಿಸಿದರೆ ಪ್ರಯಾಣಿಕರಿಗೆ ತುಂಬಾ ಅನುಕೂಲವಾಗುತ್ತದೆ. ಅಷ್ಟೇ ಅಲ್ಲದೆ, ಬೆಳಿಗ್ಗೆ 6.45 ಮತ್ತು 8.40ರ ನಡುವಿನ ಈ 7.30ರ ಸಮಯವು ಕೆಲಸಕ್ಕೆ ಹೋಗುವವರ ದೃಷ್ಟಿಯಿಂದ ಅತ್ಯಂತ ಸೂಕ್ತವಾಗಿರುತ್ತದೆ. ಆದ್ದರಿಂದ, ಸಮಸ್ಯೆಯ ಗಂಭೀರತೆಯನ್ನು ಪರಿಗಣಿಸಿ, ಮೈಸೂರು ವಿಭಾಗದ ರೈಲ್ವೆ ಇಲಾಖೆಯ ಮುಖ್ಯಸ್ಥರು ದಯವಿಟ್ಟು ಈ ವಿಚಾರವನ್ನು ಗಣನೆಗೆ ತೆಗೆದುಕೊಂಡು ಅಗತ್ಯ ಕ್ರಮವಹಿಸಿ, ಸರ್ಕಾರಿ ನೌಕರರು ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. **–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.**

■ ವ್ಯಂಗ್ಯ ಅನಗತ್ಯ, ಸಹಕಾರ ಅಗತ್ಯ

ಮಾನ್ಯರೆ,


ಇತ್ತೀಚೆಗೆ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಆಂಧ್ರಪ್ರದೇಶ ಸಚಿವ ನಾರಾ ಲೋಕೇಶ್ ಅವರ ನಡುವಿನ ಸಾಮಾಜಿಕ ಜಾಲತಾಣದ ಚರ್ಚೆ ಹಾಸ್ಯಾಸ್ಪದ. ನಗರದಲ್ಲಿನ ರಸ್ತೆ ಗುಂಡಿಗಳು, ಟ್ರಾಫಿಕ್ ತೊಂದರೆಗಳು ಮತ್ತು ಮೂಲಸೌಕರ್ಯ ಕೊರತೆಗಳು ನಿಜವಾದ ಸಮಸ್ಯೆಗಳು. ಆದರೆ ಇವು ರಾಜಕೀಯ ವ್ಯಂಗ್ಯ ಅಥವಾ ಪ್ರಚಾರದ ವೇದಿಕೆಯ ವಿಷಯವಾಗಬಾರದು. ನಾರಾ ಲೋಕೇಶ್ ಅವರು ಹೂಡಿಕೆದಾರರನ್ನು ಆಂಧ್ರಪ್ರದೇಶಕ್ಕೆ ಆಹ್ವಾನಿಸುವುದು ಅವರ ರಾಜ್ಯದ ಅಭಿವೃದ್ಧಿಗಾಗಿ ಸಮಂಜಸವಾದರೂ, ಬೆಂಗಳೂರಿನ ಸ್ಥಿತಿಯನ್ನು ಹಾಸ್ಯ ಮಾಡುವ ರೀತಿಯಲ್ಲಿ ಹೇಳಿಕೆ ಕೊಡುವುದು ತರವಲ್ಲ. ಬೆಂಗಳೂರು ನಗರವು ಭಾರತದ ತಾಂತ್ರಿಕ ಮತ್ತು ಆರ್ಥಿಕ ಹೃದಯವಾಗಿದೆ. ಇಲ್ಲಿನ ಯುವಕರು ನವೀನ ಚಿಂತನೆಯಿಂದ ಮತ್ತು ದುಡಿಯುವ ಶಕ್ತಿಯಿಂದ ದೇಶಕ್ಕೆ ಹೆಮ್ಮೆ ತಂದಿದ್ದಾರೆ. ಜಿಡಿಪಿ ಬೆಳವಣಿಗೆ ಮತ್ತು ಉದ್ಯೋಗಾವಕಾಶಗಳಲ್ಲಿ ನಗರ ಮುಂಚೂಣಿಯಲ್ಲಿದೆ. ಆದರೆ ಇದರ ವೇಗಕ್ಕೆ ತಕ್ಕಂತೆ ರಸ್ತೆ, ಸಾರಿಗೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಅಗತ್ಯವಾಗಿದೆ. ರಸ್ತೆ ಗುಂಡಿಗಳು ಕೇವಲ ವಾಹನಗಳ ಸಮಸ್ಯೆಯಲ್ಲ, ಅದು ನಿರ್ವಹಣಾ ವೈಫಲ್ಯ ಮತ್ತು ಯೋಜನೆಗಳ ಕೊರತೆಯ ಸಂಕೇತವಾಗಿದೆ. ರಾಜ್ಯಗಳು ಹೂಡಿಕೆ ಮತ್ತು ಉದ್ಯೋಗಗಳಿಗಾಗಿ ಸ್ಪರ್ಧಿಸಲಿ, ಆದರೆ ಪರಸ್ಪರ ಗೌರವ ಮತ್ತು ಸಹಕಾರದ ಮನೋಭಾವ ಇರಬೇಕು. ವ್ಯಂಗ್ಯ ಮತ್ತು ಟೀಕೆಗಳು ಕ್ಷಣಿಕ ಪ್ರತಿಕ್ರಿಯೆ ತರಬಹುದು, ಆದರೆ ಸಹಕಾರವೇ ಶಾಶ್ವತ ಅಭಿವೃದ್ಧಿಯ ದಾರಿ. ನಾಯಕರು ಒಟ್ಟಿಗೆ ಕುಳಿತು ಪರಿಹಾರ ಹುಡುಕಿದರೆ ದೇಶ ಗೆಲ್ಲುತ್ತದೆ. ನಗರಗಳ ಸಮಸ್ಯೆಗಳನ್ನು ನೈಜ ದೃಷ್ಟಿಯಿಂದ ಪರಿಹರಿಸುವುದು ಮತ್ತು ನಾಡಿನ ಹಿತವನ್ನು ಪ್ರಥಮ ಗುರಿಯನ್ನಾಗಿಸುವುದು ನಮ್ಮ ನಾಯಕರ ನಿಜವಾದ ಹೊಣೆಗಾರಿಕೆ. **–ಡಾ. ಎಚ್.ಕೆ. ವಿಜಯಕುಮಾರ್, ಮೈಸೂರು.**

ದೀಪ ಸಾಲು



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ವಾಲ್ಮೀಕಿಯ ರಾಮಾ...ರಾಮಾ... ನಮ್ಮ ಪವಿತ್ರ 'ರಾಮಾಯಣ'!



> "ಭೂಮಿಯ ಭಾರಕ್ಕಿಂತ ರಾಮಾಯಣದ ಕೃತಿ ರಾಶಿಯ ಭಾರವೇ ಅಧಿಕವಾಗಿತ್ತೆಂದು ಹೇಳುವ ಉತ್ಪ್ರೇಕ್ಷೆ ಆ ಮಾತಿನಲ್ಲಿ ಕಾಣುತ್ತದೆ. ವಾಲ್ಮೀಕಿ ರಾಮಾಯಣದ ಕತೆ ಇಂದು ಕೇವಲ ಸಾಹಿತ್ಯ ಚರ್ಚೆ, ಸಂವಾದ, ಜಗಳ, ವಾದ–ವಿವಾದ, ಪ್ರತಿವಾದಗಳಲ್ಲಷ್ಟೇ ಉಳಿದಿಲ್ಲ. ಅಮೆರಿಕಾದ ನಾಸಾದಂಥ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ರಾಮಸೇತು ಕುರಿತಂತೆ ಸಮುದ್ರದ ಆಳದಲ್ಲಿ ಅಳಿದು–ಉಳಿದಿರುವ ಸೇತುವೆಯ ಪಳೆಯುಳಿಕೆಗಳನ್ನು ಸಂಶೋಧಿಸಿದೆ. ಜಗತ್ತಿನಾದ್ಯಂತ ಎಲೆಕ್ಟ್ರಾನಿಕ್ಸ್ ಮೀಡಿಯಾಗಳ ಮೂಲಕ ಅದನ್ನು ಬಿತ್ತರಿಸುವ ತಂತ್ರಜ್ಞಾನದ ಆವಿಷ್ಕಾರಕ್ಕೂ ವಾಲ್ಮೀಕಿ ರಾಮಾಯಣ ಗ್ರಾಸ ಒದಗಿಸಿದೆ.

ಇಂದು ವಾಲ್ಮೀಕಿ ಜಯಂತಿ

ಇಡೀ ಭರತಖಂಡದ 150 ಕೋಟಿ ಜನರ ಕರಗದ ಐಶ್ವರ್ಯ ಅಂತೇನಾದರೂ ಇದ್ದರೆ, ಅದು ವ್ಯಾಸ–ವಾಲ್ಮೀಕಿಯೆಂಬ ಎರಡು ಸಾಗರಸದೃಶ ಪ್ರತಿಭೆಗಳು. ಬಹಳ ವೈಚಾರಿಕವಾಗಿ ಬಾಳಿ ಬದುಕಿದ ದೇಶ ಗ್ರೀಸ್. ಈ ದೇಶ ಇಂದಿಗೂ ತನ್ನ ದೇಶದ ಸಂಪತ್ತನ್ನು ಅಳೆಯುವ ಮಾನದಂಡ ಯಾವುದು ಎಂದು ಕೇಳಿದರೆ! ಹೋಮರ್ ಬರೆದ **'ಇಲಿಯಡ್ ಮತ್ತು ಒಡೆಸ್ಸಿ'** ಎಂಬ ಅವರ ಎರಡು ಪ್ರಾಚೀನ ಮಹಾಕಾವ್ಯಗಳು ಎಂದೇ ಹೇಳುತ್ತದೆ. ಹಾಗೆಯೇ ಭಾರತ ಕೂಡ ತನ್ನ ಸ್ಥಿರಾಸ್ತಿ ಘೋಷಣೆಯ ಪಟ್ಟಿಯನ್ನು ವಿಶ್ವಸಮುದಾಯಕ್ಕೆ ಸಲ್ಲಿಸುವಾಗ ತನ್ನ ಎರಡು ಸಂಪತ್ತುಗಳನ್ನು ಘೋಷಿಸಿಕೊಳ್ಳುತ್ತದೆ. ಅದೇ ನಮ್ಮ ಪ್ರಾತಿನಿಧಿಕ ಪರಂಪರೆಯ ಮಹಾಕಾವ್ಯಗಳಾದ **'ರಾಮಾಯಣ'** ಮತ್ತು **'ಮಹಾಭಾರತ'**. ಇವತ್ತಿಗೂ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ. ನಮ್ಮ ದೇಶದ ಮಕ್ಕಳ ಬಾಯಲ್ಲಿ ಜನರಲ್ ನಾಲೆಡ್ಜ್ ಕ್ವಿಜ್ ಥರ ಕೇಳಿದ ಕೂಡಲೇ ಹೊರಡುವ ಎರಡು ಮಹಾಕಾವ್ಯಗಳು ಇವು. ಇಂಥಾ ಮಹಾಕೃತಿಗಳಲ್ಲಿ ಒಂದಾದ ರಾಮಾಯಣ ಕೂಡ ಅತ್ಯಂತ ಮಹತ್ವದ್ದು. ಈ ಕೃತಿಯ ಕರ್ತೃ ವಾಲ್ಮೀಕಿ ಬಗ್ಗೆ ಈವರೆಗೆ ಬರೆದ, ಬಂದ ಪುಸ್ತಕಗಳ ಪುಟಗಳು ರಾಶಿಯಷ್ಟಾಗಬಹುದೇನೋ ಅಷ್ಟರಮಟ್ಟಿಗೆ ವಾಲ್ಮೀಕಿಯ ಬಗೆಗೆ ಪುಸ್ತಕದ ರಾಶಿಯಿದೆ. ಸಿನಿಮಾಗಳಿವೆ, ನಾಟಕಗಳಿವೆ, ಟೆಲಿಫಿಲಂಗಳಿವೆ, ಎಲ್ಲಕ್ಕಿಂತ ಮಿಗಿಲಾಗಿ ಈ ದೇಶ ತನ್ನ ಪ್ರಾತಿನಿಧಿಕ ಕೃತಿಯಾಗಿ ವಾಲ್ಮೀಕಿ ಬರೆದ ರಾಮಾಯಣವನ್ನು ಒಪ್ಪಿ ತನ್ನ ಚರಿತ್ರೆ ಬರೆಸಿಕೊಂಡಿದೆ.

ಸಾಮಾನ್ಯವಾಗಿ ಮಹಾಕವಿಯಾದವರ ಬಗ್ಗೆ ದಂತಕತೆಗಳೇ ಹುಟ್ಟಿಬಿಡುತ್ತವೆ. ವಾಲ್ಮೀಕಿಯ ಜೀವನ ವೃತ್ತಾಂತ ಕೂಡ ಅಂಥದೇ ಒಂದು ಕತೆಯಿಂದ ಶುರುವಾಗುತ್ತದೆ. ಹಿಂಸೆ ಮಾಡಿ ತಂದ ಉತ್ಪನ್ನದಿಂದ ರತ್ನಾಕರನೆಂಬ ಬೇಟೆಗಾರನ ಬದುಕು ಸಾಗುತ್ತಿತ್ತು. ಒಮ್ಮೆ ನಾರದ ಮುನಿಗಳ ಸಂಸರ್ಗದಿಂದ ರತ್ನಾಕರನೆಂಬ ಬೇಟೆಗಾರ ವಾಲ್ಮೀಕಿಯಾಗಿ ಬದಲಾಗುವ ಸಂದರ್ಭ ಸೃಷ್ಟಿಯಾಯಿತು. ಅದೇ ವಾಲ್ಮೀಕಿಯ ಮೂಲ ಕಥೆ. ಇಂದಿಗೂ ಚಾಲ್ತಿಯಲ್ಲಿರುವ ವೃತ್ತಾಂತ.

ಅಲ್ಲಿಯೂ ರತ್ನಾಕರ ತಾನು ಮಾಡುತ್ತಿರುವ ದರೋಡೆಯ ಕೆಲಸಗಳು ತನ್ನ ಕುಟುಂಬ ನಿರ್ವಹಣೆ ಜವಾಬ್ದಾರಿಯಿಂದಾಗಿಯೇ ಹೊರತು ತನಗಾಗಿಯಲ್ಲ; ಆದುದರಿಂದ ಅದರಲ್ಲಿ ತಪ್ಪೇನು ಬಂತು ಎಂದು ಸಮರ್ಥಿಸಿಕೊಳ್ಳುತ್ತಾನೆ. ಆಗ ನಾರದಮುನಿ ನಿನ್ನ ಪ್ರತಿಫಲದಲ್ಲಿ ಪಾಲ್ಗೊಳ್ಳುವ ನಿನ್ನ ತಂದೆ ಮತ್ತು ಪತ್ನಿ ನೀನು ಮಾಡುತ್ತಿರುವ ಈ ಕಳ್ಳತನ ದರೋಡೆ, ಹಿಂಸೆಗಳೆಂಬ ಪಾಪದಲ್ಲೂ ಪಾಲ್ಗೊಳ್ಳುವರೇ ಕೇಳು ಎಂದು ಹೇಳಿ ಕಳಿಸುತ್ತಾರೆ. ಅದಕ್ಕೆ ರತ್ನಾಕರನ ಕುಟುಂಬ ಹೇಳುವುದೇನು ಗೊತ್ತಾ 'ತಮ್ಮನ್ನು ಸಾಕಿ ಸಲುಹುವುದು ನಿಮ್ಮ ಜವಾಬ್ದಾರಿಯಾದುದರಿಂದ ನಾವೇಕೆ ನೀವು ಮಾಡುವ ಪಾಪಗಳಲ್ಲಿ ಪಾಲುದಾರರಾಗಬೇಕು ಪಾಲ್ಗೊಳ್ಳಬೇಕು ಎಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಾರೆ. ಬುದ್ಧನಿಗೆ ಬೋಧಿ ವೃಕ್ಷದ ಕೆಳಗೆ ಜ್ಞಾನೋದಯವಾದ ಹಾಗೆ ತನ್ನದೇ ಕುಟುಂಬದೆದುರು ರತ್ನಾಕರನಿಗೆ ಆತ್ಮಸಾಕ್ಷಿಯ ಕದ ತೆರೆಯುತ್ತದೆ.

ನೊಂದು ತಪೋಮಾರ್ಗದತ್ತ ಹೊರಡುತ್ತಾನೆ. ಅವನ ಮೇಲೆ ಹುತ್ತ ಬೆಳೆಯುವಷ್ಟು ಕಾಲ ಮೈಮರೆತು ಧ್ಯಾನಸ್ಥನಾಗುತ್ತಾನೆ. ವಲ್ಮೀಕ ಎಂದರೆ ಹುತ್ತ, ವಲ್ಮೀಕದಿಂದ ಆಚೆ ಬಂದು ಜ್ಞಾನದ ತೆರೆ ತೆರೆದು ಮಹಾಕಾವ್ಯದ ಬೆಳಕಾಗಿ ಬಂದವರು ವಾಲ್ಮೀಕಿ, ಹೀಗಂತ ಲಭ್ಯವಿರುವ ಬೇರೆ ಬೇರೆ ರೂಪಗಳ ಸಾಹಿತ್ಯ ದಾಖಲೆಗಳು ವಾಲ್ಮೀಕಿಯ ಪೂರ್ವಾಶ್ರಮವನ್ನು ಹೇಳುತ್ತವೆ.

ಅದೇನೇ ಇರಲಿ ಬಿಡಿ. ಶತ–ಶತ ಮಾನ ಕಳೆದರೂ ಭಾರತದಲ್ಲಿ ಲಕ್ಷ ಲಕ್ಷ ಸಂಖ್ಯೆಯಲ್ಲಿ ಉದ್ಯಮಿಗಳು ಹುಟ್ಟಿದರು! ವೈದ್ಯರು ಹುಟ್ಟಿದರು! ಎಂಜಿನಿಯರ್‌ಗಳು ಹುಟ್ಟಿದರು. ಕಲಾವಿದ, ಸಾಹಿತಿ ವಿಜ್ಞಾನಿ ಎಲ್ಲರೂ ಹುಟ್ಟಿದ್ದರು. ಮತ್ತೆ ಮತ್ತೆ ವಾಲ್ಮೀಕಿ ಹುಟ್ಟಲಿಲ್ಲ. ವ್ಯಾಸ ಹುಟ್ಟಲಿಲ್ಲ. ರಾಮಾಯಣ, ಮಹಾಭಾರತದಂಥ ಎರಡು ಮಹಾಕಾವ್ಯಗಳು ಮತ್ತೆ ಮತ್ತೆ ಹುಟ್ಟಲಿಲ್ಲ, ಬದಲಿಗೆ ಅವುಗಳ ಅವತರಣಿಕೆಗಳು ಹುಟ್ಟಿದವು. ಭಾರತದ ಬೇರೆ ಬೇರೆ ಭಾಷೆಗಳಲ್ಲಿ ಪ್ರಾದೇಶಿಕವಾಗಿ ಅವು ಮೈ ತಳೆದವು. ಎಷ್ಟೆಲ್ಲಾ ವಿನ್ಯಾಸಗಳಲ್ಲಿ, ವಿಸ್ತಾರಗಳಲ್ಲಿ ಅವು ತಮ್ಮನ್ನು ತಾವು ವಿಸ್ತರಿಸಿಕೊಂಡರೂ ಅವುಗಳ ಮೂಲ ಮಾತ್ರ ಒಂದೇ ಆಗಿರುವಂಥ ನೆಲದ ಒಡಲಾಗಿ ಈ ಕೃತಿಗಳು ಮೂಲದಲ್ಲೇ ರೂಪುಗೊಂಡವು.

ಹೊಸ ಕಾಲದ ಸ್ವತಂತ್ರ ಭಾರತದ ಕಲ್ಪನೆ ಕಂಡ, ನಮ್ಮ ಸ್ವಾತಂತ್ರ್ಯದ ಸಮರ ಸೇನಾನಿಗಳಲ್ಲಿ ಗಾಂಧೀಜಿಯಂಥವರ ತಲೆಯಲ್ಲಿ ರಾಮ ರಾಜ್ಯದ ಕನಸು ಹುಟ್ಟಿಸಿದ್ದು ವಾಲ್ಮೀಕಿ ರಾಮಾಯಣ. ನಮ್ಮ ತಲೆ ಮಾರಿನ ಇಂದಿನ ಭಾರತದ ರಾಜಕಾರಣದ ಲೆಕ್ಕಾಚಾರಕ್ಕೆ ಮತ್ತದೇ ಅಯೋಧ್ಯೆ ಮತ್ತು ಅದೇ ರಾಮಮಂದಿರ ಕ್ಷ–ಕಿರಣ ಹೀಗಿದೆ ನೋಡಿ ವಾಲ್ಮೀಕಿ ಸೃಷ್ಟಿಸಿದ ರಾಮಾಯಣದ ಹೂರಣ!

ಕನ್ನಡದಂಥ ಭಾಷೆಗೆ ಅಂತಃಶಕ್ತಿ ತುಂಬಿದ ರಸಋಷಿ ಕುವೆಂಪು ಸೃಜಿಸಿದ ಮೇರು ಕೃತಿ ಶ್ರೀ ರಾಮಾಯಣದರ್ಶನಂಗೆ ಮೂಲವೇ ನಮ್ಮ ವಾಲ್ಮೀಕಿ ರಾಮಾಯಣ. ವಾಲ್ಮೀಕಿ ರಾಮಾಯಣದ ಮೂಲ ಕಥೆಯಲ್ಲಿನ ಕೆಲ ಮಾರ್ಪಾಡುಗಳನ್ನು ದರ್ಶನ ಪ್ರತಿಭೆಯಾದ ಕುವೆಂಪುರವರು ತಮ್ಮದೇ ಕಾಣ್ಕೆಯಲ್ಲಿ ಕಾಣಿಸಿದರು. ಊರ್ವಶಿ, ಮಂಥರೆ, ರಾವಣನಂತವರನ್ನೂ ತಮ್ಮ ಪ್ರತಿಭೆಯ ಪ್ರಭೆಯಲ್ಲಿ ಕಾಯಿಸಿ ತಮ್ಮ ದರ್ಶನಾತ್ಮಕ ಪ್ರತಿಭೆಯಿಂದ ಸುರೂಪಗೊಳಿಸಿದರು. ಬೇಂದ್ರೆಯವರಂಥ ವರಕವಿ ಕುವೆಂಪು ಅವರನ್ನು ಕುರಿತಂತೆ ಆಡುವ ಮಾತಿದು;

ಯುಗದ ಕವಿಗೆ, ಜಗದ ಕವಿಗೆ
ರಾಮಾಯಣದಿಂದಲೇ ಕೈಮುಗಿವ ಕವಿಗೆ

ಎನ್ನುವಷ್ಟರ ಮಟ್ಟಿಗೆ ಶ್ರೀ ರಾಮಾಯಣದರ್ಶನಂ ಕುವೆಂಪು ಅವರನ್ನು ಮಹಾಕವಿಯನ್ನಾಗಿ ರೂಪಿಸಿತು. ಸ್ವತಃ ಕುವೆಂಪು ಅವರೇ ಶ್ರೀಕುವೆಂಪು ಸೃಜಿಸಿದ್ದ ಈ ಜಗದ್ಭವ್ಯ ರಾಮಾಯಣವೆಂಬ ಮಾತನ್ನು ಸ್ವತಃ ಅವರೇ ಬರೆಯುತ್ತಾರೆಂದರೆ ರಾಮಾಯಣದ ಆಂತರ್ಯದಲ್ಲಿ ಸರ್ವಕಾಲಕ್ಕೂ ಸಲ್ಲುವ ಅದಿನ್ನೆಂಥಾ ಮಾಂತ್ರಿಕ ಶಕ್ತಿ ಇರಬೇಕು. ಅಂಥಾ ಮೂಲ ರಾಮಾಯಣದ ಮೇರುಕೃತಿಯ ಮಹಾಕರ್ತೃ ವಾಲ್ಮೀಕಿ ಅಸಲಿಗೆ ಸರ್ವಕಾಲಕ್ಕೂ ಸಲ್ಲುವ ಕವಿಯೇ ಸರಿ!

ವಾಲ್ಮೀಕಿಯ ಕಣ್ಣಿಗೆ ದೃಷ್ಟಿ
ಸೌಭಾಗ್ಯ ತಂದ ಕ್ರೌಂಚ ಪಕ್ಷಿಯ ಸೃಷ್ಟಿ ನನ್ನ ಕವಿತೆ

ಎಂದು ನನ್ನಂಥಾ ಸಾಮಾನ್ಯ ಕವಿ ಕೂಡ ತನ್ನ ಕವಿತೆಯಲ್ಲಿ ಬರೆದುಕೊಳ್ಳುತ್ತಾನೆಂದರೆ ವಾಲ್ಮೀಕಿಯ ಪ್ರಭೆ ಪ್ರಭಾವಗಳಿವೆ. ಕೇವಲ ಅಭಿಯಾನ, ಅಭೀಪ್ಸೆಗಳಿಗೆ ಮಾತ್ರ ವಾಲ್ಮೀಕಿ ನೆಪವಾಗಲಿಲ್ಲ. ಚರ್ಚೆಗೆ, ಜಿಜ್ಞಾಸೆಗೆ, ತಿರಸ್ಕಾರಕ್ಕೆ, ಅಪಹಾಸ್ಯ ಮಾಡುವ ಅನೇಕರಿಗೆ ಕೂಡ ವಾಲ್ಮೀಕಿ ಸೃಷ್ಟಿಸಿದ ರಾಮ, ರಾವಣ, ಸೀತೆ, ಹನುಮಂತ, ರಾಮರಾಜ್ಯಗಳು ಸದಾ ಕಾಲ ಚರ್ಚೆಯ ವಸ್ತುಗಳಾಗುವಷ್ಟರ ಮಟ್ಟಿಗೆ ವಾಲ್ಮೀಕಿ ರಾಮಾಯಣ ಕಥಾಹಂದರವನ್ನು ಒದಗಿಸಿಕೊಟ್ಟಿತು.

ಇಂದಿಗೂ ರಾಮಾಯಣ ನಡೆದೇ ಇಲ್ಲ. ರಾಮರಾಜ್ಯವೆಂಬುದೇ ಹುಸಿಕಲ್ಪನೆ, ರಾವಣ ದ್ರಾವಿಡರ ಪ್ರತಿನಿಧಿ, ರಾಮ ಆರ್ಯನ್ನರ ಸಂಕೇತ. ದ್ರಾವಿಡರು ಭಾರತದ ಮೂಲ ನಿವಾಸಿಗಳು. ಖೈಬರ್ ಮತ್ತು ಬೋಲಾನ್ ಕಣಿವೆಗಳ ಮೂಲಕ ಭಾರತಕ್ಕೆ ಬಂದ ಆರ್ಯನ್ನರು ಇಲ್ಲಿಯ ಮೂಲ ನಿವಾಸಿಗಳಾದ ದ್ರಾವಿಡರ ಮೇಲೆ ಆಕ್ರಮಣ ಮಾಡಿದರು. ದ್ರಾವಿಡರನ್ನು ತಮ್ಮ ತಂತ್ರ ಕುತಂತ್ರಗಳಿಂದ ದಾಸರನ್ನಾಗಿ ಮಾಡಿಕೊಂಡು ರಾಜ್ಯ ವಾಳಿದರು. ಹಾಗಾಗಿಯೇ ರಾಮನಲ್ಲಿ ಅರ್ಯರ ಗುಣ, ರಾವಣನಲ್ಲಿ ದ್ರಾವಿಡರ ಪಣ ಇತ್ತು, ಎಂದು ಚರ್ಚೆ ಶುರುವಾಗುವಷ್ಟು ಚಾರಿತ್ರಿಕ ವಾದ–ವಿವಾದಗಳಾದವು. ಚರ್ಚೆ ವಾದ–ವಿವಾದ ಪ್ರತಿವಾದಗಳು ಏನೇ ನಡೆಯಲಿ ಶತಶತಮಾನಗಳ ಹಿಂದೆ ಹುಟ್ಟಿದ ಮಹಾಕಾವ್ಯವೊಂದು ಎಷ್ಟೇ ಶತಮಾನ ಕಳೆದರೂ ಒಂದು ದೇಶದ ಮಹಾಕಾವ್ಯವಾಗಿ ಉಳಿದು, ಆಸ್ತಿಕರಿಗೆ, ನಾಸ್ತಿಕರಿಗೆ, ಧಾರ್ಮಿಕರಿಗೆ ಪ್ರಗತಿಪರರಿಗೆ, ಸನಾತನಿಗಳಿಗೆ, ವಿನೂತನಿಗಳಿಗೆ, ಕುತೂಹಲಿಗಳಿಗೆ ಎಲ್ಲರಿಗೂ ವಸ್ತುವಾಗುವ ಕಾವ್ಯವಾಗಿ ಹೋಯಿತಲ್ಲ! ಅಂಥಾ ಮಹಾಕಾವ್ಯ ಕೊಟ್ಟ ಕವಿ ಮಾತ್ರ ಎಲ್ಲ ಕಾಲಕ್ಕೂ ಸಲ್ಲುತ್ತಾನೆ. ಹಾಗೆ ಉಳಿವ ತಾಯಿಬೇರುಗಳನ್ನು ಹೆಣೆದ ಕಾವ್ಯ ಮಾತ್ರ ಎಲ್ಲ ಕಾಲಕ್ಕೂ ಉಳಿಯುತ್ತದೆ ಎನ್ನುವುದಕ್ಕೆ ವಾಲ್ಮೀಕಿ ರಾಮಾಯಣ ಸಾಕ್ಷಿ.

12ನೇ ಶತಮಾನದ ಪೂರ್ವಾರ್ಧದಲ್ಲಿ ಕನ್ನಡ ಸಾಹಿತ್ಯದಲ್ಲಿ ಉದಾತ್ತ ರಾವಣನನ್ನು ಸೃಷ್ಟಿಸಿ ನಾಗಚಂದ್ರ ಕವಿ ಬರೆದ ರಾಮಚಂದ್ರಚರಿತಾ ಪುರಾಣ, ಪ್ರಾಕೃತದ ಜೈನ ಸಂಪ್ರದಾಯದಲ್ಲಿ ವಿಮಲಸೂರಿ ಬರೆದ ಪವುಮಚರಿಯ ಮುಂತಾದ ರಾಮಾಯಣ ಕತೆಯ ಕಾವ್ಯಗಳನ್ನೂ ಎರಡು ಸಾವಿರ ವರ್ಷಗಳ ಚರಿತ್ರೆ ಇರುವ ಕನ್ನಡ ಸಾಹಿತ್ಯದಂಥ ಪ್ರಾದೇಶಿಕ ಭಾಷೆಯೊಂದನ್ನೇ ಜಾಲಾಡಿದರೂ ಸಾಕು ರಾಮಾಯಣದ ಕತೆಯಾಧಾರಿತ ಸಾಹಿತ್ಯ ಕೃಷಿ ರಾಶಿಯಾದೀತು. ಅದಕ್ಕಾಗಿ ಕವಿ ಕುಮಾರವ್ಯಾಸ ಹೇಳುವ ಮಾತೇನು ಗೊತ್ತಾ ತಿಣುಕಿದನು ಫಣಿರಾಯ ರಾಮಾಯಣದ ಭಾರದಲಿ ಎಂದು ಬರೆದುದನ್ನು ನೋಡಿದರೆ ಭೂಮಿಯನ್ನು ಹೊತ್ತ ಆದಿಶೇಷ ಈ ರಾಮಾಯಣವನ್ನು ಆಧರಿಸಿ ಬಂದಂಥ ಕೃತಿ ಶ್ರೇಣಿಯ ಭಾರವನ್ನು ಹೊರಲಾರದೆ ತಿಣುಕಿದನು ಎಂದರೆ ಏನರ್ಥ? ಅಂದರೆ ಭೂಮಿಯನ್ನೇ ಹೊತ್ತವನಿಗೆ ರಾಮಾಯಣವೇನು ಕಷ್ಟದ ಕೆಲಸವೇ? ಆದರೆ ಆ ಮಾತಿನ ಅರ್ಥ ಅದಲ್ಲ! ಭೂಮಿಯ ಭಾರಕ್ಕಿಂತ ರಾಮಾಯಣದ ಕೃತಿ ರಾಶಿಯ ಭಾರವೇ ಅಧಿಕವಾಗಿತ್ತೆಂದು ಹೇಳುವ ಉತ್ಪ್ರೇಕ್ಷೆ ಆ ಮಾತಿನಲ್ಲಿ ಕಾಣುತ್ತದೆ.

ವಾಲ್ಮೀಕಿ ರಾಮಾಯಣದ ಕತೆ ಇಂದು ಕೇವಲ ಸಾಹಿತ್ಯ ಚರ್ಚೆ, ಸಂವಾದ, ಜಗಳ, ವಾದ–ವಿವಾದ, ಪ್ರತಿವಾದಗಳಲ್ಲಷ್ಟೇ ಉಳಿದಿಲ್ಲ. ಅಮೆರಿಕಾದ ನಾಸಾದಂಥ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ರಾಮಸೇತು ಕುರಿತಂತೆ ಸಮುದ್ರದ ಆಳದಲ್ಲಿ ಅಳಿದು ಉಳಿದಿರುವ ಸೇತುವೆಯ ಪಳೆಯುಳಿಕೆಗಳನ್ನು ಸಂಶೋಧಿಸಿದೆ. ಜಗತ್ತಿನಾದ್ಯಂತ ಎಲೆಕ್ಟ್ರಾನಿಕ್ಸ್ ಮೀಡಿಯಾಗಳ ಮೂಲಕ ಅದನ್ನು ಬಿತ್ತರಿಸುವ ತಂತ್ರಜ್ಞಾನದ ಆವಿಷ್ಕಾರಕ್ಕೂ ವಾಲ್ಮೀಕಿ ರಾಮಾಯಣ ಗ್ರಾಸ ಒದಗಿಸಿದೆ. ನಮ್ಮ ಕಾಲದ ತಂತ್ರಜ್ಞಾನಕ್ಕೆ, ನಮ್ಮ ಕಾಲದ ಕವಿ ದರ್ಶನಕ್ಕೆ, ನಮ್ಮ ಕಾಲದ ಬುದ್ಧಿವಂತರ ಜಿಜ್ಞಾಸೆಗಳಿಗೆ, ನಮ್ಮ ಕಾಲದ ರಾಜಕಾರಣಕ್ಕೆ ಟಿ.ವಿ. ಚಾನೆಲ್ಲುಗಳ ಮನರಂಜನೆಗೆ, ಆಸ್ತಿಕರಿಗೆ, ನಾಸ್ತಿಕರಿಗೆ, ಕಲೆಗೆ, ಶಿಲೆಗೆ, ರಾಮರಾಜ್ಯದ ಪರಿಕಲ್ಪನೆಗೆ ಒತ್ತಾಸೆ ಒದಗಿಸಿದ ಮಹಾಕಾವ್ಯವೇ ರಾಮಾಯಣ.

ಮಿಥುನ ಸುಖದಲ್ಲಿದ್ದ ಕ್ರೌಂಚಪಕ್ಷಿಯನ್ನು ಕೊಂದ ಬೇಡನ ಪ್ರಸಂಗ ಮಹರ್ಷಿ ವಾಲ್ಮೀಕಿಯ ಎದೆಯಲ್ಲಿ ಭರತಖಂಡದ ಮಹಾಕಾವ್ಯದ ಬೀಜಗಳನ್ನು ಬಿತ್ತುತ್ತಿತ್ತು. ಕ್ರೌಂಚ ಮಿಥುನದ ಗಂಡು ಹಕ್ಕಿಯ ಸಾವಿಗೆ ಶೋಕಿಸಿದ ವಾಲ್ಮೀಕಿಯ ಶೋಕದಲ್ಲಿ ಶ್ಲೋಕ ಹುಟ್ಟಿತು. ಕೋಪ ಶಾಪವಾಯಿತು. ಹಾಗೆ ಹುಟ್ಟಿದ ವಾಲ್ಮೀಕಿ ರಾಮಾಯಣದ ಶ್ರೀರಾಮನ ಕಥೆ 24,000 ಶ್ಲೋಕಗಳಲ್ಲಿ ಬೌದ್ಧಿಕವಾಗಿ ರಚನೆಗೊಂಡು ಮಹರ್ಷಿಯ ಮನಸ್ಸಿನಲ್ಲಿ ಮೂಡಿತು. ಆ ರಾಮಕತೆಯ ಕಾವ್ಯವನ್ನು ಸ್ವತಃ ವಾಲ್ಮೀಕಿ ಲವ–ಕುಶರಿಗೆ ಹೇಳಿ ತನ್ಮೂಲಕ ಜನಮಾನಸಕ್ಕೆ ಮುಟ್ಟಿಸಿದರು. ಒಂದರ್ಥದಲ್ಲಿ ವಾಲ್ಮೀಕಿ ಭಾರತದ ಆದಿಕವಿ ಎಂದರೆ ಪ್ರಾಯಶಃ ಸರಿ ಇರಬಹುದು. ಒಂದು ಮೂಲದ ಪ್ರಕಾರ ವಾಲ್ಮೀಕಿಗೆ ರಾಮಾಯಣದ ಕಾವ್ಯ ಪ್ರೇರಣೆಯಾದುದು ಎಲ್ಲಿಂದ ಎಂದು ಜಾಡು ಹಿಡಿದು ಹೊರಟರೆ ಕ್ರೌಂಚ ಮಿಥುನದ ಘಟನೆಯಂತೆಯೇ ಮತ್ತೊಂದು ಪೌರಾಣಿಕ ಸತ್ಯ ನಮಗೆ ಸಿಗುತ್ತದೆ. ಅದೇ ಚತುರ್ಮುಖನ ಆದೇಶ, ನಾರದರ ಸಂದೇಶ ಈ ಎರಡರ ಉಕ್ತಿಯಂತೆ ವಾಲ್ಮೀಕಿ ಎಂಬ ಮಹಾ ಕವಿಯ ಮನಸ್ಸಿನಲ್ಲಿ ವಾಚಕರ ವಾಣಿಯೊಂದು ಸದ್ದಿಲ್ಲದೆ ಉಲಿಯುತ್ತಿತ್ತು. ಎಂಟು ಅಕ್ಷರದ ನಾಲ್ಕು ಪಾದಗಳ ಅಪರೂಪದ ಅನುಷ್ಟುಪ್ ಛಂದಸ್ಸಿನಲ್ಲಿ ರಾಮಾಯಣ ಸೃಷ್ಟಿಯಾಯಿತು. ವಾಲ್ಮೀಕಿ ಪಾತ್ರಗಳನ್ನು ಸೃಷ್ಟಿಸಿದರು. ತಾವೇ ಪಾತ್ರವಾದರು. ಅವರ ಆಶ್ರಮದಲ್ಲಿಯೇ ಲವಕುಶರ ಜನನವಾಯಿತು. ಮಕ್ಕಳಿಬ್ಬರನ್ನು ಬೆಳೆಸಿದರೆ ಹೇಗೆ ಬೆಳೆಸಬಹುದೆಂಬ ನೈತಿಕ ಮಾದರಿಯೊಂದನ್ನು ಭರತಖಂಡಕ್ಕೆ ತೋರಿಸಿಕೊಟ್ಟರು. ಜಾನಕಿಯ ಕಣ್ಣೀರೊರೆಸಿ ಜನಕನ ಜಾಗದಲ್ಲಿ ನಿಂತರು, ಇದೆಲ್ಲವೂ ಕಾವ್ಯಸತ್ಯ.

ಹಾಗೆ ನೋಡಿದರೆ ರಾಮಾಯಣ ಮತ್ತು ಮಹಾಭಾರತಗಳು ಸಂಖ್ಯೆಯ ದೃಷ್ಟಿಯಿಂದ ಕುತೂಹಲ ಹುಟ್ಟಿಸುತ್ತವೆ. ರಾಮಾಯಣ ಏಳು ಕಾಂಡಗಳಲ್ಲಿ ಕತೆ ಹೇಳುತ್ತದೆ. ಮಹಾಭಾರತ ಹದಿನೆಂಟು ಪರ್ವಗಳಲ್ಲಿ ಕತೆ ಹೇಳುತ್ತದೆ. ಹಾಗೇ ಸುಮ್ಮನೆ ಗಮನಿಸಿ ನೋಡಿ, ರಾಮಾಯಣದ ಅಧ್ಯಾಯಗಳು ಏಳು, ಹಾಗೆಯೇ ಇಡೀ ರಾಮಾಯಣದ ಕತೆಯ ಕಕ್ಷೆಯಲ್ಲಿ ಬಹಳ ಮುಖ್ಯವಾಗಿ ಸುತ್ತುವ ಪಾತ್ರಗಳ ಸಂಖ್ಯೆ ಕೂಡ ಏಳು. ರಾಮ, ಲಕ್ಷ್ಮಣ, ಭರತ, ಶತ್ರುಘ್ನ, ಸೀತೆ, ಹನುಮಂತ, ರಾವಣ ಹೀಗೆ ಗಮನಿಸುತ್ತಾ ಹೋದರೆ ಇಡೀ ಸಂಗೀತ ಶಾಸ್ತ್ರಕ್ಕೆ ಸ್ವರಗಳ ಸಂಖ್ಯೆ ಕೂಡ ಏಳು, ಇರುವ ಲೋಕಗಳ ಸಂಖ್ಯೆ ಏಳು, (ಸಪ್ತಲೋಕಗಳು) ಮುಖ್ಯವಾದ ಋಷಿಗಳು ಏಳು, ಆಕಾಶದಲ್ಲಿ ಈಗಲೂ ಸಪ್ತರ್ಷಿ ಮಂಡಲವಿದೆ. ವಾರದ ದಿನಗಳ ಸಂಖ್ಯೆ ಏಳು. ದಶಾವತಾರಗಳಲ್ಲಿ ಶ್ರೀರಾಮನದು ಏಳನೆಯ ಅವತಾರ. ಹಾಗೆಯೇ ರಾಮನ ನಕ್ಷತ್ರ ಪುನರ್ವಸು ನಕ್ಷತ್ರಗಳ ಸಾಲಿನಲ್ಲಿ ಏಳನೆಯದು. ಹೇಗಿದೆ ನೋಡಿ! Numerology matching (ಸಂಖ್ಯಾಶಾಸ್ತ್ರ ಹೊಂದಾಣಿಕೆ) ರಾಮಾಯಣ ವೆಂದರೆ ಏಳು. ಮಹಾಭಾರತವೆಂದರೆ ಹದಿನೆಂಟು, ಅಲ್ಲಿ ನೋಡಿ ಕುರುಕ್ಷೇತ್ರ ಯುದ್ಧ ನಡೆದದ್ದು ಹದಿನೆಂಟು ದಿನ. ಭಾರತದ ಕಥೆ ವಿಸ್ತಾರಗೊಂಡದ್ದು ಹದಿನೆಂಟು ಪರ್ವದಲ್ಲಿ, ನಮ್ಮ ಎರಡೂ ಮಹಾ ಕಾವ್ಯಗಳಾದ ರಾಮಾಯಣ ಮತ್ತು ಮಹಾ ಭಾರತಗಳನ್ನು ಏಳು ಮತ್ತು ಹದಿನೆಂಟು ಎಂಬ ಸಂಖ್ಯೆಗಳು ಆವರಿಸಿವೆ. ಕ್ರೌಂಚ ಮಿಥುನದ ಗಂಡುಹಕ್ಕಿಯ ಸಾವಿನ ಸಾಮಿಪ್ಯದಲ್ಲಿ ವಾಲ್ಮೀಕಿಗೆ ಉಮ್ಮಳಿಸಿ ಬಂದ ಶೋಕ ಶ್ಲೋಕವಾಯಿತು. ಅವರು ಸೃಷ್ಟಿಸಿದ ಪಾತ್ರ ಪ್ರಪಂಚ ಭರತ ಖಂಡದ ಮಹಾಕಾವ್ಯವಾಯಿತು. ಅದರಲ್ಲಿ ಎಲ್ಲಾ ಪಾತ್ರಗಳ ಪೂರ್ಣ ಹೆಸರುಗಳನ್ನು ನೆನಪಿಟ್ಟು ಕೊಳ್ಳುವುದೇ ಕಷ್ಟ ಸಾಧ್ಯ, ಇನ್ನು ಹೊಸ ಸೃಷ್ಟಿ ಮಾತು ಎಲ್ಲಿಂದ! ಅದೇನೇ ಇರಲಿ, ಮಂಗಳವಾರ ವಾಲ್ಮೀಕಿ ಜಯಂತಿ, ಅದರ ನೆವದಲ್ಲಿ ನಮ್ಮ ನೆಲದ ಎರಡು ಮಹಾಕಾವ್ಯಗಳು ಹಾಗೂ ಇಬ್ಬರು ಮಹಾ ಕವಿಗಳ ಕುರಿತು ಚಿಕ್ಕದೊಂದು ಮೇರು ಕವಿಯಾದ ವಾಲ್ಮೀಕಿಗೆ ಇಂದು ನಮ್ಮದೊಂದು ನುಡಿನಮನ. ಏನಂತೀರಿ!

ಮೈಸೂರಲ್ಲಿ ಅಪರೂಪದ ಅಹೋರಾತ್ರಿ ಸಂಗೀತ ಸಂಭ್ರಮ








ಮೈಸೂರು: ಮೈಸೂರು 'ಹಿಂದೂಸ್ತಾನಿ ಸಂಗೀತ ಕಲಾವಿದರ ಒಕ್ಕೂಟ', ಇದೇ ಶನಿವಾರ, ಅ.11 ರಂದು ರಾತ್ರಿ 9ರಿಂದ ಬೆಳಗ್ಗೆ 6 ಗಂಟೆಯವರೆಗೆ ಅತ್ಯಂತ ಅಪರೂಪದ ಅಹೋರಾತ್ರಿ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಿದೆ.

ಹಿಂದೂಸ್ತಾನಿ ಸಂಗೀತದ ರಾಗಗಳನ್ನು ಹಾಡುವ ಸಮಯ ನಿಗದಿಗೊಳಿಸಲಾಗಿದೆ. ಆದರೆ, ಹೆಚ್ಚಿನ ಕಾರ್ಯಕ್ರಮಗಳು ಸಂಜೆಯ ಹೊತ್ತಿನಲ್ಲಿಯೇ ನಡೆಯುವ ಕಾರಣ, ರಾತ್ರಿಯ ರಾಗಗಳನ್ನು ಕೇಳುವ ಅವಕಾಶವಾಗುವುದಿಲ್ಲ. ಮರೆಯಾಗುತ್ತಿರುವ ರಾತ್ರಿಯ ಮಧುರ ರಾಗಗಳನ್ನು ಕೇಳುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಮೈಸೂರಿನಲ್ಲಿರುವ ಕಲಾವಿದರು ಮತ್ತು ಆಯ್ದ ರಸಿಕ ಪೋಷಕರು ಜೊತೆ ಸೇರಿ ಆಯೋಜಿಸುತ್ತಿದ್ದಾರೆ.

ಕೆಎಸ್‌ಆರ್‌ಟಿಸಿ ಲೇಔಟ್‌ನಲ್ಲಿರುವ 'ಸ್ವರಧಾರಾ' ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ವೀರಭದ್ರಯ್ಯ ಹಿರೇಮಠ, ಶಾರದಾಭಟ್ ಕಟ್ಟಿಗೆ, ಶ್ರೀಮತಿ ದೇವಿ, ರಮೇಶ್ ಕೋಲ್ಕುಂದ ಇವರು ಗಾಯನ ನಡೆಸಿಕೊಡಲಿದ್ದಾರೆ. ಸಮೀರ್ ರಾವ್–ಹಿಂದೂಸ್ತಾನಿ ಬಾಂಸುರಿ ಮತ್ತು ಚಂದನ್ ಕುಮಾರ್ ಕರ್ನಾಟಕಿ ಕೊಳಲು ವಾದನ ನಡೆಸಿಕೊಡಲಿದ್ದಾರೆ. ಭೀಮಾಶಂಕರ್ ಬಿದನೂರ್–ಪಂಚಮಿ ಬಿದನೂರ್, ದುಂಡಯ್ಯ–ರಮೇಶ್ ಧನ್ನೂರು ಮತ್ತು ಮಾಸ್ಟರ್ ಶುಭಾಂಗ ಹೆಬ್ಬಾರ್ – ತಬಲಾ ಸೋಲೋ ವಾದನವಿರುತ್ತದೆ. ಹಾರ್ಮೋನಿಯಂನಲ್ಲಿ ಶ್ರೀರಾಮ್ ಭಟ್, ಹರಿಕೃಷ್ಣ ಮತ್ತು ರಮೇಶ್ ಕೋಲ್ಕುಂದ. ಪೃಥ್ವಿ ಭಾಸ್ಕರ್ ಮತ್ತು ರಾಧೇಶ್–ವಯೋಲಿನ್ ಮತ್ತು ಮೃದಂಗದಲ್ಲಿ ಸಹಕರಿಸಲಿದ್ದಾರೆ.


ಅಹೋರಾತ್ರಿ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ ಎಂಬುದು ಈ ಕ್ಷೇತ್ರದಲ್ಲಿ ತುಂಬಾ ಹಳೆಯ ಕಲ್ಪನೆ. ಪುಣೆಯಲ್ಲಿ ಭೀಮಸೇನ್ ಜೋಶಿಯವರು ಆರಂಭಿಸಿದ 'ಸವಾಯಿ ಗಂಧರ್ವ ಸಂಗೀತೋತ್ಸವ' ಇತ್ತೀಚೆಗಿನವರೆಗೂ ಅಹೋರಾತ್ರಿ ನಡೆಯುತ್ತಿತ್ತು. ಕುಂದಗೋಳದಲ್ಲಿ ನಡೆಯುವ ಸವಾಯಿ ಗಂಧರ್ವ ಸಂಗೀತೋತ್ಸವ ಇನ್ನೂ ಎರಡು ದಿನಗಳ ಕಾಲ ಅಹೋರಾತ್ರಿ ನಡೆಯುತ್ತಿದೆ. ಗದುಗಿನ 'ವೀರೇಶ್ವರ ಪುಣ್ಯಾಶ್ರಮ'ದಲ್ಲಿ ನಡೆಯುವ ಜಾತ್ರಾ ಮಹೋತ್ಸವದ ಸಂಗೀತ ಕಾರ್ಯಕ್ರಮ, ಉತ್ತರದ ಕೋಲ್ಕತ್ತಾದಲ್ಲಿ ನಡೆಯುವ ಡೋವರ್ ಲೇನ್ ಮ್ಯೂಸಿಕ್ ಫೆಸ್ಟಿವಲ್, ಅಹಮದಾಬಾದ್‌ನ 'ಸಪ್ತಕ್', ಜಲಂಧರ್‌ನ 'ಹರಿವಲ್ಲಭ' ಸಂಗೀತೋತ್ಸವ ಇವೆಲ್ಲವೂ ನಮ್ಮ ದೇಶದಲ್ಲಿ ನಡೆಯುವ ಪ್ರತಿಷ್ಠಿತ ಅಹೋರಾತ್ರಿ ಸಂಗೀತ ಕಾರ್ಯಕ್ರಮಗಳು.

ಧಾರವಾಡ–ಹುಬ್ಬಳ್ಳಿಗಳಲ್ಲೂ ಮೊದಲೆಲ್ಲಾ ನಡೆಯುತ್ತಿದ್ದ ಅಹೋರಾತ್ರಿ ಕಾರ್ಯಕ್ರಮಗಳು ಕೇಳುಗರ ಭಾಗವಹಿಸುವಿಕೆ ಇಲ್ಲದೆ, ಸೊರಗಿ, ಮಧ್ಯರಾತ್ರಿಯ ಅವಧಿಗೆ ಸೀಮಿತವಾಗಿರುವುದನ್ನು ಗಮನಿಸಬಹುದು. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ಸಂಗೀತದ ಒಂದು ಅಪೂರ್ವ ಅನುಭವ ಪಡೆಯುವ ಉದ್ದೇಶದಿಂದ ಆಯೋಜಿಸಲ್ಪಟ್ಟಿರುವ ಈ ಕಾರ್ಯಕ್ರಮಕ್ಕೆ ಪೋಷಕರ, ಆಸಕ್ತರ ಬೆಂಬಲದ ಅಗತ್ಯವಿದೆ. ರಾತ್ರಿಯಿಂದ ಬೆಳಗ್ಗೆವರೆಗೆ ಕೂತು ಸಂಗೀತ ಕೇಳುವ ವ್ಯವಧಾನ, ತಾಳ್ಮೆ ಕಡಿಮೆ ಆಗುತ್ತಿರುವ ಈ ಹೊತ್ತಿನಲ್ಲಿ ಸಂಗೀತ ರಸಿಕರನ್ನು ಜೊತೆಯಲ್ಲಿ ಹಿಡಿದಿಟ್ಟುಕೊಳ್ಳುವ ಉದ್ದೇಶದಿಂದ, ಬೆಳಗ್ಗೆವರೆಗೂ ಜೊತೆಯಲ್ಲಿರಲು ಸಾಧ್ಯವಾಗುವವರಿಗಷ್ಟೇ ಈ ಕಾರ್ಯಕ್ರಮಕ್ಕೆ ಸ್ವಾಗತವಿರುತ್ತದೆ ಎಂಬುದು ಆಯೋಜಕರ ಅಭಿಪ್ರಾಯ. ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಂಗೀತ ಸವಿಯಲು ಬಯಸುವವರು ಡಾ.ಎಂ.ಸಿ.ಮನೋಹರ್, ಮೊ.9901225072 ಸಂಪರ್ಕಿಸಬಹುದಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಭಾರತೀಯ ರೈಲು ಬೋಗಿಗಳ ಸ್ವಚ್ಛತೆಯ ಹೊಸ ಅಧ್ಯಾಯ

ಸ್ವದೇಶಿ ಡ್ರೋನ್ ತಂತ್ರಜ್ಞಾನ ಬಳಕೆಯ ಪರೀಕ್ಷೆ ಯಶಸ್ವಿ



ನವದೆಹಲಿ: ಭಾರತೀಯ ರೈಲ್ವೆ ಮೂಲಸೌಕರ್ಯ ನವೀಕರಣದತ್ತ ದೊಡ್ಡ ಹೆಜ್ಜೆ ಇಟ್ಟಿದ್ದು, ಈಗ ಸ್ವದೇಶಿ ಡ್ರೋನ್ ತಂತ್ರಜ್ಞಾನವನ್ನು ಬಳಸಿ ರೈಲು ಬೋಗಿಗಳನ್ನು ತೊಳೆಯುವ ಮತ್ತು ನಿರ್ವಹಿಸುವ ಹೊಸ ಯುಗವನ್ನು ಪ್ರಾರಂಭಿಸುತ್ತಿದೆ. ಗುಜರಾತ್‌ನ ಉಧ್ನಾ–ಬ್ರಹ್ಮಪುರ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲು ಇತ್ತೀಚೆಗೆ ಈ ಪ್ರಯೋಗಾತ್ಮಕ ಯೋಜನೆಯ ಭಾಗವಾಗಿ ಪ್ರಥಮ ಬಾರಿಗೆ ಹೆಚ್ಚಿನ ಒತ್ತಡದ ಡ್ರೋನ್‌ಗಳ ಮೂಲಕ ಸಂಪೂರ್ಣ ತೊಳೆಯುವ ಕಾರ್ಯಾಚರಣೆಗೆ ಒಳಪಟ್ಟಿತು.

ಇದು ಭಾರತದ ರೈಲ್ವೆ ಇತಿಹಾಸದಲ್ಲಿ ವಿಶಿಷ್ಟ ಘಟನೆ ಎನ್ನಬಹುದು, ಏಕೆಂದರೆ ಈವರೆಗೂ ರೈಲು ಬೋಗಿಗಳನ್ನು ತೊಳೆಯುವುದು ಹಸ್ತಚಾಲಿತ ಶ್ರಮಾಧಾರಿತ ವಿಧಾನಗಳ ಮೂಲಕ ನಡೆಯುತ್ತಿತ್ತು. ಆದರೆ ಈ ಹೊಸ ಡ್ರೋನ್ ವಿಧಾನವು ಸಮಯ, ಶ್ರಮ ಮತ್ತು ವೆಚ್ಚ ಮೂರೂ ಕಡೆಗಳಲ್ಲಿ ದೊಡ್ಡ ಬದಲಾವಣೆಯನ್ನು ತರುತ್ತಿದೆ.

ಪ್ರಾಯೋಗಿಕ ಪರೀಕ್ಷೆಯಲ್ಲಿ ದಾಖಲೆ ಸಮಯದಲ್ಲಿ 25 ಬೋಗಿಗಳ ಶುದ್ಧೀಕರಣ: ಸೂರತ್ ಮತ್ತು ಉಧ್ನಾ ರೈಲ್ವೆ ನಿಲ್ದಾಣಗಳಲ್ಲಿ ನಡೆಸಲಾದ ಪ್ರಾಯೋಗಿಕ ಪರೀಕ್ಷೆಯಲ್ಲಿ, ವಿಶೇಷವಾಗಿ ವಿನ್ಯಾಸಗೊಳಿಸಿದ ಡ್ರೋನ್ ವ್ಯವಸ್ಥೆ ಕೇವಲ 30 ನಿಮಿಷಗಳಲ್ಲಿ 25 ಬೋಗಿಗಳನ್ನು ಶುದ್ಧೀಕರಿಸಿತು. ಸಾಮಾನ್ಯವಾಗಿ 2.5 ರಿಂದ 3 ಗಂಟೆಗಳವರೆಗೆ ಹಿಡಿಯುವ ಕೈತೊಳೆಯುವ ಪ್ರಕ್ರಿಯೆಯನ್ನು ಇದು ಗಣನೀಯವಾಗಿ ಕಡಿತಗೊಳಿಸಿದೆ.

ಡ್ರೋನ್ ಅನ್ನು ಬೋಗಿಯ ಎತ್ತರಕ್ಕೆ ಹಾರಿಸಿ, ಹೆಚ್ಚಿನ ಒತ್ತಡದ ನೀರಿನ ಸ್ಪ್ರೇ ಮೂಲಕ ಸಂಪೂರ್ಣ ತೊಳೆಯುವ ಕಾರ್ಯಾಚರಣೆ ನಡೆಸಲಾಯಿತು. ಈ ವಿಧಾನವು ವೇಗದ ಜೊತೆಗೆ ಹೆಚ್ಚಿನ ಪರಿಣಾಮಕಾರಿತ್ವ ಮತ್ತು ಕಡಿಮೆ ಶ್ರಮದಾಯಕತೆ ನೀಡುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇವಲ ಬೋಗಿಗಳಿಗೆ ಮಾತ್ರವಲ್ಲ: ಈ ಕಸ್ಟಮ್–ಮೇಡ್ ಡ್ರೋನ್ ಕೇವಲ ರೈಲು ಬೋಗಿಗಳನ್ನು ತೊಳೆಯುವಷ್ಟರಲ್ಲದೆ, ರೈಲ್ವೆ ನಿಲ್ದಾಣಗಳಲ್ಲಿ ಇರುವ ರೂಫಿಂಗ್ ಶೀಟ್‌ಗಳು, ಎತ್ತರದ ಕಟ್ಟಡಗಳು ಮತ್ತು ತಲುಪಲು ಕಷ್ಟವಾದ ಮೂಲಸೌಕರ್ಯಗಳ ಶುದ್ಧೀಕರಣಕ್ಕೂ ಬಳಕೆಯಾಗಬಹುದು. ಇದರಿಂದ ರೈಲ್ವೆಯ ನಿರ್ವಹಣಾ ಕಾರ್ಯಾಚರಣೆಯ ವ್ಯಾಪ್ತಿ ಮತ್ತಷ್ಟು ವಿಸ್ತಾರವಾಗಲಿದೆ.

ಸ್ಥಳೀಯ ಯುವಕರ ಹೊಸ ಆವಿಷ್ಕಾರ: ರೈಲ್ವೆ ಮೂಲಗಳ ಪ್ರಕಾರ, ಈ ತಂತ್ರಜ್ಞಾನವನ್ನು ಸೂರತ್‌ನ ಇಬ್ಬರು ಯುವ ನವೋದ್ಯಮಿಗಳು ಅಭಿವೃದ್ಧಿಪಡಿಸಿದ್ದಾರೆ. ಆಶ್ಚರ್ಯದ ಸಂಗತಿಯೇನಂದರೆ, ಈ ವ್ಯವಸ್ಥೆಯ ಒಟ್ಟು ಅಂದಾಜು ವೆಚ್ಚ ಕೇವಲ 3–4 ಲಕ್ಷ ರೂ. ಮಾತ್ರವಾಗಿದೆ. ಈ ಕಡಿಮೆ ವೆಚ್ಚದಲ್ಲಿ ಪ್ರಭಾವಶಾಲಿ ಫಲಿತಾಂಶ ನೀಡುತ್ತಿರುವುದು ರೈಲ್ವೆ ಅಧಿಕಾರಿಗಳಿಗೆ ಖುಷಿಯ ವಿಷಯವಾಗಿದೆ.

ಶೀಘ್ರದಲ್ಲೇ ವ್ಯಾಪಕ ಬಳಕೆ ಸಾಧ್ಯತೆ: ಈ ಪ್ರಯೋಗದ ಸಮಯದಲ್ಲಿ ಹಿರಿಯ ರೈಲ್ವೆ ಅಧಿಕಾರಿಗಳು ಹಾಜರಿದ್ದು, ಫಲಿತಾಂಶಗಳಿಂದ ತೀವ್ರವಾಗಿ ಪ್ರಭಾವಿತರಾಗಿದ್ದಾರೆ. ಇದನ್ನೆತ್ತಿ ಅವರು ರೈಲ್ವೆ ಮಂಡಳಿಗೆ ಅಧಿಕೃತ ಅನುಮೋದನೆಗಾಗಿ ಪ್ರಸ್ತಾವನೆ ಕಳುಹಿಸಿದ್ದಾರೆ. ಅನುಮೋದನೆ ದೊರೆತರೆ, ಡ್ರೋನ್‌ಗಳು ಶೀಘ್ರದಲ್ಲೇ ಭಾರತೀಯ ರೈಲ್ವೆಯ ನಿರ್ವಹಣಾ ಪಡೆಯಲ್ಲಿ, ವಿಶೇಷವಾಗಿ ಎಕ್ಸ್‌ಪ್ರೆಸ್ ಹಾಗೂ ದೀರ್ಘಪ್ರಯಾಣದ ರೈಲುಗಳಲ್ಲಿ, ನಿಯಮಿತವಾಗಿ ಬಳಸಲಾಗುವ ಸಾಧ್ಯತೆ ಇದೆ.

ದಸರಾ ಹೆಸರಲ್ಲಿ ರಾಜ್ಯ ಸರ್ಕಾರದಿಂದ ಲೂಟಿ

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಆರೋಪ



ದಸರಾ ಗೋಲ್ಡ್ ಕಾರ್ಡ್ ಪಾಸ್.

ಮೈಸೂರು, ಅ.6(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಹೆಸರಿನಲ್ಲಿ ರಾಜ್ಯ ಸರ್ಕಾರ ಲೂಟಿ ಮಾಡಿದ್ದು, ಈ ಕುರಿತು ನಿವೃತ್ತ ನ್ಯಾಯಮೂರ್ತಿಗಳಿಂದ ತನಿಖೆ ಆಗಬೇಕು ಮತ್ತು ತೆರೆದ ವಾಹನದಲ್ಲಿ ಮೊಮ್ಮಗನೊಂದಿಗೆ ಮೆರವಣಿಗೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವರು ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ರವಿಕುಮಾರ್, ರಾಜ್ಯ ಸರ್ಕಾರ ದಸರಾ ಏರ್‌ಶೋ ಟಿಕೆಟ್, ಗೋಲ್ಡ್ ಕಾರ್ಡ್ ಮಾರಾಟ, ಯುವ ದಸರಾ ಹಾಗೂ ಫಲಪುಷ್ಪ ಪ್ರದರ್ಶನಕ್ಕೆ ಟಿಕೆಟ್ ದುಬಾರಿ ಮಾಡುವ ಮೂಲಕ ಲೂಟಿ ಹೊಡೆದಿದೆ ಎಂದು ದೂರಿದರು.

ರಾಜಕೀಯ ನಾಯಕರು, ಅಧಿಕಾರಿಗಳು ಮತ್ತು ಅವರ ಕುಟುಂಬಸ್ಥರಿಂದ ಸರ್ಕಾರಿ ವಾಹನಗಳ ದುರ್ಬಳಕೆ ಆಗಿದೆ. ಅವರೆಲ್ಲರಿಗೂ ವಿಶೇಷ ಸವಲತ್ತು ಒದಗಿಸಲಾಗಿದ್ದು, ವಿವಿಐಪಿ ಕೋಟಾದಡಿ ಉಚಿತವಾಗಿ ಎಲ್ಲಾ ಕಾರ್ಯಕ್ರಮಗಳಿಗೂ ಬಿಡಲಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳಾಗಲಿ ಅಥವಾ ನಗರ ಪೊಲೀಸ್ ಆಯುಕ್ತರಾಗಲಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕಿಡಿಕಾರಿದರು.

ಈ ವರ್ಷದ ದಸರಾ ಕಾರ್ಯಕ್ರಮಗಳು, ಉಸ್ತುವಾರಿ ಸಚಿವರ ಹಿಂಬಾಲಕರ ಕಾರ್ಯಕ್ರಮವೋ ಅಥವಾ ಸರ್ಕಾರ ನಡೆಸುವ ಜನಸಾಮಾನ್ಯರ ಕಾರ್ಯಕ್ರಮಗಳೋ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ. ಸಾರ್ವಜನಿಕರ ಪ್ರಶ್ನೆಗೆ ಮುಖ್ಯಮಂತ್ರಿಗಳು ಉತ್ತರಿಸಬೇಕು. ಹಾಗೆಯೇ ದಸರಾ ಲೆಕ್ಕಾಚಾರದ ಕುರಿತು ಪಾರದರ್ಶಕವಾಗಿ ಚರ್ಚೆಯಾಗಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು, ತಮ್ಮ ಮೊಮ್ಮಗನನ್ನು ಸರ್ಕಾರಿ ವಾಹನದಲ್ಲಿ ಬಿಳಿ ಬಟ್ಟೆ ತೊಡಿಸಿ ಕರೆದುಕೊಂಡು ಬರುವ ಅಗತ್ಯವೇನಿತ್ತು. ಇದು ಸಂವಿಧಾನ ಆಶಯಕ್ಕೆ ವಿರುದ್ಧವಲ್ಲವೇ ಎಂದು ಪ್ರಶ್ನಿಸಿದ ಅವರು, ಈ ಸಂಬಂಧ ಉಸ್ತುವಾರಿ ಸಚಿವರು ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು. ಇದನ್ನು ಪ್ರಶ್ನಿಸುವ ನೈತಿಕತೆಯನ್ನು ಬಿಜೆಪಿಯೂ ಕಳೆದುಕೊಂಡಿದೆ. ಈ ಹಿಂದೆ ಎಸ್.ಟಿ.ಸೋಮಶೇಖರ್ ಅವರು, ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗಲೂ ದಸರಾ ಪಾಸ್ ದುರ್ಬಳಕೆಯಾಗಿತ್ತು ಎಂದು ಆರೋಪಿಸಿದರು. ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ನಗರಾಧ್ಯಕ್ಷ ನಾಗೇಂದ್ರ, ನಾಗರಾಜು, ರವಿ, ರಾಜೇಂದ್ರ ಮತ್ತಿತರರಿದ್ದರು.

ಇಂದು ಮೈಸೂರಲ್ಲಿ ಮಹಿಳಾ ಕಾಂಗ್ರೆಸ್ ವಿಶೇಷ ಸಭೆ

ಮೈಸೂರು: ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಸೌಮ್ಯ ರೆಡ್ಡಿ ಸೂಚನೆಯಂತೆ ಜಿಲ್ಲಾ ಹಂತದ ಮಹಿಳಾ ಪದಾಧಿಕಾರಿಗಳ ವಿಶೇಷ ಸಭೆಯನ್ನು ಅ.7ರಂದು ಬೆಳಗ್ಗೆ 11.30ಕ್ಕೆ ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಏರ್ಪಡಿಸಲಾಗಿದೆ.

ಮೈಸೂರು ಡಿಸಿಸಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಜಿಲ್ಲಾ ಮಹಿಳಾ ಕಾಂಗ್ರೆಸ್ ಉಸ್ತುವಾರಿ ಶೈಲ ನೀತಾ ಡಿಸೋಜ ಭಾಗವಹಿಸಲಿದ್ದಾರೆ ಎಂದು ಮೈಸೂರು ಡಿಸಿಸಿ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಿಂಗಾಯತ ಪ್ರತ್ಯೇಕ ಧರ್ಮ ಮಾನ್ಯತೆಗೆ ಸಚಿವ ಎಂಬಿಪಿ ಒತ್ತಾಯ

ಬೆಂಗಳೂರು,ಅ.6(ಕೆಎಂಶಿ)– ಲಿಂಗಾಯತ ಸಮುದಾಯಕ್ಕೆ ಪ್ರತ್ಯೇಕ ಧರ್ಮ ಮಾನ್ಯತೆ ನೀಡಬೇಕು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಇಂದಿಲ್ಲಿ ಒತ್ತಾಯಿಸಿದ್ದಾರೆ.

ವೀರಶೈವ–ಲಿಂಗಾಯತ ಸಮುದಾಯಕ್ಕೆ ಪ್ರತ್ಯೇಕ ಧರ್ಮ ಮಾನ್ಯತೆ ನೀಡುವಂತೆ ಸಚಿವ ಈಶ್ವರ್ ಖಂಡ್ರೆ ಆಗ್ರಹಿಸಿರುವ ಬೆನ್ನಲ್ಲೇ ಎಂ.ಬಿ.ಪಾಟೀಲ್ ಪ್ರತ್ಯೇಕವಾಗಿ ಈ ಹೇಳಿಕೆ ನೀಡಿದ್ದಾರೆ.

ಜೈನ್, ಸಿಖ್, ಬೌದ್ಧರಿಂದ ಯಾರಿಗೂ ತೊಂದರೆ ಆಗಿಲ್ಲ, ಹಾಗೆಯೇ ಲಿಂಗಾಯತ ಧರ್ಮೀಯರಿಂದಲೂ ತೊಂದರೆಯಾಗಿಲ್ಲ ಎಂದಿದ್ದಾರೆ. ಹಿಂದೆ ಪ್ರತ್ಯೇಕ ಧರ್ಮಕ್ಕೆ ಒತ್ತಾಯ ಮಾಡಿದಾಗ ಜಾತಿ ವಿಭಜನೆ ಆರೋಪವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತಲೆಗೆ ಕಟ್ಟಿದ್ದರು. ಆದರೆ, ಹಿಂದೆ ಆಡಿದಂತೆ ಈಗ ಆಟವಾಡಲು ಸಾಧ್ಯವಿಲ್ಲ. ಭೌಗೋಳಿಕವಾಗಿ ನಾವೆಲ್ಲಾ ಭಾರತೀಯರು ಹಾಗೂ ಹಿಂದೂಗಳು, ಬಸವ ಧರ್ಮವೂ ಹಿಂದೂ ಸನಾತನವೇ ಎಂದರು.



ಎಂ.ಬಿ.ಪಾಟೀಲ್

ಲಿಂಗಾಯತರು ಚತುರ್ವಣದಿಂದ ಹೊರಗುಳಿದಿದ್ದೇವೆ. ದಾವಣಗೆರೆಯಲ್ಲಿ ಮಹಾಸಭಾ ಕೈಗೊಂಡ ನಿರ್ಣಯ ಹಿಂದೂ ಧರ್ಮದ ಭಾಗವಲ್ಲ ಎಂಬುದಾಗಿ, ಆದರೆ, ಅವರೂ ನಮ್ಮೊಂದಿಗೆ ಅರ್ಥ ದಾರಿಗೆ ಬಂದಿದ್ದಾರೆ. ನಿನ್ನೆ ಅರಮನೆ ಮೈದಾನದಲ್ಲಿ ನಡೆದ ಸಮಾವೇಶದಲ್ಲಿ ಯಾರೂ ಜಾತಿ ಹೆಸರು ಬರೆಸಿ ಎಂಬುದಾಗಿ ಹೇಳಿಲ್ಲ. ಸಣ್ಣ ಸಣ್ಣ ಉಪ ಪಂಗಡಗಳನ್ನು ಒಟ್ಟಿಗೆ ಕೊಂಡೊಯ್ಯಬೇಕು. ಸಂಬಂಧಗಳನ್ನು ಬೆಳೆಸಿ ಎಲ್ಲರನ್ನು ಅಪ್ಪಿಕೊಳ್ಳಬೇಕು, ಸಣ್ಣ ಪಂಗಡಗಳವರಿಗೂ ರಾಜಕೀಯ ಶಕ್ತಿ ತುಂಬಬೇಕು. ನಾವು ಹಿಂದೂ ವಿರೋಧಿಗಳು ಅಲ್ಲ, ವೀರಶೈವ ವಿರೋಧಿಗಳೂ ಅಲ್ಲ. ನಮ್ಮ ಸಮುದಾಯವನ್ನು ಒಗ್ಗೂಡಿಸಲು ಹೊರಟರೆ ನಮ್ಮ ಹಿಂದೆ ನೀವು ಏಕೆ ಬೀಳುತ್ತೀರಿ ಎಂದು ಮಾಧ್ಯಮಗಳನ್ನು ಪ್ರಶ್ನಿಸಿದರು. ಲಿಂಗಾಯತರನ್ನು ಕೇಂದ್ರದ ಓಬಿಸಿ ಪಟ್ಟಿಗೆ ಸೇರಿಸಬೇಕು ಎಂಬ ಒತ್ತಾಯದಲ್ಲಿ ತಪ್ಪೇನಿದೆ ಎಂದರು.

ವಿದ್ಯಾರ್ಥಿ ವೇತನಕ್ಕಾಗಿ ಆಧಾರ್ ಸೀಡಿಂಗ್ ಕಡ್ಡಾಯ

ಮೈಸೂರು,ಅ.6– 2024–25ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿರುವ ಪೋಷಕರ ವಾರ್ಷಿಕ ವರಮಾನ ರೂ.2.50 ಲಕ್ಷದೊಳಗಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರಾಗಿದ್ದು, ಆದರೆ ಸದರಿ ವಿದ್ಯಾರ್ಥಿಗಳು ಆಧಾರ್ ಸೀಡಿಂಗ್ ಮಾಡಿಸದೇ ಇರುವ ಕಾರಣ ವಿದ್ಯಾರ್ಥಿವೇತನ ಖಾತೆಗೆ ಜಮೆಯಾಗಿರುವುದಿಲ್ಲ. ಆಯುಕ್ತರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಅವರು ಡಿಸೆಂಬರ್ 2025ರೊಳಗೆ ವಿದ್ಯಾರ್ಥಿಗಳು ಆಧಾರ್ ಸೀಡಿಂಗ್ ಮಾಡಿಸಲು ಸೂಚಿಸಿರುತ್ತಾರೆ. ಆದ್ದರಿಂದ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು 2025ರ ಡಿಸೆಂಬರ್ ಮಾಹೆಯೊಳಗೆ ಸಂಬಂಧಪಟ್ಟ ತಮ್ಮ ಬ್ಯಾಂಕ್‌ಗಳಿಗೆ ತೆರಳಿ ಆಧಾರ್ ಸಂಖ್ಯೆಯನ್ನು NPCI (National Payment Corporation of India) ರಲ್ಲಿ ಮ್ಯಾಪಿಂಗ್ ಮಾಡಿಸಿ, ಕಡ್ಡಾಯವಾಗಿ ಸೀಡಿಂಗ್ ಮಾಡಿಸಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಮಂಜೂರಾದ ವಿದ್ಯಾರ್ಥಿವೇತನ ವಿದ್ಯಾರ್ಥಿಗಳ ಖಾತೆಗೆ ಜಮೆಯಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಗ್ರೇಡ್–1 ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲೂಕು ಡಾ|| ಬಾಬು ಜಗಜೀವನರಾಂ ಭವನಕಟ್ಟಡ, ಆದಿಪಂಪ ರಸ್ತೆ ಒಂಟಿಕೊಪ್ಪಲು ಪೂರ್ವ, ಬಡಾ ವಣೆ ಪಡುವಾರಹಳ್ಳಿ ಮೈಸೂರು–12, ದೂ.–0821–2520910 ಸಂಪರ್ಕಿಸಬಹುದು

ಡಾ.ವಿಷ್ಣು ನೆನಪು ಸಂಗೀತ ಸಂಜೆ ಕಾರ್ಯಕ್ರಮ



ಮೈಸೂರು, ಅ. 6–ಗಾನ–ನಂದನ ಶ್ರೀ ಅನಂತೇಶ್ವರ ಟ್ರಸ್ಟ್ ವತಿಯಿಂದ ಅ.8ರಂದು ಸಂಜೆ 4.30ಕ್ಕೆ ನಂಜುಮಳಿಗೆ ವೃತ್ತದಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕರ್ನಾಟಕ ರತ್ನ ಡಾ.ವಿಷ್ಣುವರ್ಧನ್‌ರವರ 75ನೇ ಹುಟ್ಟುಹಬ್ಬದ ಪ್ರಯುಕ್ತ ಮರೆಯದ ಮಾಣಿಕ್ಯ ಡಾ.ವಿಷ್ಣು ನೆನಪು ಸಂಗೀತ ಸಂಜೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಉದ್ಘಾಟಿಸಲಿದ್ದು, ಶ್ರೀ ಅನಂತೇಶ್ವರ ಟ್ರಸ್ಟ್‌ನ ಅಧ್ಯಕ್ಷ ಡಾ.ನಾಗರಾಜ ವಿ.ಭೈರಿ ಅಧ್ಯಕ್ಷತೆ ವಹಿಸಲಿದ್ದಾರೆ. ವೇದಿಕೆ ಕಾರ್ಯಕ್ರಮ ಸಂಜೆ 6.30ಕ್ಕೆ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಲೆಯನ್ಸ್ ಕ್ಲಬ್ ಆಫ್ ಮೈಸೂರು ಜಿಲ್ಲಾ ರಾಜ್ಯಪಾಲ ಡಾ.ಎಸ್.ವೆಂಕಟೇಶ್, ಸಂಸ್ಕೃತಿ ಚಿಂತಕ ಡಾ.ರಘುರಾಂ ವಾಜಪೇಯಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಕವಿ ಜಯಪ್ಪ ಹೊನ್ನಾಳಿ ಮತ್ತಿತರರು ಭಾಗವಹಿಸಲಿದ್ದಾರೆ.

ಪ್ರಶಸ್ತಿ ಪತ್ರ ಪ್ರದಾನ...



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಿಳಾ ಘಟಕ ಮತ್ತು ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಸಂಯುಕ್ತವಾಗಿ ಆಯೋಜಿಸಿದ್ದ ರಾಜ್ಯ ಮಟ್ಟದ ಕವಿಗೋಷ್ಠಿಯಲ್ಲಿ ಕುವೆಂಪುನಗರದ ಚುಟುಕು ಕವಿ ಬಿ.ಆರ್.ನರೇಂದ್ರ ಪ್ರಶಸ್ತಿ ಪತ್ರ ಪಡೆದುಕೊಂಡರು. ಈ ವೇಳೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಜಿ.ಆರ್.ಅರಸ್, ಮಾಜಿ ಎಂಎಲ್‌ಸಿ ತೋಂಟದಾರ್ಯ ಮತ್ತಿತರರು ಉಪಸ್ಥಿತರಿದ್ದರು.

ಸನ್ಮಾನ...



ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಡಾ.ಶಾಮನೂರು ಶಿವಶಂಕರಪ್ಪ ಅವರನ್ನು ಶ್ರೀ ಶಿವರಾತ್ರೀಶ್ವರ ಬಳಗದಿಂದ ಸನ್ಮಾನಿಸಲಾಯಿತು. ಬಳಗದ ಅಧ್ಯಕ್ಷ ಬಿ.ಆರ್.ಪಂಚಾಕ್ಷರಿ, ಕಾರ್ಯದರ್ಶಿ ಡಿ.ಬಿ.ಯೋಗೇಶ್, ನಿರ್ದೇಶಕರಾದ ಪರಶಿವಮೂರ್ತಿ, ನಿರಂಜನ್ ಉಪಸ್ಥಿತರಿದ್ದರು.

25 ಲೇಖಕರಿಗೆ ಲೇಖಿಕಾ ಸಾಹಿತ್ಯಶ್ರೀ ಪ್ರಶಸ್ತಿ

ಮೈಸೂರು: ಲೇಖಿಕಾ ಸಾಹಿತ್ಯ ವೇದಿಕೆಯು ತನ್ನ ರಜತ ಮಹೋತ್ಸವ ಅಂಗವಾಗಿ ಲೇಖಿಕಾ ಸಾಹಿತ್ಯ ಶ್ರೀ–2025 ಪ್ರಶಸ್ತಿಗಳನ್ನು ಘೋಷಿಸಿದೆ. ಧಾರವಾಡದ ದಮಯಂತಿ ನರೇಗಲ್, ವಿದ್ಯಾ ಶಿರಹಟ್ಟಿ ಹಾಗೂ ರೂಪಾ ಜೋಶಿ. ಮೈಸೂರಿನ ಡಾ.ಕರುಣಾಲಕ್ಷ್ಮಿ, ಗಣೇಶ ಅಮೀನಗಡ, ಕೆ.ಎಂ.ಲೋಲಾಕ್ಷಿ, ಪದ್ಮಾ ಆನಂದ್ ಹಾಗೂ ಉಷಾ ನರಸಿಂಹನ್. ಹಾಸನದ ಲೀಲಾವತಿ, ಪ್ರಭಾ ದಿನಮಣಿ, ಸುಕನ್ಯಾ ಮುಕುಂದ್, ಸುಮಾವೀಣಾ, ಎನ್.ಎಲ್.ಚನ್ನೇಗೌಡ, ಗೊರೂರು ಅನಂತರಾಜು ಹಾಗೂ ಉದಯರವಿ. ಬೆಂಗಳೂರಿನ ನಾಗವೇಣಿ ರಂಗನ್, ಮುಕುಂದ ಗಂಗೂರ್, ಯಶೋದಾ ಹಾಗೂ ರಾಧಾ ಟೇಕಲ್. ಬೆಳಗಾವಿಯ ಮಧುರಾ ಕರ್ಣಂ, ದೀಪಿಕಾ ಚಾಟೆ. ಚಿಕ್ಕಮಗಳೂರಿನ ನಾಗಲಕ್ಷ್ಮಿ ಎಂ.ಜೆ.ಉತ್ತರ ಕನ್ನಡದ ಭಾಗೀರಥಿ ಹೆಗಡೆ, ಡಾ.ವೀಣಾ ಸುಳ್ಯ ಹಾಗೂ ಕೃಷ್ಣ ಪದಕಿ. ನ.9ರಂದು ಹಾಸನದ ಎವಿಕೆ ಕಾಲೇಜಿನಲ್ಲಿ ಆಯೋಜಿಸುವ ಲೇಖಿಕಾ ಸಾಹಿತ್ಯ ಸಂಭ್ರಮದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

ಅ.11ರಂದು ಪಿಜಿಆರ್ ಸಿಂಧ್ಯಾ ಹುಟ್ಟುಹಬ್ಬ, ಧ್ವನಿ ಕೊಟ್ಟ ದಣಿ ಪ್ರಶಸ್ತಿ ಪ್ರದಾನ ಸಮಾರಂಭ



ಪಿಜಿಆರ್ ಸಿಂಧ್ಯಾ

ಮೈಸೂರು, ಅ. 6–ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಅ.11ರಂದು ಬೆಳಗ್ಗೆ 10.45ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಭಾರತ್ ಸ್ಕೌಟ್ ಅಂಡ್ ಗೈಡ್ಸ್ ಆಯುಕ್ತರಾದ ಪಿ.ಜಿ.ಆರ್. ಸಿಂಧ್ಯಾ ಅವರ 77ನೇ ಹುಟ್ಟುಹಬ್ಬ ಆಚರಣೆ ಮತ್ತು ಹಿರಿಯ ಸಾಧಕರಿಗೆ ಧ್ವನಿ ಕೊಟ್ಟ ದಣಿ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ಆರ್.ದೀಪು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಂ.ಶಿವಣ್ಣ, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಹೆಚ್.ಎ.ವೆಂಕಟೇಶ್, ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎ.ಎಸ್.ಸತೀಶ್, ಅನ್ವೇಷಣಾ ಸೇವಾ ಟ್ರಸ್ಟ್ ಸ್ಥಾಪಕ ಅಧ್ಯಕ್ಷ ಆರ್ಯ ಅಮರನಾಥ್ ರಾಜೇ ಅರಸ್ ಭಾಗವಹಿಸಲಿದ್ದಾರೆ. ಇದೇ ವೇಳೆ ಅಪರ ಜಿಲ್ಲಾಧಿಕಾರಿ ವಿ.ಮಂಜುನಾಥ್, ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ, ವೈದ್ಯ ವಾರ್ತಾ ಪ್ರಕಾಶನ ನಿರ್ದೇಶಕ ಶ್ರೀನಿವಾಸ್ ಬಹದ್ದೂರ್, ಹಿರಿಯ ಸಾಹಿತಿ ಜಾಹ್ನವಿ ಸೀತಾಲಕ್ಷ್ಮಿ ವರ್ಮ ಅವರಿಗೆ ಧ್ವನಿ ಕೊಟ್ಟ ದಣಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಭೈರವಿ ಗೌಡತಿಯರ ಬಳಗದಿಂದ ಸನ್ಮಾನ




ಮೈಸೂರಿನ ಕನ್ನಡ ಸಾಹಿತ್ಯ ಭವನದಲ್ಲಿ ಭೈರವಿ ಗೌಡತಿಯರ ಬಳಗದ ವತಿಯಿಂದ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕರಾದ ಕೆ.ಎಸ್.ಮಧುಸೂದನ್ ಹಾಗೂ ಬಳಗದ ಸದಸ್ಯರಾದ ಪ್ರೊ.ಸುಮಿತ್ರ, ಡಾ.ಲಕ್ಷ್ಮಿ, ಅನುಸೂಯ, ಡಾ.ಪೂರ್ಣಿಮಾ, ಸಿಂಧುಶ್ರೀ, ನೇತ್ರಾವತಿ, ಚಾಂದಿನಿ ಕುಮಾರ್, ಡಾ.ಪವಿತ್ರ, ಡಾ.ನಯನ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು, ಅ. 6– ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಭೈರವಿ ಗೌಡತಿಯರ ಬಳಗದ ವತಿಯಿಂದ ಚಾಮುಂಡೇಶ್ವರಿ ಪೂಜೆ, ಶಿಕ್ಷಕರ ದಿನಾಚರಣೆ ಹಾಗೂ ದಾಂಡಿಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸುಮಾರು 150ಕ್ಕೂ ಹೆಚ್ಚು ಸದಸ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಬಳಗದ ಅಧ್ಯಕ್ಷರಾದ ಶ್ರೀಮತಿ ರೇವತಿ ಕೃಷ್ಣಪ್ಪ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕರಾದ ಕೆ.ಎಸ್.ಮಧುಸೂದನ್ ಹಾಗೂ ಬಳಗದ ಸದಸ್ಯರಾದ ಪ್ರೊ.ಸುಮಿತ್ರ, ಡಾ.ಲಕ್ಷ್ಮಿ ಪಿ., ಅನುಸೂಯ ಎಚ್, ಡಾ.ಜಿ.ಎನ್.ಪೂರ್ಣಿಮಾ, ಸಿಂಧುಶ್ರೀ ಎಲ್.ಎಸ್., ನೇತ್ರಾವತಿ, ಚಾಂದಿನಿ ಕುಮಾರ್, ಡಾ.ಪವಿತ್ರ ಆರ್.ಎಚ್., ಡಾ.ನಯನ ಎಂ.ಜಿ. ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಭೈರವಿ ಗೌಡತಿಯರ ಬಳಗದ ಗೌರವ ಅಧ್ಯಕ್ಷೆ ರಾಧಾ ಲಂಕೇಗೌಡ, ಪದಾಧಿಕಾರಿಗಳಾದ ಹೇಮಾ ನಂದೀಶ್, ಕೋಮಲ ವೆಂಕಟೇಶ್, ಸುಶೀಲ ಬಸವರಾಜು ಹಾಗೂ ಬಳಗದ ಸದಸ್ಯರು ಉಪಸ್ಥಿತರಿದ್ದರು.

ದೈಹಿಕ ಸಂಪರ್ಕ ನಿರಾಕರಿಸಿದ ಪತ್ನಿಯನ್ನು ಕೊಚ್ಚಿ ಕೊಂದ ಪತಿ

ಯಾದಗಿರಿ: ದೈಹಿಕ ಸಂಪರ್ಕಕ್ಕೆ ಒಪ್ಪದ ಕಾರಣಕ್ಕೆ ವ್ಯಕ್ತಿಯೊಬ್ಬ ಪತ್ನಿಯನ್ನು ಕೊಡಲಿಯಿಂದ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿದ ದಾರುಣ ಘಟನೆ ಯಾದಗಿರಿ ಜಿಲ್ಲೆಯ ಸುರಪುರದ ನಗರದ ಡೊಣ್ಣಿಗೇರ ಬಡಾವಣೆಯಲ್ಲಿ ನಡೆದಿದೆ. ಮರೆಮ್ಮ (35) ಮೃತ ಪತ್ನಿ, ಸಂಗಪ್ಪ ಕೊಲೆ ಮಾಡಿದ ಪತಿ. ಸದ್ಯ ಘಟನಾ ಸ್ಥಳಕ್ಕೆ ಸುರಪುರ ಠಾಣೆಯ ಪೊಲೀಸರು ಭೇಟಿ ನೀಡಿ ಸ್ಥಳ ಮಹಜರು ನಡೆಸಿದ್ದು, ಪ್ರಕರಣ ದಾಖಲಿಸಿದ್ದಾರೆ. ಸಂಗಪ್ಪನನ್ನು ಬಂಧಿಸಲಾಗಿದೆ. ಗಂಡ ಹೆಂಡತಿ ಮಧ್ಯೆ ಭಾನುವಾರ ರಾತ್ರಿ ದೈಹಿಕ ಸಂಪರ್ಕ ವಿಚಾರವಾಗಿ ಜಗಳವಾಗಿತ್ತು. ಪತ್ನಿ ದೈಹಿಕ ಸಂಪರ್ಕಕ್ಕೆ ಒಪ್ಪಿರಲಿಲ್ಲ. ಈ ವೇಳೆ, ಜಗಳ ವಿಕೋಪಕ್ಕೆ ತಿರುಗಿದ್ದು, ಕೊಲೆಯಲ್ಲಿ ಅಂತ್ಯವಾಗಿದೆ. ಕೊಲೆಗಾರ ಸಂಗಪ್ಪ ಕಳೆದ ಎರಡು ದಿನಗಳ ಹಿಂದ ತನ್ನ ಊರಾದ ಕಕ್ಕೇರದಿಂದ ಸುರಪುರಕ್ಕೆ ಬಂದಿದ್ದ. ಗಂಡ ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ಒಂದು ವರ್ಷದಿಂದ ಮರೆಮ್ಮ ತವರು ಮನೆಯಲ್ಲಿದ್ದರು.



ಬುದ್ಧ ವಂದನೆ...



ಮೈಸೂರಿನ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣದಲ್ಲಿರುವ ಸಿದ್ಧಾರ್ಥ ಬುದ್ಧ ವಿಹಾರದಲ್ಲಿ ಕರ್ನಾಟಕ ಬುದ್ಧಧಮ್ಮ ಸಮಿತಿಯಿಂದ ಬುದ್ಧ ವಂದನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸಮಿತಿ ಅಧ್ಯಕ್ಷ ಪ್ರೊ.ಡಿ.ನಂಜುಂಡಯ್ಯ, ಸಹಕಾರ್ಯದರ್ಶಿ ಎಚ್.ಶಿವರಾಜು, ಎಂ.ಸಾವಕಯ್ಯ, ಪಿ.ಮಹದೇವ್, ಸಿದ್ದರಾಜು, ಮಾ.ನಾಗಯ್ಯ, ಡಾ.ಮಂಜು ಸತ್ತಿಗೆಹುಂಡಿ, ಮಹೇಶ್, ವಂಸತ್, ಸಚಿನ್ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಅನಧಿಕೃತ ಜಾಗದಲ್ಲಿ ನಿರ್ಮಿಸಿದ್ದ ಮಸೀದಿ ಕೆಡವಿದ ಮುಸ್ಲಿಮರು



ಸಂಭಲ್: ಉತ್ತರಪ್ರದೇಶದ ಸಂಭಲ್‌ನಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಮಸೀದಿಯನ್ನು ಬುಲ್ಡೋಜರ್ ಮೂಲಕ ಮುಸ್ಲಿಮರೇ ಕೆಡವಿದ್ದಾರೆ. ಅಸ್ಮೋಲಿ ಪೊಲೀಸ್ ಠಾಣಾ ವ್ಯಾಪ್ತಿಯ ರಾಯ ಬುಜುರ್ಗ್ ಗ್ರಾಮದಲ್ಲಿ ಘಟನೆ ನಡೆದಿದೆ. ಅನಧಿಕೃತ ಪ್ರದೇಶದಲ್ಲಿ ನಿರ್ಮಿಸಿದ್ದ ಗೌಸುಲ್‌ಬರಾ ಮಸೀದಿಯನ್ನು ಕೆಡವಲು ಜಿಲ್ಲಾಡಳಿತ ಮುಂದಾಗಿದ್ದ ವೇಳೆ ಮಸೀದಿ ಸಮಿತಿ ಸದಸ್ಯರು 4 ದಿನಗಳ ಕಾಲಾವಕಾಶ ಕೋರಿದ್ದರು. ಅದರಂತೆ ಕಾಲಾವಕಾಶ ಮುಗಿದ ಕಾರಣ ಸಮಿತಿಯ ಸದಸ್ಯರು ಬುಲ್ಡೋಜರ್ ಮೂಲಕ ಮಸೀದಿಯನ್ನು ನೆಲಸಮ ಮಾಡಿದ್ದಾರೆ. ನಮಗೆ ನೀಡಲಾದ 4 ದಿನಗಳು ಪೂರ್ಣಗೊಂಡಿದೆ. ನಾವು ಮಸೀದಿ ಕೆಡವುವ ಕಾರ್ಯವನ್ನು ತ್ವರಿತಗೊಳಿಸುತ್ತಿದ್ದೇವೆ ಎಂದು ಮಸೀದಿ ಸಮಿತಿ ಸದಸ್ಯ, ರಾಯ ಬುಜುರ್ಗ್‌ನ ನಿವಾಸಿ ಯಾಸಿನ್ ಹೇಳಿದ್ದಾರೆ. ಅ.2ರಂದು ಅದೇ ಪ್ರದೇಶದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಮದುವೆ ಮಂಟಪವನ್ನು ಪೊಲೀಸರ ಸಮ್ಮುಖದಲ್ಲಿ ಅಧಿಕಾರಿಗಳು ಕೆಡವಿದ್ದರು.

ಹಿಮಪಾತ: ಮೌಂಟ್‌ಎವರೆಸ್ಟ್‌ನಲ್ಲಿ ಸಾವಿರ ಪರ್ವತಾರೋಹಿಗಳು ಅತಂತ್ರ



ಬೀಜಿಂಗ್: ಜಗತ್ತಿನ ಅತಿ ಎತ್ತರದ ಪರ್ವತ ಮೌಂಟ್ ಎವರೆಸ್ಟ್‌ನಲ್ಲಿ ತೀವ್ರ ಹಿಮಪಾತವಾದ ಕಾರಣ ಟಿಬೆಟಿಯನ್ ಇಳಿಜಾರಿನ ಶಿಬಿರಗಳಲ್ಲಿ ಸುಮಾರು ಒಂದು ಸಾವಿರ ಪರ್ವತಾರೋಹಿಗಳು ಸಿಲುಕಿದ್ದು, ರಕ್ಷಣಾ ಕಾರ್ಯ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪರ್ವತ ಪ್ರದೇಶವನ್ನು ತಲುಪುವ ಹಾದಿಯೂ ಹಿಮದಿಂದ ಮುಚ್ಚಿದ್ದು, ತೆರವಿಗೆ ನೂರಾರು ಸ್ಥಳೀಯರು ಮತ್ತು ರಕ್ಷಣಾ ತಂಡಗಳು ಕಾರ್ಯಾಚರಣೆಯಲ್ಲಿ ತೊಡಗಿವೆ.

ಈಗಾಗಲೇ ಹಲವು ಪ್ರವಾಸಿಗರನ್ನು ರಕ್ಷಣೆ ಮಾಡಲಾಗಿದೆ ಎಂದು ಸ್ಥಳೀಯ ಮಾಧ್ಯಮದ ವರದಿ ಉಲ್ಲೇಖಿಸಿ ಬಿಬಿಸಿ ವರದಿ ತಿಳಿಸಿದೆ. ಪರ್ವತಾರೋಹಿಗಳ ನೆಚ್ಚಿನ ಪ್ರದೇಶವಾದ ಟಿಬೆಟ್‌ನ ಮೌಂಟ್ ಎವರೆಸ್ಟ್‌ನ ಪೂರ್ವ ಇಳಿಜಾರುಗಳಲ್ಲಿ ಭಾರಿ ಹಿಮಪಾತ ಪ್ರಾರಂಭವಾಗಿದೆ. ಹವಾಮಾನ ವೈಪರೀತ್ಯದ ಹಿನ್ನೆಲೆ ಎವರೆಸ್ಟ್ ಪರ್ವತಾರೋಹಣಕ್ಕೆ ಟಿಕೆಟ್ ಕಾಯ್ದಿರಿಸುವಿಕೆಯನ್ನೂ ಸ್ಥಗಿತಗೊಳಿಸಲಾಗಿದೆ. ನೆರೆಯ ನೇಪಾಳದಲ್ಲೂ ಭಾರಿ ಮಳೆ ಸುರಿಯುತ್ತಿದ್ದು, ಈಗಾಗಲೇ 52 ಮಂದಿ ಮೃತಪಟ್ಟಿದ್ದಾರೆನ್ನಲಾಗಿದೆ.

ಪ್ರವಾಹಪೀಡಿತ ಸ್ಥಳಕ್ಕೆ ಬಂದಿದ್ದ ಬಿಜೆಪಿ ಸಂಸದನ ಮೇಲೆ ದಾಳಿ



ಕೊಲ್ಕತ್ತಾ: ಉತ್ತರ ಬಂಗಾಳದಲ್ಲಿ ನಡೆದ ಆಘಾತಕಾರಿ ಘಟನೆಯಲ್ಲಿ ಬಿಜೆಪಿ ಸಂಸದರೊಬ್ಬರ ಮೇಲೆ ಕಲ್ಲಿನಿಂದ ದಾಳಿ ನಡೆಸಲಾಗಿದೆ. ಪ್ರವಾಹ ಪೀಡಿತ ಸಮುದಾಯಗಳಿಗೆ ಪರಿಹಾರ ಸಾಮಗ್ರಿಗಳನ್ನು ವಿತರಿಸುತ್ತಿದ್ದಾಗ ಬಿಜೆಪಿ ಸಂಸದ ಖಗೇನ್ ಮುರ್ಮು ಮೇಲೆ ದಾಳಿ ನಡೆದಿದ್ದು, ಅವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಖಗೇನ್ ಮುಖದಿಂದ ರಕ್ತ ಸುರಿಯುತ್ತಿದ್ದು, ತಕ್ಷಣ ಭದ್ರತಾ ಸಿಬ್ಬಂದಿ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಬಂಗಾಳದ ಜಲಪೈಗುರಿಯ ನಾಗರಕಟ ಪ್ರದೇಶದಲ್ಲಿ ಕಲ್ಲು ತೂರಾಟದ ದಾಳಿ ಸಂಭವಿಸಿದೆ. ಖಗೇನ್ ಮುರ್ಮು ಮತ್ತು ಬಿಜೆಪಿ ಶಾಸಕ ಡಾ.ಶಂಕರ್ ಘೋಷ್ ಮಳೆ, ಪ್ರವಾಹ ಮತ್ತು ಭೂಕುಸಿತದ ಸಂತ್ರಸ್ತರಿಗೆ ಸಹಾಯ ಮಾಡಲು ಸ್ಥಳಕ್ಕೆ ಧಾವಿಸಿದಾಗ ಈ ದಾಳಿ ನಡೆದಿದೆ. ಪಶ್ಚಿಮ ಬಂಗಾಳ ವಿಧಾನಸಭೆ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಕೂಡ ಈ ದಾಳಿ ಖಂಡಿಸಿದ್ದಾರೆ. ಸಂಸದ ಖಗೇನ್ ಮುರ್ಮು ನಾಗರಕಟದಲ್ಲಿ ಬಿಜೆಪಿ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಅವರೊಂದಿಗೆ ಪ್ರವಾಹಪೀಡಿತ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದಾಗ ಅವರ ಮೇಲೆ ದಾಳಿ ನಡೆಸಲಾಯಿತು. ಅವರಿಗೆ ಗಂಭೀರ ಗಾಯಗಳಾಗಿವೆ ಎಂದು ಹೇಳಿದ್ದಾರೆ.

ತಿಂಗಳ ಒಳಗೆ ಫ್ರೆಂಚ್ ಪ್ರಧಾನಿ ಪಟ್ಟದಿಂದ ಇಳಿದ ಲೆಕೋರ್ನು



ಪ್ಯಾರಿಸ್: ಮೂರು ವಾರಗಳ ಹಿಂದೆ ಅಧಿಕಾರ ಸ್ವೀಕರಿಸಿದ್ದ ಫ್ರಾನ್ಸ್ ಪ್ರಧಾನಿ ಸೆಬಾಸ್ಟಿಯನ್ ಲೆಕೋರ್ನು ರಾಜೀನಾಮೆ ನೀಡಿದ್ದಾರೆ. ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಸೋಮವಾರ ಲೆಕೋರ್ನು ರಾಜೀನಾಮೆ ಅಂಗೀಕರಿಸಿದ್ದಾರೆ. ರಕ್ಷಣಾ ಸಚಿವರಾಗಿದ್ದ 39 ವರ್ಷದ ಲೆಕೋರ್ನು ಸೆ.9 ರಂದು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಸೆಬಾಸ್ಟಿಯನ್ ಲೆಕೋರ್ನು ಹೊಸ ಕ್ಯಾಬಿನೆಟ್ ಘೋಷಣೆ ಮಾಡಿ ಸೋಮವಾರ ಪ್ರಥಮ ಸಭೆ ನಡೆಸಬೇಕಿತ್ತು. ಆದರೆ ಹೊಸ ಕ್ಯಾಬಿನೆಟ್‌ಗೆ ಆಡಳಿತ ಪಕ್ಷದಿಂದ ಭಾರೀ ವಿರೋಧ ವ್ಯಕ್ತವಾದ ಬೆನ್ನಲ್ಲೇ ರಾಜೀನಾಮೆ ನೀಡಿದ್ದಾರೆ. ಕಳೆದ 3 ವರ್ಷಗಳಲ್ಲಿ ಫ್ರಾನ್ಸ್‌ನಲ್ಲಿ ಏಳು ಪ್ರಧಾನಿಗಳು ರಾಜೀನಾಮೆ ಸಲ್ಲಿಸಿದ್ದಾರೆ. ಫ್ರಾನ್ಸ್ ಸಂಸತ್ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಬಂದಿಲ್ಲ. ಸದ್ಯ ಫ್ರಾನ್ಸ್‌ನಲ್ಲಿ ಅಲ್ಪಮತದ ಸರ್ಕಾರವಿದೆ. 2026ರಲ್ಲಿ ಬಜೆಟ್ ಮಂಡಿಸಬೇಕಿದ್ದು, ಅದಕ್ಕೆ ಬಹುಮತದ ಅಂಗೀಕಾರ ಪಡೆಯಬೇಕಿದೆ. ಬಜೆಟ್‌ಗೆ ಅಂಗೀಕಾರ ಪಡೆಯಲು ವಿಫಲವಾದ ಬೆನ್ನಲ್ಲೇ ಸೆಬಾಸ್ಟಿಯನ್ ಲೆಕೋರ್ನು ರಾಜೀನಾಮೆ ಸಲ್ಲಿಸಿದ್ದಾರೆ. ಈ ಮೊದಲಿದ್ದ ಪ್ರಧಾನಿಗಳಿಗೆ ಮಿತ್ರ ಕೂಟದಿಂದ ಬೆಂಬಲ ಸಿಗದ ಕಾರಣ ಅವರೂ ರಾಜೀನಾಮೆ ಸಲ್ಲಿಸಿದ್ದರು.

ಜೈಪುರ ಆಸ್ಪತ್ರೆಯಲ್ಲಿ ಬೆಂಕಿ ಅವಘಡ: 8 ರೋಗಿಗಳ ಸಾವು



ಜೈಪುರ: ಇಲ್ಲಿನ ಸರ್ಕಾರಿ ಸ್ವಾಮ್ಯದ ಸವಾಯಿ ಮಾನ್ ಸಿಂಗ್ ಆಸ್ಪತ್ರೆಯ ಐಸಿಯು ವಾರ್ಡ್‌ನಲ್ಲಿ ಬೆಂಕಿ ಅವಘಡ ಸಂಭವಿಸಿ 8 ಮಂದಿ ರೋಗಿಗಳು ಸಾವನ್ನಪ್ಪಿದ್ದಾರೆ. ಇದೀಗ ಶಾರ್ಟ್ ಸರ್ಕ್ಯೂಟ್‌ನಿಂದ ಆಸ್ಪತ್ರೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಶಂಕಿಸಲಾಗಿದೆ. ಘಟನೆಯಲ್ಲಿ ಐವರ ಸ್ಥಿತಿ ಗಂಭೀರವಾಗಿದ್ದು, ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ರವಾನಿಸಲಾಗಿದೆ. ಆಸ್ಪತ್ರೆಯ ಎರಡನೇ ಮಹಡಿಯಲ್ಲಿ ಎರಡು ಐಸಿಯುಗಳಿದ್ದವು. ಒಂದರಲ್ಲಿ 11 ರೋಗಿಗಳು, ಮತ್ತೊಂದರಲ್ಲಿ 13 ರೋಗಿಗಳಿದ್ದರು ಎನ್ನಲಾಗಿದೆ. ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಾಗ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇಬ್ಬರು ಮಹಿಳೆಯರು ಮತ್ತು ನಾಲ್ವರು ಪುರುಷ ಸೇರಿ 8 ರೋಗಿಗಳು ಮೃತಪಟ್ಟಿದ್ದಾರೆ. ಐವರ ಸ್ಥಿತಿ ಗಂಭೀರವಾಗಿದೆ ಎಂದು ಟ್ರಾಮಾ ಸೆಂಟರ್ ಉಸ್ತುವಾರಿ ಡಾ.ಅನುರಾಗ್ ಧಾಕಡ್ ತಿಳಿಸಿದ್ದಾರೆ.

ಆಸ್ಪತ್ರೆಯ ದಾಖಲೆ ಪತ್ರಗಳು, ಐಸಿಯು ಉಪಕರಣಗಳು, ಲ್ಯಾಬ್ ಬೆಂಕಿಗಾಹುತಿಯಾಗಿದೆ. ಆಸ್ಪತ್ರೆಯ ಸಿಬ್ಬಂದಿ ಹಾಗೂ ರೋಗಿಗಳ ಕುಟುಂಬಸ್ಥರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಲಾಗಿದೆ.

ಮಂಡ್ಯದ 9 ಮಂದಿಗೆ ನಿಗಮ ಮಂಡಳಿ ಸ್ಥಾನಮಾನ

ಐವರು ಒಕ್ಕಲಿಗರು, ಮೂವರು ಪ.ಜಾತಿ, ಓರ್ವ ಅಲ್ಪಸಂಖ್ಯಾತರಿಗೆ ಅವಕಾಶ



ನರೇಂದ್ರಸ್ವಾಮಿ ಎ.ಬಿ.ರಮೇಶ ದಿನೇಶ್ ಗೂಳಿಗೌಡ ಆತ್ಮಾನಂದ ಡಾ.ಕೃಷ್ಣ



ಡಾ.ಮೂರ್ತಿ ಸಿ.ಡಿ.ಗಂಗಾಧರ್ ನಯೀಂ ವಿಜಯಲಕ್ಷ್ಮೀ

ಮಂಡ್ಯ, ಅ.6(ಮೋಹನ್‌ರಾಜ್)– ರಾಜ್ಯ ಸರ್ಕಾರ ವಿವಿಧ ನಿಗಮ, ಮಂಡಳಿ, ಪ್ರಾಧಿಕಾರದ ಅಧ್ಯಕ್ಷ, ಉಪಾಧ್ಯಕ್ಷರು, ಸದಸ್ಯರ ನೇಮಕಾತಿ ಮಾಡಿದ್ದು, ಈ ಪೈಕಿ ಮಂಡ್ಯ ಜಿಲ್ಲೆಯ 9 ಮಂದಿಗೆ ಸ್ಥಾನಮಾನ ಕಲ್ಪಿಸುವ ಮೂಲಕ ಸಿಂಹಪಾಲು ನೀಡಿದೆ.

ಇದುವರೆಗೂ ಯಾವುದೇ ಸರ್ಕಾರದಲ್ಲೂ ಮಂಡ್ಯ ಜಿಲ್ಲೆಗೆ ಇಷ್ಟೊಂದು ಅಧಿಕಾರ ಸಿಕ್ಕಿರಲಿಲ್ಲ. ಆದರೆ ಕಾಂಗ್ರೆಸ್ ಸರ್ಕಾರ ಅತಿ ಹೆಚ್ಚು ನಿಗಮ, ಮಂಡಳಿಗಳಿಗೆ ಜಿಲ್ಲೆಯವರನ್ನು ನೇಮಕ ಮಾಡಿರುವುದು ಇದೇ ಮೊದಲು ಎನ್ನಲಾಗುತ್ತಿದೆ.

9 ಮಂದಿಗೆ ಸ್ಥಾನಮಾನ: ಜಿಲ್ಲೆಗೆ ಸಚಿವ ಹಾಗೂ ಉಸ್ತುವಾರಿ ಸಚಿವ ಸ್ಥಾನದ ಜೊತೆಗೆ 8 ಮಂದಿಗೆ ವಿವಿಧ ನಿಗಮ, ಮಂಡಳಿ, ಆಯೋಗ, ಪ್ರಾಧಿಕಾರ ಗಳಲ್ಲಿ ಅವಕಾಶ ನೀಡಲಾಗಿದೆ. ಶ್ರೀಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ (ಚೆಸ್ಕಾಂ) ಅಧ್ಯಕ್ಷ ಸ್ಥಾನಕ್ಕೆ ಶ್ರೀರಂಗಪಟ್ಟಣ ಶಾಸಕ ಎ.ಬಿ.ರಮೇಶ ಬಂಡಿ ಸಿದ್ದೇಗೌಡ, ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರಸ್ವಾಮಿ, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸ್ಥಾನಕ್ಕೆ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಕರ್ನಾಟಕ ಒಕ್ಕಲಿಗ ಸಮುದಾಯದ ಅಭಿವೃದ್ಧಿ ನಿಗಮಕ್ಕೆ ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಆಹಾರ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಮುಖಂಡ ಡಾ.ಕೃಷ್ಣ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ಮಲ್ಲಿಕಾರ್ಜುನ ಖರ್ಗೆ ಆಪ್ತ ಡಾ.ಮೂರ್ತಿ ಅವರನ್ನು ನೇಮಿಸಲಾಗಿದೆ.

ಉಳಿದಂತೆ ಸ್ಥಳೀಯ ಆಡಳಿತ ಸಂಸ್ಥೆಗಳಾದ ಮೈಷುಗರ್ ಕಾರ್ಖಾನೆ ಅಧ್ಯಕ್ಷ ಸ್ಥಾನ ಜಿಲ್ಲಾ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಮುಡಾ ಅಧ್ಯಕ್ಷ ಸ್ಥಾನ ನಗರಸಭೆ ಸದಸ್ಯ ನಯೀಂ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಉಪಾಧ್ಯಕ್ಷ ಸ್ಥಾನ ನಗರಸಭೆ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮೀ ರಘುನಂದನ್ ಅವರಿಗೆ ದೊರೆತಿದೆ. ಜೊತೆಗೆ ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಸ್ಥಾನ ಪಾಂಡವಪುರದ ನಾಗಣ್ಣಗೌಡರಿಗೆ ನೀಡಲಾಗಿತ್ತು. ಸದಸ್ಯ ಸ್ಥಾನ ಮಂಡ್ಯದ ಮಿಕ್ಕೆರೆ ವೆಂಕಟೇಶ್ ಅವರಿಗೆ ನೀಡಿದ್ದು, ಅವರ ಅವಧಿ ಮುಂದುವರೆದಿದ್ದು, ಮುಂದಿನ ಮಾರ್ಚ್‌ಗೆ ಅಂತ್ಯಗೊಳ್ಳಲಿದೆ.

ಸಚಿವ ಆಕಾಂಕ್ಷಿಗಳಾಗಿದ್ದ ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ ಮತ್ತು ರಮೇಶ್ ಬಂಡಿಸಿದ್ದೇಗೌಡ ಅವರಿಗೆ ಕ್ರಮವಾಗಿ ಪ್ರತಿಷ್ಠಿತ ನಿಗಮ ಮಂಡಳಿಗಳಾದ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಚೆಸ್ಕಾಂ ನೀಡಿದ್ದಾರೆ. ಇತ್ತೀಚೆಗೆ ಮಾಜಿ ಸಚಿವ ಎಂ.ಎಸ್. ಆತ್ಮಾನಂದ ಅವರಿಗೆ ಹಿರಿತನದ ಆಧಾರದಲ್ಲಿ ಒಕ್ಕಲಿಗ ಸಮುದಾಯದ ಅಭಿವೃದ್ಧಿ ನಿಗಮ ನೀಡಲಾಗಿದೆ.

ಇನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆಪ್ತರಾಗಿರುವ ಹಿರಿಯ ಕಾಂಗ್ರೆಸ್ ಮುಖಂಡ ಡಾ.ಮೂರ್ತಿ ಅವರಿಗೆ ಕ್ಯಾಬಿನೆಟ್ ದರ್ಜೆಯ ಅನುಸೂಚಿತ ಬುಡಕಟ್ಟು ಆಯೋಗದ ನಿಗಮ ಮಂಡಳಿಗಳನ್ನು ನೀಡಲಾಗಿದೆ. ಮಳವಳ್ಳಿ ಕ್ಷೇತ್ರದ ಕಾಂಗ್ರೆಸ್‌ನ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದ ಇವರಿಗೆ ಹಲವು ಬಾರಿ ಟಿಕೆಟ್ ತಪ್ಪಿರುವುದರಿಂದ ಇವರಿಗೆ ಸೂಕ್ತ ಸ್ಥಾನಮಾನ ನೀಡಬೇಕೆಂದು ಬೆಂಬಲಿಗರು ಆಗ್ರಹಿಸಿದ್ದರು. ಈ ನಿಟ್ಟಿನಲ್ಲಿ ಸರ್ಕಾರ ಇವರಿಗೆ ನಿಗಮ ಮಂಡಳಿಯಲ್ಲಿ ಅವಕಾಶ ನೀಡಿದೆ. ಒಟ್ಟಾರೆ ಈ ಬಾರಿ ಜಿಲ್ಲೆಯಲ್ಲಿ ಕೈ ಮುಖಂಡರಿಗೆ ಹೆಚ್ಚು ಅಧಿಕಾರ ಸಿಕ್ಕಂತಾಗಿದೆ.

ಜಾತಿವಾರು ಅವಕಾಶ: ಜಿಲ್ಲೆಗೆ ಸಿಕ್ಕಿರುವ ನಿಗಮ, ಮಂಡಳಿ, ಪ್ರಾಧಿಕಾರಗಳಲ್ಲಿ ಜಾತಿವಾರು ಅವಕಾಶ ಕಲ್ಪಿಸಲಾಗಿದೆ. ಸಚಿವರು ಸೇರಿದಂತೆ ಐದು ಮಂದಿ ಒಕ್ಕಲಿಗರು, ಮೂವರು ಪರಿಶಿಷ್ಟ ಜಾತಿ ಹಾಗೂ ಒಂದು ಅಲ್ಪಸಂಖ್ಯಾತ ಜಾತಿಗೆ ಅವಕಾಶ ನೀಡಲಾಗಿದೆ.

ಅಲ್ಪಸಂಖ್ಯಾತ ಸಮುದಾಯ ಅಸಮಾಧಾನ: ಮಂಡ್ಯ ಜಿಲ್ಲೆಯ 9 ಮಂದಿಗೆ ನಿಗಮ ಮಂಡಳಿ ಯಲ್ಲಿ ಅವಕಾಶ ನೀಡಿದ್ದರೂ ಈ ಪೈಕಿ ಕೇವಲ ಒಬ್ಬರೇ ಒಬ್ಬ ಮುಸ್ಲಿಂ ಸಮುದಾಯದವರನ್ನು ಗುರುತಿಸಲಾಗಿದೆ. ಇಡೀ ಜಿಲ್ಲೆಯ ಹಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲು ಅಲ್ಪಸಂಖ್ಯಾತ ಸಮುದಾಯ ನಿರ್ಣಾಯಕ ಪಾತ್ರ ವಹಿಸಿದ್ದು, ಆದರೆ ಕೇವಲ ಒಬ್ಬರಿಗೆ ಜಿಲ್ಲಾ ಮಟ್ಟದ ನಿಗಮ ಸ್ಥಾನ ನೀಡಲಾಗಿದೆ. ರಾಜ್ಯ ಮಟ್ಟದ ನಿಗಮ ಮಂಡಳಿಯಲ್ಲಿ ಅವ ಕಾಶ ಸಿಗುತ್ತದೆ ಎಂದು ಜಿಲ್ಲೆಯ ಹಲವು ಮುಸ್ಲೀಂ ಮುಖಂಡರು ಭರವಸೆಯಿಂದ ಕಾಯುತ್ತಿದ್ದರು. ಆದರೆ ಈ ಬಾರಿಯ ನಿರಾಶೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಿಗಮ ಮಂಡಳಿಯಲ್ಲಿ ಹಿರಿಯರಿಗೆ ಅನ್ಯಾಯ: ಬೇಸರ



ಮಂಡ್ಯ: ನಿಗಮ ಮಂಡಳಿಗಳಲ್ಲಿ ಮಂಡ್ಯ ಜಿಲ್ಲೆಯ 9 ಮಂದಿ ಅವಕಾಶ ನೀಡಿರುವುದು ಸ್ವಾಗತಾರ್ಹವಾದರೂ, ಪಕ್ಷಕ್ಕಾಗಿ ದುಡಿದ ಹಿರಿಯ ಮುಖಂಡರನ್ನು ಕಡೆಗಣಿಸಲಾಗಿದೆ ಎಂದು ಹಿರಿಯ ಕಾಂಗ್ರೆಸ್ ಮುಖಂಡ ಅಸಾದುಲ್ಲಾಖಾನ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಾನು ಮೂರ್‍ನಾಲ್ಕು ದಶಕಗಳ ಕಾಲ ಕಾಂಗ್ರೆಸ್ ಪಕ್ಷಕ್ಕಾಗಿ ಶ್ರಮಿಸಿದ್ದೇನೆ. ಆದರೆ ಒಂದು ಬಾರಿ ಅತಿ ಕಡಿಮೆ ಅವಧಿಗೆ ಮುಡಾ ಅಧ್ಯಕ್ಷ ಸ್ಥಾನ ನೀಡಿದ್ದು ಬಿಟ್ಟರೆ ಇನ್ಯಾವ ಅವಕಾಶ ನನಗೆ ಸಿಕ್ಕಿಲ್ಲ. ಈ ಬಾರಿ ರಾಜ್ಯ ಮಟ್ಟದ ನಿಗಮ ಮಂಡಳಿ ಕೊಡಬೇಕೆಂದು ಮನವಿ ಮಾಡಿದ್ದೆ. ಹಲವು ಬಾರಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಸಹ ಭೇಟಿ ಮಾಡಿದ್ದೆ. ಆದರೆ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ಪಕ್ಷದಲ್ಲಿ ಗುರುತಿಸಿಕೊಂಡ ಹಲವು ಮಂದಿಗೆ ನಿಗಮ ಮಂಡಳಿಯಲ್ಲಿ ಸ್ಥಾನ ನೀಡಿ, ಹಿರಿಯರನ್ನು ಅವಕಾಶ ವಂಚಿತರನ್ನಾಗಿ ಮಾಡಿದ್ದಾರೆ. ಇದು ಬೇಸರದ ಸಂಗತಿಯಾಗಿದ್ದು, ಶೀಘ್ರದಲ್ಲೇ ನಮ್ಮ ಬೆಂಬಲಿಗರು ಸಿಎಂ, ಡಿಸಿಎಂ, ಜಿಲ್ಲಾ ಉಸ್ತುವಾರಿ ಸಚಿವರ ಬಳಿಗೆ ನಿಯೋಗ ಹೋಗಿ ಆಗಿರುವ ಅನ್ಯಾಯ ಸರಿಪಡಿಸುವಂತೆ ಆಗ್ರಹಪಡಿಸಲಿದ್ದಾರೆ ಎಂದು ತಿಳಿಸಿದರು.

ನಾಗಮಂಗಲ ಟಿಎಪಿಸಿಎಂಎಸ್ ಅಧಿಕಾರ ಕಾಂಗ್ರೆಸ್ ಪಾಲು

ಕಾಂಗ್ರೆಸ್‌ಗೆ 6 ಸ್ಥಾನಗಳಲ್ಲಿ ಜಯ, 1ರಲ್ಲಿ ಗೆಲುವು ಸಾಧಿಸಿದ ಜೆಡಿಎಸ್‌ಗೆ ಮುಖಭಂಗ



ಕಾಂಗ್ರೆಸ್ ಬೆಂಬಲಿತ ಸದಸ್ಯರು ವಿಜಯೋತ್ಸವ ಆಚರಿಸಿದರು.

ನಾಗಮಂಗಲ, ಅ.6– ತಾಲೂಕಿನ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಗರು ಅತೀ ಹೆಚ್ಚು ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಟಿಎಪಿಸಿಎಂಎಸ್ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 6ರಲ್ಲಿ ಗೆಲುವು ಸಾಧಿಸಿದರೇ, ಜೆಡಿಎಸ್ 1 ಸ್ಥಾನ ಗೆಲುವು ಸಾಧಿಸಿ ಮುಖಭಂಗ ಅನುಭವಿಸಿದೆ.

ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಬಿಂಡಿಗನವಿಲೆ ಕ್ಷೇತ್ರದ ಎನ್.ಟಿ.ಕೃಷ್ಣಮೂರ್ತಿ (479), ಬೆಳ್ಳೂರು ಕ್ಷೇತ್ರದ ಲಕ್ಷ್ಮಣಗೌಡ (345), ಗೊಂಡೇನಹಳ್ಳಿ ಕ್ಷೇತ್ರದ ಸಿ.ಜಿ. ಸುರೇಂದ್ರ (263), ಮಾಯಿಗೋನ ಹಳ್ಳಿ ಕ್ಷೇತ್ರದ ಸಿ.ಧನರಾಜ್ (346), ಚಿಣ್ಯ ಕ್ಷೇತ್ರದ ಅಲ್ಪಹಳ್ಳಿ ಕೃಷ್ಣೇಗೌಡ (539) ದೇವಲಾಪುರ ಕ್ಷೇತ್ರದ ವಸಂತ ಮಣಿ (416) ಗೆಲುವು ಸಾಧಿಸುವ ಮೂಲಕ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿಯವರ ಅಸ್ತಿತ್ವ ಭದ್ರಗೊಳಿಸಿದ್ದಾರೆ.

ಇನ್ನು ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಮಾಜಿ ಶಾಸಕ ಸುರೇಶ್‌ಗೌಡರ ಬೆಂಬಲಿತ ಬ್ರಹ್ಮದೇವರಹಳ್ಳಿ ಕ್ಷೇತ್ರದ ಎನ್.ಉಜ್ವಲ ಮಂಜುನಾಥ(492) ಪ್ರತಿಸ್ಪರ್ಧಿ ಗೀತಾ ದಾಸೇಗೌಡರ ವಿರುದ್ಧ ಗೆಲುವು ಸಾಧಿಸಿದರೆ, ಜೆಡಿಎಸ್ ಬೆಂಬಲಿತರಾಗಿ ಚುನಾವಣೆ ಅಖಾಡದಲ್ಲಿದ್ದ ಯಶೋಧಮ್ಮ (379), ಯೋಗೇಶ್ (115), ಸಿ.ಕೆ. ಪ್ರದೀಪ್ (356), ಬಿ.ವಿ.ಕೆಂಚೇಗೌಡ (113), ಸಿದ್ದರಾಜು (203) ಪರಾಭವಗೊಂಡಿದ್ದಾರೆ. ಚುನಾವಣಾಧಿಕಾರಿಯೂ ಆದ ತಹಸೀಲ್ದಾರ್ ಜಿ. ಆದರ್ಶ ಫಲಿತಾಂಶ ಪ್ರಕಟಿಸಿದರು. ಚುನಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಬೆಂಬಲಿತರು ಗೆಲುವು ಸಾಧಿಸುತ್ತಿದ್ದಂತೆಯೇ ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನ ಮುಂಭಾಗ ಜಮಾಯಿಸಿದ್ದ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಚಿವ ಚಲುವರಾಯಸ್ವಾಮಿ ಪರ ಘೋಷಣೆ ಕೂಗಿ ವಿಜಯೋತ್ಸವ ಆಚರಿಸಿದರು.

ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಬ್ರಹ್ಮದೇವರಹಳ್ಳಿ ಮತಗಟ್ಟೆ ಸಂಖ್ಯೆ 2ರಲ್ಲಿ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಪತ್ನಿ ಧನಲಕ್ಷ್ಮಿ, ಪುತ್ರ ಸಚಿನ್ ಹಾಗೂ ಸೊಸೆ ಆಕಾಂಕ್ಷ, ಮಾಜಿ ವಿಧಾನಪರಿಷತ್ ಸದಸ್ಯ ಹಾಗೂ ಮನ್‌ಮುಲ್ ನಿರ್ದೇಶಕ ಎನ್.ಅಪ್ಪಾಜಿಗೌಡ ಸೇರಿದಂತೆ ಮತದಾನ ಮಾಡಿದರು.

ಐವರು ಅವಿರೋಧ ಆಯ್ಕೆ: ನಾಗಮಂಗಲ ಕ್ಷೇತ್ರದಿಂದ ಪ.ಪಂಗಡಕ್ಕೆ ಮೀಸಲಾಗಿದ್ದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜಿ.ಆಶಾ ಸೇರಿದಂತೆ 'ಎ' ತರಗತಿಯಿಂದ ವಿವಿಧ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಆಯ್ಕೆಯಾಗಬೇಕಾಗಿದ್ದ 4 ಸ್ಥಾನಗಳಿಗೆ ಬಿ.ಎಂ ಪ್ರಕಾಶ್, ಮರಿಗೌಡ, ಕೆ.ವಿ.ದಿನೇಶ್ ಹಾಗೂ ಎ.ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಡಿವೈಎಸ್‌ಪಿ ಚಲುವರಾಜು, ಸಿಪಿಐ ನಿರಂಜನ್ ಹಾಗೂ ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶಿವಕುಮಾರ್, ಗ್ರಾಮಾಂತರ ಠಾಣೆ ಪಿಎಸ್‌ಐ ರಾಜೇಂದ್ರ, ಬಿಂಡಿಗನವಿಲೆ ಎಸ್‌ಐ ಮಾರುತಿ ನೇತೃತ್ವದಲ್ಲಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಅ.17, ಉದ್ಯೋಗ ಮೇಳ

ಮಂಡ್ಯ, ಅ.6– ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಬೆಂಗಳೂರು ಹಾಗೂ ಜಿಲ್ಲಾಡಳಿತ, ಜಿಪಂ ಮತ್ತು ಮಹಾನಗರ ಪಾಲಿಕೆ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ಅ.17 ರಂದು ಬೆಳಗ್ಗೆ 9 ಗಂಟೆಗೆ ಬೃಹತ್ ಉದ್ಯೋಗ ಮೇಳ/ಯುವ ಸಮೃದ್ಧಿ ಸಮ್ಮೇಳನವನ್ನು ಮಹಾರಾಜ ಗ್ರೌಂಡ್ ಮೈಸೂರಿನಲ್ಲಿ ಆಯೋಜಿಸಲಾಗಿದೆ ಆಸಕ್ತರು ಸ್ವ-ವಿವರಗಳೊಂದಿಗೆ ಭಾಗವಹಿಸಬಹುದಾಗಿದೆ. ಆಸಕ್ತರು https://udyogamela.ksdc karnataka.com ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾಹಿತಿ ಗಣೇಶ್ ನಿಧನ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟ



ಸಾಹಿತಿಗಳಾದ ಗಣೇಶ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕೆ.ಆರ್.ಪೇಟೆ, ಅ.6– ಸಾಹಿತಿ ಮೊಗಳ್ಳಿ ಗಣೇಶ್ ಅವರ ಅಕಾಲಿಕ ನಿಧನ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಕಸಾಪ, ತಾಲೂಕು ಜಾನಪದ ಪರಿಷತ್, ತಾಲೂಕು ಪತ್ರಕರ್ತರ ಸಂಘ, ತಾಲೂಕು ಛಲವಾದಿ ಮಹಾಸಭಾ ಸೇರಿದಂತೆ ಪ್ರಗತಿಪರ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಸಾಹಿತಿ ಮೊಗಳ್ಳಿ ಗಣೇಶ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ದಲಿತ ಸಾಹಿತ್ಯ ಕ್ಷೇತ್ರದಲ್ಲಿ ದೇವನೂರು ಮಹಾದೇವ, ಸಿದ್ದಲಿಂಗಯ್ಯ ಅವರ ನಂತರ ಮೊಗಳ್ಳಿ ಗಣೇಶ್ ಅಪಾರ ಕೊಡುಗೆ ನೀಡಿದ್ದಾರೆ. ದಲಿತರು, ಶೋಷಿತರು ಹಾಗೂ ತುಳಿತಕ್ಕೊಳಗಾದವರ ನೋವು ನಲಿವುಗಳು ಹಾಗೂ ಭಾವನೆಗಳನ್ನು ಕಥಾಹಂದರದ ಮೂಲಕ ಶ್ರೀಸಾಮಾನ್ಯರ ಮನ ಮುಟ್ಟುವಂತೆ ಕಥೆಗಳನ್ನು ಬರೆದು ಸೈ ಅನಿಸಿಕೊಂಡಿದ್ದ ಗಣೇಶ್ ಅವರು ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದ ಅವರು ಚನ್ನಪಟ್ಟಣ ತಾಲೂಕಿನ ಮೊಗಳ್ಳಿಯಲ್ಲಿ ಜನಿಸಿದರೂ ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಮಾದನಾಯಕನಹಳ್ಳಿಯಲ್ಲಿ ಅವರ ಇಚ್ಛೆಯಂತೆಯೇ ಅಂತ್ಯ ಸಂಸ್ಕಾರ ನೆರವೇರಿಸಲಾಗಿದೆ ಎಂದರು.

ತಾಲೂಕು ಜಾನಪದ ಪರಿಷತ್ ಅಧ್ಯಕ್ಷ ವಾಸು, ಕಸಾಪ ಮಾಜಿ ಅಧ್ಯಕ್ಷ ಕೆ.ಆರ್. ನೀಲಕಂಠ, ಮಂಜುನಾಥ್, ಸಾಹಿತಿಗಳಾದ ಲೋಕೇಶ್, ಚಾ.ಶಿ.ಜಯಕುಮಾರ್ ಮೊಗಳ್ಳಿ ಗಣೇಶ್ ಅವರ ಕುರಿತು ಮಾತನಾಡಿದರು. ಸಭೆಯಲ್ಲಿ ವಿಶ್ರಾಂತ ಪೊಲೀಸ್ ಅಧಿಕಾರಿ ರಮೇಶ್, ತಾಲೂಕು ಕಸಾಪ ಪದಾಧಿಕಾರಿಗಳಾದ ಶಿವಕುಮಾರ್, ನಾಗರಾಜು, ರೇವಣ್ಣ, ಡಿ.ಎಸ್.ವೇಣು, ಶ್ರೀನಿವಾಸ್, ಸಂಘಟನಾ ಕಾರ್ಯದರ್ಶಿ ಅನಿಲ್, ಸುನಿಲ್, ನಟರಾಜ್, ಸೋಮಸುಂದರ್, ಗ್ರಾಪಂ ಸದಸ್ಯ ಅಗ್ರಹಾರಬಾಚಹಳ್ಳಿ ಶ್ರೀನಿವಾಸ್ ಮತ್ತಿತರರಿದ್ದರು.

ಎ.ಎಂ.ಸಂಜೀವಪ್ಪ ನಿಧನ



ಕೆ.ಆರ್.ಪೇಟೆ, ಅ.6– ತಾಲೂಕಿನ ಆಲಂಬಾಡಿಕಾವಲು ಹಿರಿಯ ಮುಖಂಡ, ತಾಪಂ ಮಾಜಿ ಸದಸ್ಯ ಎ.ಎನ್.ಸಂಜೀವಪ್ಪ (64) ಸೋಮವಾರ ನಿಧನರಾದರು. ಮೃತರು ಪತ್ನಿ, ಬೆಳ್ತೂರು ಸರ್ಕಾರಿ ಶಾಲೆ ಶಿಕ್ಷಕಿ ಗೌರಮ್ಮ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 12.30ಕ್ಕೆ ಸ್ವಗ್ರಾಮದಲ್ಲಿ ನಡೆಯಲಿದೆ.

ಒಂದನೇ ಪುಟದಿಂದ

23ರವರೆಗೂ ದೇವಿ ದರ್ಶನ

ಸಾರ್ವಜನಿಕರ ತಾಳ್ಮೆ ಪರೀಕ್ಷೆ ಮಾಡಬಾರದೆಂದು ಕೆಲ ಕ್ರಮ ಕೈಗೊಂಡಿದ್ದೇವೆ. ಸಾಮಾನ್ಯ ದರ್ಶನದ ಸಾಲಿಗಿಂತ ವಿಐಪಿ ಪಾಸ್‌ಗಳ ಸಾಲು ಹೆಚ್ಚಾಗಿತ್ತು, ಇದಕ್ಕಾಗಿ ಜಿಲ್ಲೆಯ ಶಾಸಕರೆಲ್ಲಾ ಚರ್ಚೆ ಮಾಡಿದ್ದೇವೆ. ಶಿಷ್ಟಾಚಾರಕ್ಕೆ ಒಳಪಡುವ ರಾಜ್ಯಪಾಲರು, ಜಡ್ಜ್‌ಗಳು ಗಣ್ಯರಿಗೆ ಅವಕಾಶ ನೀಡಲಾಗುತ್ತಿದೆ. ರಾಜ್ಯಪಾಲರು, ಹೈಕೋರ್ಟ್ ಜಡ್ಜ್, ಸಿಎಂ, ಡಿಸಿಎಂ, ಮಾಜಿ ಪ್ರಧಾನಿ, ಗೃಹ ಸಚಿವರ ವಾಹನಗಳಿಗೆ ಮಾತ್ರ ದೇಗುಲದ ಬಳಿ ತೆರಳಲು ಅವಕಾಶ ನೀಡಲಾಗುತ್ತದೆ ಎಂದು ವಿವರಿಸಿದರು. ಪ್ರತಿದಿನ ಬೆಳಗ್ಗೆ 7 ರಿಂದ ಬೆಳಿಗ್ಗೆ 10 ಗಂಟೆವರೆಗೆ ವಿಐಪಿ ಪಾಸ್ ಇದ್ದವರಿಗೆ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ. ಬೆಳಿಗ್ಗೆ 7.30 ರಿಂದ ಬೆಳಿಗ್ಗೆ 10.30 ರವರೆಗೂ ಗೋಲ್ಡ್ ಪಾಸ್ ಇದ್ದವರಿಗೆ ಅವಕಾಶ ನೀಡಲಾಗುತ್ತದೆ. ಅಂತಿಮ ದಿನಗಳಲ್ಲಿ ಅಂದರೆ ಅ.21 ಮತ್ತು 22ರಂದು ಪ್ರೋಟೊ ಕಾಲ್ ದರ್ಶನ ಇಲ್ಲ. ಸಾರ್ವಜನಿಕರಿಗೆ ಮಾತ್ರ ದರ್ಶನ ವ್ಯವಸ್ಥೆ ಮಾಡಲಾಗುತ್ತದೆ. ಒಂದು ದಿನಕ್ಕೆ ಒಂದು ಸಾವಿರ ಮಂದಿಗೆ ಮಾತ್ರ ಪಾಸ್‌ಗಳ ವಿತರಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

300 ರೂಪಾಯಿ, 1000 ರೂಪಾಯಿ ಟಿಕೆಟ್‌ಗಳ ಮಾರಾಟ: ಜನದಟ್ಟಣೆ ನಿರ್ವಹಣೆಗೆ ಎಐ ಟೆಕ್ನಾಲಜಿ ಬಳಕೆ ಮಾಡಲಾಗುತ್ತದೆ. ಸಿಸಿ ಕ್ಯಾಮರಾ ಬಳಕೆ, ಕಂಟ್ರೋಲ್ ರೂಂ ಆರಂಭ ಮಾಡಲಾಗುತ್ತದೆ. 300 ರೂಪಾಯಿ, 1000 ರೂಪಾಯಿ ಟಿಕೆಟ್‌ಗಳ ಮಾರಾಟಕ್ಕೆ ಅವಕಾಶ ನೀಡಲಾಗುತ್ತದೆ.

ಈ ಬಾರಿ ಹಾಸನದಲ್ಲಿ ಹೆಲಿ ಟೂರಿಸಂ: ಹಾಸನಾಂಭ ಉತ್ಸವದ ಜೊತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿದ್ದೇವೆ. ಇದಕ್ಕಾಗಿ ಮೂರು ವೇದಿಕೆಗಳನ್ನು ನಿರ್ಮಾಣ ಮಾಡಿದ್ದೇವೆ. ಜಾನಪದ ಜಾತ್ರೆಯಂತೆ ಹಾಸನಾಂಭ ಉತ್ಸವ ನಡೆಯಲಿದೆ. ಜಾನಪದ ಕಲೆಗಳ ಪ್ರದರ್ಶನದ ಜೊತೆಗೆ ಕಲಾವಿದರಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಕ್ಲಾಸಿಕಲ್ ಕಾರ್ಯಕ್ರಮಗಳೂ ನಡೆಯಲಿದೆ, ಮತ್ತೊಂದು ವೇದಿಕೆಯಲ್ಲಿ ಹಾಸನ ಯುವಕರಿಗೆ ಅವಕಾಶ ನೀಡಲಾಗಿದೆ. ಈ ಮೂಲಕ ಸ್ಥಳೀಯ ಪ್ರತಿಭೆಗಳ ಅನಾವರಣ ಆಗಲಿದೆ. ಫಲಪುಷ್ಪ ಪ್ರದರ್ಶನ ನಡೆಸಲಾಗುತ್ತದೆ. ಈ ಬಾರಿ ಹೆಲಿ ಟೂರಿಸಂ ಹಮ್ಮಿಕೊಳ್ಳಲಾಗಿದೆ. ಸ್ಥಳೀಯ ಕರಕುಶಲ ಪ್ರದರ್ಶನವನ್ನೂ ಹಮ್ಮಿಕೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು.

ವರ್ಷದಲ್ಲಿ ಕೆಲ ದಿನಗಳು ಮಾತ್ರ ಹಾಸನಾಂಭ ದೇಗುಲ ತೆರೆಯುತ್ತದೆ. ಈ ಬಾರಿ ಅ.9 ರಿಂದ 23 ರವರೆಗೆ ಹಾಸನಾಂಭ ದೇಗುಲ ತೆರೆದಿರುತ್ತದೆ. ಅ.9 ಮತ್ತು 23 ರಂದು ಎರಡು ದಿನಗಳು ಭಕ್ತರ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಪ್ರತಿ ವರ್ಷ ಭಕ್ತರ ಸಂಖ್ಯೆ ಗಣನೀಯ ಏರಿಕೆ ಆಗುತ್ತಿದೆ. ಇದಕ್ಕೆ ಬೇಕಾದ ಸಿದ್ಧತೆಗಳನ್ನು ಜಿಲ್ಲಾಡಳಿತ ಮಾಡಿಕೊಂಡಿದೆ. ಎಲ್ಲಾ ಇಲಾಖೆಗಳ ಸಮನ್ವಯದಿಂದ ಭಕ್ತರು ದರ್ಶನ ಪಡೆಯಲು ಸಿದ್ಧತೆ, ಸುಗಮ ದರ್ಶನಕ್ಕೆ ತಯಾರಿ ಮಾಡಿಕೊಳ್ಳಲಾಗಿದೆ. ಬರುವ ಭಕ್ತರನ್ನು ಅತಿಥಿಗಳ ರೀತಿಯಲ್ಲಿ ನಡೆಸಿಕೊಳ್ಳಲು ತಯಾರಿ ಮಾಡಿಕೊಂಡಿದ್ದೇವೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಇತರೆಡೆ ಅ.12ರವರೆಗೆ ವಿಸ್ತರಣೆ

ಅ.8ರಿಂದ 24ರವರೆಗೆ ಹಾಗೂ ರಾಜ್ಯದ ಇತರೆ ಭಾಗಗಳಲ್ಲಿ ಅ.12ರವರೆಗೆ ಬೆಳಗ್ಗೆ 8ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಶಾಲಾ ತರಗತಿ ನಡೆಯಲಿದ್ದು, ನಂತರ ಶಿಕ್ಷಕರು ಸಮೀಕ್ಷೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ರಜಾ ದಿನಗಳಲ್ಲಿಯೂ ಸಮೀಕ್ಷೆ ಕೈಗೊಂಡು ಗ್ರೇಟರ್ ಬೆಂಗಳೂರು ವ್ಯಾಪ್ತಿ ಹೊರತುಪಡಿಸಿ ಉಳಿದೆಲ್ಲಾ ಕಡೆ ಅ.12ರೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ. ಬೆಳಗ್ಗೆ 8 ಗಂಟೆಯೊಳಗೆ ಶಾಲೆಗೆ ಬಂದು ತರಗತಿ ತೆಗೆದುಕೊಂಡು ಮಧ್ಯಾಹ್ನ 1 ಗಂಟೆ ಬಳಿಕ ಸಮೀಕ್ಷೆ ಕಾರ್ಯಕ್ಕೆ ನಿಗದಿತ ಪ್ರದೇಶಕ್ಕೆ ಹೋಗುವಷ್ಟರಲ್ಲಿ ಶಿಕ್ಷಕರು ಹೈರಾಣಾಗುತ್ತಾರೆ. ಶಾಲೆಗಿಂತ ದೂರದ ಪ್ರದೇಶದಲ್ಲಿ ಸಮೀಕ್ಷೆಗೆ ನಿಯೋಜಿಸಿರುವುದರಿಂದ ಪ್ರಯಾಣಕ್ಕೆ ಹೆಚ್ಚು ಸಮಯ ವ್ಯಯವಾಗುತ್ತದೆ. ಓಡಾಟದಲ್ಲೇ ಬಳಲುವಂತಾಗುತ್ತದೆ. ಇದರಿಂದ ಮಕ್ಕಳ ಶೈಕ್ಷಣಿಕ ಪ್ರಗತಿಯ ಮೇಲೂ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ ಎಂದು ಹಲವು ಗಣತಿದಾರರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ನವೆಂಬರ್ ಕ್ರಾಂತಿ ಬರೀ ಭ್ರಾಂತಿ

ಜಾತಿಯನ್ನು ತುಳಿಯುವ ಪ್ರಶ್ನೆಯೇ ಇಲ್ಲ. ಸಮಾಜ ಸಮಾಜ ನಿರ್ಮಾಣ ನಮ್ಮ ಕೆಲಸ. ಆದರೆ, ಸಮ ಸಮಾಜ ವಿರೋಧ ಮಾಡುವವರು ಈ ಸಮೀಕ್ಷೆ ವಿರೋಧ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಸಮೀಕ್ಷೆ ನಾಳೆ ಸಂಜೆವರೆಗೂ ಏನಾಗಲಿದೆ ಏಷ್ಟಾಗಲಿದೆ ಎನ್ನುವುದು ನೋಡೋಣ. ಈಗಾಗಲೇ 1.10 ಕೋಟಿ ಸಮೀಕ್ಷೆ ಮುಗಿದಿದೆ. ಇನ್ನು ಎರಡು ದಿನದಲ್ಲಿ ಸಮೀಕ್ಷೆ ಮುಗಿಯುವ ವಿಶ್ವಾಸ ಇದೆ. ಸಮೀಕ್ಷೆ ಕಾದು ನೋಡೋಣ. ಕೊಪ್ಪಳ ಜಿಲ್ಲೆಯ ಸಮೀಕ್ಷೆ ಶೇ.97 ರಷ್ಟು ಮುಗಿದಿದೆ. ರಾಜ್ಯದಲ್ಲಿ ಬದಲಾವಣೆ ಬಯಸದವರು ಈ ಸಮೀಕ್ಷೆ ವಿರೋಧ ಮಾಡುತ್ತಿದ್ದಾರೆ ಎಂದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಸಮೀಕ್ಷೆ ವಿರೋಧ ಮಾಡಿದ ವಿಚಾರಕ್ಕೆ ಪ್ರತಿಕ್ರಿಯಿಸಿ, 'ಅವರು ಕೇಂದ್ರ ಸಚಿವ. ಅಲ್ಲದೇ ಕೇಂದ್ರ ಸರ್ಕಾರ ಜಾತಿ ಸಮೀಕ್ಷೆ ಮಾಡುವುದನ್ನು ಅವರು ವಿರೋಧ ಮಾಡುತ್ತಾರಾ? ಸಮೀಕ್ಷೆ ವೇಳೆ ಜನರು ಏನು ಹೇಳುತ್ತಾರೋ ಅದನ್ನು ಅವರು ಬರೆದುಕೊಳ್ಳುತ್ತಾರೆ. ಇಂತದ್ದನ್ನೆ ಬರೆಸು ಎಂದು ನಾವು ಹೇಳಲ್ಲ ಎಂದು ಹೇಳಿದರು.

ಪ್ರತ್ಯೇಕ ಲಿಂಗಾಯತ ಧರ್ಮದ ಕೂಗಿನ ವಿಚಾರವಾಗಿ ಮಾತನಾಡಿ, ಅದು ಮುನ್ನೆಲೆಗೂ ಬಂದಿಲ್ಲ, ಹಿನ್ನೆಲೆಗೂ ಹೋಗಿಲ್ಲ. ಈಗ ಇದು ಇದೇ ಇದೇ ಇದೇ ಎಂದು ಮಾತನ ಧಾಟಿಯಲ್ಲಿ ಎಳೆದರಲ್ಲದೇ ಕೆಲವು ವಿರಕ್ತ ಸ್ವಾಮೀಜಿ ಯವರು ಲಿಂಗಾಯತ ಪ್ರತ್ಯೇಕ ಧರ್ಮದ ಬಗ್ಗೆ ಡಿಮ್ಯಾಂಡ್ ಮಾಡುತ್ತಿದ್ದಾರೆ ಎಂದರು. ಗ್ಯಾರಂಟಿ ಯೋಜನೆಗಳು ನಿಂತಿಲ್ಲ.ಗ್ಯಾರಂಟಿ ನಿಂತಿವೆ ಎಂದು ಯಾರೂ ಹೇಳಿಲ್ಲ. ಸುಮ್ಮನೆ ಈ ಬಗ್ಗೆ ಹೇಳಬೇಡಿ ದಾಖಲೆ ಇದ್ದರೆ ಕೊಡಿ ಎಂದು ಹೇಳಿದರು. ಮಕ್ಕಳ ಕೆಮ್ಮಿನ ಸಿರಪ್ ನಿಂದ ಬೇರೆ ರಾಜ್ಯದಲ್ಲಿ ಸಾವು ಸಂಭವಿಸಿರುವ ವಿಚಾರಕ್ಕೆ ಪ್ರತಿಕ್ರಿಯಿಸಿ, ಈ ಕುರಿತು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಹೇಳಿದ್ದೇನೆ. ಅವರು ಕ್ರಮ ಕೈಗೊಳ್ಳಲಿದ್ದಾರೆ ಎಂದರು. ಜಿಲ್ಲಾ ಕೇಂದ್ರದ ಸಮೀಪದಲ್ಲಿ ಬಲ್ಡೋಟಾ ಕಂಪನಿ ಕಾರ್ಖಾನೆ ವಿಸ್ತರಣೆ ಮಾಡುವ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿ, ಕಾರ್ಖಾನೆಗಾಗಿ ಜಮೀನು ಕಳೆದುಕೊಂಡವರಿಗೆ ಇನ್ನಷ್ಟು ಪರಿಹಾರ ಕೊಡಬೇಕು ಎನ್ನುವ ಬೇಡಿಕೆಯಿದ್ದು, ಈ ಪ್ರಕರಣ ನ್ಯಾಯಾಲಯದಲ್ಲಿದೆ ಎಂದರು.

ನವೆಂಬರ್ ಕ್ರಾಂತಿ ಬರೀ ಮಾಧ್ಯಮ ಸೃಷ್ಟಿ ಅಷ್ಟೇ

ಬೆಂಗಳೂರು, ಅ. 6(ಕೆಎಂಶಿ)– ಕಾಂಗ್ರೆಸ್ ನಾಯಕತ್ವಕ್ಕೆ ಸಂಬಂಧಿಸಿದಂತೆ ನವೆಂಬರ್ ಕ್ರಾಂತಿ ಆಗಲಿದೆ ಎಂಬುದು ಕೇವಲ ಮಾಧ್ಯಮಗಳ ಚರ್ಚೆಯ ವಸ್ತು ಎಂದು ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಬಿ. ಖಂಡ್ರೆ ಇಂದಿಲ್ಲಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಯಕತ್ವ ಬದಲಾವಣೆ ಕುರಿತು ಪಕ್ಷದ ಹಂತದಲ್ಲಿ ಯಾವುದೇ ಚರ್ಚೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿದರು. ಸಮುದಾಯ ಕುರಿತು ಪ್ರತಿಕ್ರಿಯಿಸಿದ ಅವರು, ವೀರಶೈವ–ಲಿಂಗಾಯತ ರನ್ನು ಬೇರೆ ಮಾಡಲು ಯಾವುದೇ ಶಕ್ತಿ ಯಿಂದಲೂ ಸಾಧ್ಯವಿಲ್ಲ. ಸಮುದಾಯದ ಒಗ್ಗಟ್ಟಿ ನಲ್ಲಿ ಬಲವಿದೆ. ವಿಘಟನೆಯಲ್ಲಿ ಸೋಲಿದೆ. ವೀರಶೈವ–ಲಿಂಗಾಯತ ಒಂದೇ ಎಂಬು ದಾಗಿ ಡಾ.ಶಿವಕುಮಾರ ಸ್ವಾಮೀಜಿ ಪ್ರತಿಪಾದಿ ಸುತ್ತಿದ್ದರು ಎಂದರು. ಭಾರತದಲ್ಲಿ ಭೌಗೋಳಿಕವಾಗಿ ನಾವೆಲ್ಲರೂ ಹಿಂದೂಗಳೇ, ನಮ್ಮ ಆಚಾರ–ವಿಚಾರ ಗೌರವಿಸಿ ಸಿಖ್, ಪಾರ್ಸಿ, ಜೈನಿಕರಿಗೆ ನೀಡಿರುವಂತೆ ಪ್ರತ್ಯೇಕ ಧರ್ಮ ಮಾನ್ಯತೆಯನ್ನು ವೀರಶೈವ–ಲಿಂಗಾಯತ ಧರ್ಮಕ್ಕೂ ನೀಡಬೇಕೆಂದು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಸ್ವಾತಂತ್ರ್ಯಪೂರ್ವದಿಂದಲೇ ಹೋರಾಡುತ್ತಾ ಬಂದಿದೆ. ಅದರಲ್ಲೂ ವಿಶೇಷವಾಗಿ 2000ದ ಜನಗಣತಿ ಸಮಯದಲ್ಲೂ ಇದನ್ನೇ ಪ್ರತಿಪಾದಿಸಿದೆ.

ಜಾತಿಗಣತಿಯಲ್ಲಿ ನಮ್ಮ ಧರ್ಮಕ್ಕೆ ಪ್ರತ್ಯೇಕ ಕಾಲಂ ನೀಡಲು ಒತ್ತಾಯಿಸುತ್ತೇವೆ. ವೀರಶೈವ–ಲಿಂಗಾಯತ ಎಂಬುದು ಸಮಾನಾರ್ಥಕ ಪದಗಳು. ಇಷ್ಟಲಿಂಗ ಪೂಜೆ ಮಾಡುವವರು ಮತ್ತು ಅಷ್ಟಾವರ್ಣ ಪಂಚಾಚಾರ ಷಟಸ್ಥಳ ಆಚರಣೆ ಮಾಡುವ ಗುರುಗಳು ಮತ್ತು ವಿರಕ್ತರೂ ಇದ್ದು, ವೀರಶೈವ–ಲಿಂಗಾಯತರು ಒಂದಾಗಿರಬೇಕು ಎಂಬುದು ಮಹಾಸಭಾದ ಸ್ಪಷ್ಟ ನಿಲುವಾಗಿದೆ.

ಪ್ರತ್ಯೇಕ ಧರ್ಮ ವಿಚಾರಕ್ಕೂ, ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಜನ ಸಮುದಾಯದ ನಾಯಕ, ಕೆಲವರು ರಾಜಕೀಯ ದುರುದ್ದೇಶದಿಂದ ಅಪಪ್ರಚಾರ ಮಾಡುತ್ತಿದ್ದಾರೆ ಎಂದರು. ಬಸವಾದಿ ಶರಣರು ಸಮಸಮಾಜದ ಭವ್ಯ ಕನಸು ಕಂಡಿದ್ದರು. ಅದನ್ನೇ ಮುಖ್ಯಮಂತ್ರಿ ಪಾಲಿಸುತ್ತಿದ್ದಾರೆ. ಸಮಾಜದ ಕಟ್ಟಕಡೆ ವ್ಯಕ್ತಿಗೂ ಸಾಮಾಜಿಕ ನ್ಯಾಯ ಕೊಡಿಸಲು ಶ್ರಮಿಸುತ್ತಿದ್ದಾರೆ.

ಬುದ್ಧ, ಬಸವ, ಡಾ.ಅಂಬೇಡ್ಕರ್ ಸಿದ್ಧಾಂತವನ್ನು ಗೌರವಿಸುತ್ತಾರೆ. ಬಸವತತ್ವ ಸಾರ್ವಕಾಲಿಕ ಸತ್ಯವಾಗಿದೆ. ಜಗತ್ತಿಗೆ ಮಾರ್ಗದರ್ಶನವಾಗಿದೆ ಎಂದರು.

'ಕುರುಕ್ಷೇತ್ರ' ಪೌರಾಣಿಕ ನಾಟಕ



ಮೈಸೂರು, ಅ.6– ದಸರಾ ಮಹೋತ್ಸವದ ಅಂಗವಾಗಿ ಪುರಭವನ (ಟೌನ್‌ಹಾಲ್)ದಲ್ಲಿ ನಾಟಕ ನಿರ್ದೇಶಕ ಡಿ.ಎಸ್.ಅಶೋಕ ಮಾರ್ಗದರ್ಶನದಲ್ಲಿ 'ಕುರುಕ್ಷೇತ್ರ' ಅಥವಾ 'ಗದಾಯುದ್ಧ' ಎಂಬ ಪೌರಾಣಿಕ ನಾಟಕ ಪ್ರದರ್ಶನಗೊಂಡಿತು. ನಾಟಕದ ಪಾತ್ರಧಾರಿಗಳಾಗಿ ಉಪನ್ಯಾಸಕ ಎಸ್.ಎಂ.ಚಂದ್ರಶೇಖರ್ (ಶ್ರೀಕೃಷ್ಣ), ಲಿಂಗಪ್ಪ (ದುರ್ಯೋಧನ), ಸಿದ್ದರಾಜು (ವಿಧುರ), ಕೃಷ್ಣಪ್ಪ (ಬಲರಾಮ), ಸತೀಶ್ (ಧರ್ಮರಾಯ), ಅರುಣ್(ಭೀಮ), ಮಂಜುನಾಥ್ ಎನ್. (ಅರ್ಜುನ), ಮನುಕುಮಾರ್(ಅಭಿಮನ್ಯು), ವೆಂಕಟೇಶ್(ಕರ್ಣ), ಶಿವನಾಯಕ (ದುಶ್ಯಾಸನ), ಬೋರಲಿಂಗ (ಶಕುನಿ), ಮಾದೇಗೌಡ (ಸಿಂಧುರಾಜ), ಸೀನಪ್ಪ(ಭೀಷ್ಮ), ಸಂತೋಷ್(ದ್ರೋಣ), ಮೋಹನ (ರುಕ್ಮಿಣಿ), ಧನು (ದ್ರೌಪದಿ), ನಿರ್ಮಲ (ಕುಂತಿ) ಅವರು ಅಭಿನಯಿಸಿದ್ದಾರೆ.

ಇಂದು ಸಿಐಐ ಮೈಸೂರು ಘಟಕದಿಂದ ಉತ್ಪಾದನಾ–ತಂತ್ರಜ್ಞಾನ ಸಮ್ಮೇಳನ

ಮೈಸೂರು,ಅ.6(ಪಿಎಂ)– ಕಾನ್ಫೆಡರೇಷನ್ ಆಫ್ ಇಂಡಿನ್ ಇಂಡಸ್ಟ್ರಿ (ಸಿಐಐ) ಮೈಸೂರು ಘಟಕದ ವತಿಯಿಂದ ಅ.7 ರಂದು ವಾರ್ಷಿಕ ಉತ್ಪಾದನಾ ಹಾಗೂ ತಂತ್ರಜ್ಞಾನ ಸಮ್ಮೇಳನ 2025 ಅನ್ನು ಆಯೋಜಿಸಲಾಗಿದೆ.

ಮೈಸೂರಿನ ಮೇಟಗಳ್ಳಿಯಲ್ಲಿರುವ ಹೋಟೆಲ್ ಐಬಿಐಎಸ್ ಸ್ಟೈಲ್ಸ್‌ನಲ್ಲಿ ಸಮ್ಮೇಳನ ನಡೆಯಲಿದ್ದು, ಬೆಳಗ್ಗೆ 9.30ಕ್ಕೆ ಉದ್ಘಾಟನೆ ನೆರವೇರಲಿದೆ. ಉದ್ಯಮದ ನಾಯಕರು, ನೀತಿ ನಿರೂಪಕರು, ತಂತ್ರಜ್ಞಾನ ತಜ್ಞರು ಮತ್ತು ಎಂಎಸ್‌ಎಂಇ ಪ್ರತಿನಿಧಿಗಳಲ್ಲಿ ಉತ್ಪಾದನಾ ಶ್ರೇಷ್ಠತೆ, ಯಾಂತ್ರೀಕರಣ, ಡಿಜಿಟಲ್ ರೂಪಾಂತರ ಮತ್ತು ಗುಣಮಟ್ಟದ ವ್ಯವಸ್ಥೆಗಳ ಕುರಿತು ಒಳನೋಟವುಳ್ಳ ಚರ್ಚೆಗಳಲ್ಲಿ ತೊಡಗಿಸಿಕೊಳ್ಳಲು ಈ ಸಮ್ಮೇಳನವು ವೇದಿಕೆಯಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವನ್ಯಜೀವಿಯಿಂದ ಹಾಡಿಯ ಜಾನುವಾರು ಮೃತಪಟ್ಟರೆ ಪರಿಹಾರ: ಈಶ್ವರ ಖಂಡ್ರೆ



ಬೆಂಗಳೂರು, ಅ.6– ರಾಜ್ಯದ ಕೆಲವು ಅರಣ್ಯದೊಳಗೆ ಹಾಡಿಗಳಿದ್ದು, ಇಲ್ಲಿ ವಾಸಿಸುತ್ತಿರುವ ಅರಣ್ಯವಾಸಿಗಳು ಸಾಕಿರುವ ಜಾನುವಾರುಗಳು ವನ್ಯಜೀವಿಗಳಿಂದ ಮೃತಪಟ್ಟರೆ ಪರಿಹಾರ ನೀಡಲು ಕ್ರಮ ಕೈಗೊಳ್ಳುವುದಾಗಿ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ ಕಳೆದ ಜೂನ್‌ನಲ್ಲಿ ಪ್ರತಿಕಾರಕ್ಕಾಗಿ ದನಕ್ಕೆ ಹಾಕಿದ್ದ ವಿಷದಿಂದ 5 ಹುಲಿಗಳು ಮೃತಪಟ್ಟಿದ್ದವು. ಈ ತಿಂಗಳ ಆದಿಯಲ್ಲೇ ಮತ್ತೊಂದು ಹುಲಿ ವಿಷಪ್ರಾಶನದಿಂದ ಮೃತಪಟ್ಟಿದೆ. ಹಾಡಿಯ ಜನರು ಹತಾಶರಾಗಿ, ಪ್ರತಿಕಾರಕ್ಕಾಗಿ ವಿಷ ಹಾಕುವುದನ್ನು ತಡೆಯಲು ಈ ಸೂಚನೆ ನೀಡಲಾಗಿದೆ ಎಂದರು.

ಮುಖ್ಯಮಂತ್ರಿಗಳಿಗೆ ಹುಲಿ ಸಾವಿನ ಬಗ್ಗೆ ಈಗಾಗಲೇ ಮಾಹಿತಿ ನೀಡಲಾಗಿದ್ದು, ಅರಣ್ಯದೊಳಗಿನ ಹಾಡಿಯಲ್ಲಿರುವ ಜಾನುವಾರುಗಳು ವನ್ಯಜೀವಿ ದಾಳಿಯಿಂದ ಮೃತಪಟ್ಟರೆ ಪ್ರವಾಹದಲ್ಲಿ ಸಾವಿಗೀಡಾಗುವ ಜಾನುವಾರುಗಳಿಗೆ ನೀಡುವ ಪರಿಹಾರದ ಮೊತ್ತವನ್ನೇ ಈ ಜಾನುವಾರುಗಳಿಗೂ ನೀಡಲು ನಿರ್ಧರಿಸಲಾಗಿದ್ದು, ವನ್ಯಜೀವಿ ಸಪ್ತಾಹದ ಸಮಾರೋಪದಲ್ಲಿ ಮುಖ್ಯಮಂತ್ರಿಗಳೇ ಅಧಿಕೃತವಾಗಿ ಘೋಷಣೆ ಮಾಡಲಿದ್ದಾರೆ ಎಂದು ಹೇಳಿದರು.

ತಾವು ಸಾಕಿದ ಜಾನುವಾರುಗಳು ಮೃತಪಟ್ಟಾಗ ಸಹಜವಾಗಿಯೇ ಆಕ್ರೋಶಕ್ಕೆ ಒಳಗಾಗುತ್ತಾರೆ. ಆದರೆ ವನ್ಯಜೀವಿ ಹತ್ಯೆ ಅಪರಾಧವಾಗಿದ್ದು, ನಿರ್ದಾಕ್ಷಿಣ್ಯ ಕ್ರಮ ಜರುಗಿಸಬೇಕಾಗುತ್ತದೆ. ಕಳೆದ 1ರಂದು ನಡೆದ ಹುಲಿ ಹತ್ಯೆಯ 4 ಶಂಕಿತರನ್ನು 48 ಗಂಟೆಯೊಳಗೆ ಪತ್ತೆ ಮಾಡಿ ವಶಕ್ಕೆ ಪಡೆಯಲಾಗಿದೆ. ಈ ಕುಕೃತ್ಯದಲ್ಲಿ ಯಾರೇ ಎಸಗಿದ್ದರೂ ಅವರಿಗೆ ಕಾನೂನು ರೀತಿಯ ತಕ್ಕ ಶಿಕ್ಷೆ ಆಗುತ್ತದೆ. ತ್ವರಿತವಾಗಿ ಶಿಕ್ಷೆ ಆದರೆ ಅದು ಸ್ಪಷ್ಟ ಸಂದೇಶ ರವಾನಿಸುತ್ತದೆ. ಹೀಗಾಗಿ ತ್ವರಿತವಾಗಿ ಚಾರ್ಜ್ ಶೀಟ್ ಸಲ್ಲಿಸಲು ಸೂಚಿಸಲಾಗಿದೆ ಎಂದರು.

ಒಂದೊಮ್ಮೆ ಹುಲಿ ಹತ್ಯೆ ತಡೆಯುವಲ್ಲಿ ಅರಣ್ಯ ಇಲಾಖೆಯ ಯಾವುದೇ ಸಿಬ್ಬಂದಿ ನಿರ್ಲಕ್ಷ್ಯ ತೋರಿದ್ದರೆ, ಕರ್ತವ್ಯ ಲೋಪ ಆಗಿದ್ದರೆ ಅವರ ವಿರುದ್ಧವೂ ನಿರ್ದಾಕ್ಷಿಣ್ಯವಾಗಿ ಶಿಸ್ತುಕ್ರಮ ಜರುಗಿಸಲಾಗುವುದು. ಈಗಾಗಲೇ ಪಿಸಿಸಿಎಫ್ ನೇತೃತ್ವದ ತಂಡದಿಂದ ತನಿಖೆಗೆ ಆದೇಶ ನೀಡಲಾಗಿದ್ದು, ವರದಿ ಬಂದ ಬಳಿಕ ಕ್ರಮ ಜರುಗಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಕೃಷಿ ಹೊಂಡಕ್ಕೆ ಬಿದ್ದ ಆಟಿಕೆ ರೈಲು ತರಲು ಇಳಿದ ಇಬ್ಬರು ಬಾಲಕರು ದುರ್ಮರಣ


ಸಕಲೇಶಪುರ, ಅ.6– ಕೃಷಿ ಹೊಂಡಕ್ಕೆ ಬಿದ್ದ ಆಟಿಕೆ ರೈಲನ್ನು ತರಲು ನೀರಿಗೆ ಇಳಿದ ಇಬ್ಬರು ಬಾಲಕರು ದುರ್ಮರಣಕ್ಕೀಡಾದ ಘಟನೆ ಸಕಲೇಶಪುರ ತಾಲೂಕಿನ ಹೊಸೂರು ಗ್ರಾಮದಲ್ಲಿ ನಡೆದಿದೆ.

ಮೃತ ಬಾಲಕರನ್ನು ಗ್ರಾಮದ ಕೃಷ್ಣ ಎಂಬವರ ಪುತ್ರ ಪ್ರಣಯ್ (7) ಹಾಗೂ ಪ್ರಶಾಂತ್ ಎಂಬವರ ಪುತ್ರ ನಿಶಾಂತ್ ಎಂದು ಗುರುತಿಸಲಾಗಿದೆ. ಪ್ರಣಯ್ ಎರಡನೇ ತರಗತಿ ಓದುತ್ತಿದ್ದು, ನಿಶಾಂತ್ ಅಂಗನವಾಡಿಗೆ ಹೋಗುತ್ತಿದ್ದ. ಈ ಇಬ್ಬರೂ ಶಾಲೆಗೆ ರಜೆ ಇದ್ದ ಕಾರಣ ಕೂಲಿಗೆ ಹೋಗಿದ್ದ ಪೋಷಕರ ಜೊತೆ ಕಾಫಿ ತೋಟಕ್ಕೆ ಹೋಗಿದ್ದರು.

ಕಾಫಿ ತೋಟದ ಕೃಷಿ ಹೊಂಡದ ಬಳಿ ಆಟ ಆಡುತ್ತಿದ್ದಾಗ ಆಟಿಕೆ ರೈಲು ಕೃಷಿ ಹೊಂಡಕ್ಕೆ ಬಿದ್ದಿದೆ. ಅದನ್ನು ಎತ್ತಿಕೊಳ್ಳಲು ಇಬ್ಬರು ಹೊಂಡಕ್ಕೆ ಇಳಿದು, ಹೊರ ಬರಲಾಗದೇ ಮುಳುಗಿ ಸಾವನ್ನಪ್ಪಿದ್ದಾರೆ. ಬಹಳ ಸಮಯದವರೆಗೂ ಮಕ್ಕಳು ಕಾಣಿಸದೇ ಇದ್ದಾಗ, ಪೋಷಕರು ಹುಡುಕಾಟ ನಡೆಸಿದ್ದಾರೆ. ಆಗ ಕೃಷಿ ಹೊಂಡದ ಬಳಿ ಚಪ್ಪಲಿಗಳು ಪತ್ತೆಯಾಗಿವೆ. ಕೃಷಿ ಹೊಂಡದಲ್ಲಿ ಹುಡುಕಾಟ ನಡೆಸಿದಾಗ ಮಕ್ಕಳ ಶವ ಪತ್ತೆಯಾಗಿವೆ. ಶವಗಳನ್ನು ಕೃಷಿ ಹೊಂಡದಿಂದ ಹೊರ ತೆಗೆದು ಸಕಲೇಶಪುರ ಕ್ರಾಫರ್ಡ್ ಆಸ್ಪತ್ರೆಗೆ ರವಾನಿಸಲಾಗಿದೆ. ಆಸ್ಪತ್ರೆ ಬಳಿ ಮಕ್ಕಳನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ಈ ಸಂಬಂಧ ಸಕಲೇಶಪುರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಅಡ್ಡಂಡ ಕಾರ್ಯಪ್ಪರ 'ನಿಜಮಹಾತ್ಮ ಬಾಬಾ ಸಾಹೇಬ' ನಾಟಕ ಕೃತಿ ಬಿಡುಗಡೆ

ಮೈಸೂರು,ಅ.6–ಮೈಸೂರಿನ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮತ್ತು ಕೊಡಗಿನ ರಂಗಭೂಮಿ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರ 'ನಿಜಮಹಾತ್ಮ ಬಾಬಾ ಸಾಹೇಬ' ಪುಸ್ತಕ ನಾಳೆ (ಅ.7) ಸಂಜೆ 5:30ಕ್ಕೆ ಕರ್ನಾಟಕ ಕಲಾ ಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಬಿಡುಗಡೆಯಾಗಲಿದೆ.



ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪುಸ್ತಕವನ್ನು ಬಿಡುಗಡೆ ಮಾಡಲಿದ್ದು, ಸಾಮಾಜಿಕ ಕಾರ್ಯಕರ್ತ ವಾದಿರಾಜ್ ಕೃತಿಯ ಕುರಿತು ಮಾತನಾಡಲಿದ್ದಾರೆ. ಹಿರಿಯ ಸಮಾಜ ಸೇವಕ ವೆಂಕಟರಾಮ್ ಮತ್ತು ಆದಿತ್ಯ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಚಂದ್ರಶೇಖರ್ ಉಪಸ್ಥಿತರಿರುವರು.

ನಿಜವಾಗಲೂ ನಿಜಮಹಾತ್ಮ ಬಾಬಾ ಸಾಹೇಬ: ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅಸ್ಪೃಶ್ಯರಾಗಿ ಹುಟ್ಟಿದ್ದರೂ ಸ್ವಪ್ರಯತ್ನ ಹಾಗೂ ಸಾಧನೆಗಳಿಂದಾಗಿ ಮಹಾನ್ ಮಾನವತಾವಾದಿಯಾಗಿ ಒಂದು ಅರ್ಥದಲ್ಲಿ ನಿಜಮಹಾತ್ಮರಾಗಿ ಬೆಳೆದದ್ದು ಅದ್ಭುತ ಯಶೋಗಾಥೆ. ಅವರು ಯಾವುದೇ ಒಂದು ವರ್ಗಕ್ಕೆ ಸೇರಿದವರಲ್ಲ, ದೇಶದ ಆಸ್ತಿ. ವ್ಯಕ್ತಿತ್ವ, ವಿದ್ವತ್ತು, ನಾಯಕತ್ವ ಗುಣ, ಸಂಘಟನಾ ಸಾಮರ್ಥ್ಯ, ಅಸ್ಪೃಶ್ಯತೆ ವಿರುದ್ಧ ಅವರ ಹೋರಾಟ ಹಾಗೂ ಶ್ರಮ ಅದ್ವಿತೀಯ. ಅಂಬೇಡ್ಕರ್ ಅವರ ಬದುಕು ಅತ್ಯಂತ ಕರ್ಮಠ, ತ್ಯಾಗಮಯ, ತಪೋನಿಷ್ಠ. ಅವರು ಸಾಮಾಜಿಕ ಕಳಕಳಿಯ ಅರ್ಥಶಾಸ್ತ್ರಜ್ಞ, ನಿಪುಣ ನ್ಯಾಯವಾದಿ, ಬೌದ್ಧ ಮತವನ್ನು ಅಗತ್ಯತೆಗೆ ಅನುಸಾರವಾಗಿ ಪ್ರಚುರಪಡಿಸಿದ ಧರ್ಮಚಕ್ರ ಪ್ರವರ್ತನಕಾರ. ಶಿಕ್ಷಣ–ಸಂಘಟನೆ–ಹೋರಾಟ ಎಂಬ ಮೂರು ಸುದರ್ಶನ ಚಕ್ರ ನೀಡಿದ ಮಾನವತಾವಾದಿ.


ಅಡ್ಡಂಡ ಕಾರ್ಯಪ್ಪ

ಬಾಬಾಸಾಹೇಬರಿಗೆ ಇದ್ದ ಖಚಿತತೆ, ನಿಷ್ಠುರತೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಗ್ಗೆ ಅವರ ನಿಲುವು, ಭಾರತ–ಪಾಕಿಸ್ತಾನ ವಿಭಜನೆ ಸಂದರ್ಭ ಮುಸಲ್ಮಾನರ ಬಗೆಗಿನ ಅವರ ಅಭಿಪ್ರಾಯ ಇವೆಲ್ಲವನ್ನು ಆಗಿನ ಆಡಳಿತಾರೂಢರು ಮುಚ್ಚಿಟ್ಟಿದ್ದರು. ಡಾ.ಅಂಬೇಡ್ಕರ್ ಅವರನ್ನು ಒಂದು ವರ್ಗಕ್ಕೆ ಮೀಸಲಿಡಲಾಗಿದೆ. ಬರಬರುತ್ತಾ ಡಾ.ಅಂಬೇಡ್ಕರ್ ವಿಷಯದಲ್ಲಿ ಬಚ್ಚಿಟ್ಟ ಅನೇಕ ಸಂಗತಿಗಳನ್ನು ಬಿಚ್ಚಿಡುವುದೇ 'ನಿಜ ಮಹಾತ್ಮ ಬಾಬಾ ಸಾಹೇಬ' ನಾಟಕದ ಧ್ಯೇಯ.

ಜಯಲಕ್ಷ್ಮಿಪುರಂನಲ್ಲಿ ರಸ್ತೆಬದಿ ಕಸಕ್ಕೆ ಬೆಂಕಿ : ನಿವಾಸಿಗಳ ಆಕ್ರೋಶ



ಕ್ರಮಕ್ಕೆ ಸ್ಥಳೀಯರ ಆಗ್ರಹ



ಮೈಸೂರಿನ ಜಯಲಕ್ಷ್ಮೀಪುರಂ 5ನೇ ಮೇನ್, 3ನೇ ಬ್ಲಾಕ್‌ನಲ್ಲಿ ರಸ್ತೆಬದಿಯಲ್ಲಿ ಸುರಿದಿರುವ ತ್ಯಾಜ್ಯಕ್ಕೆ ಹಚ್ಚಿದ್ದ ಬೆಂಕಿಯನ್ನು ನಂದಿಸುತ್ತಿರುವುದು.

ಮೈಸೂರು,ಅ.6(ಎಂಟಿವೈ)– ಮೈಸೂರಿನ ಜಯಲಕ್ಷ್ಮೀಪುರಂ 5ನೇ ಮೇನ್, 3ನೇ ಬ್ಲಾಕ್‌ನಲ್ಲಿ ರಸ್ತೆ ಬದಿಯಲ್ಲಿ ತ್ಯಾಜ್ಯ ಸುರಿದು ಬೆಂಕಿ ಹಚ್ಚುತ್ತಿರುವುದರಿಂದ ಸ್ಥಳೀಯರು ಅನಾರೋಗ್ಯ ಸಮಸ್ಯೆ ಎದುರಿಸುವಂತಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಅಕ್ಷರಸ್ಥರು, ಸುಶಿಕ್ಷಿತರೇ ತ್ಯಾಜ್ಯವನ್ನು ರಸ್ತೆ ಬದಿ ಬಿಸಾಡಿ ಹೋಗುತ್ತಿದ್ದು, ಅದರೊಂದಿಗೆ ವ್ಯಾಪಾರಿಗಳು, ಗೂಡ್ಸ್ ವಾಹನ ಚಾಲಕರು ಜಯಲಕ್ಷ್ಮೀಪುರಂ 5ನೇ ಮೇನ್, 3ನೇ ಬ್ಲಾಕ್‌ನ ರಸ್ತೆ ಬದಿಯಲ್ಲಿ ತ್ಯಾಜ್ಯ ಬಿಸಾಡುತ್ತಿದ್ದಾರೆ. ಕೆಲವರು ತ್ಯಾಜ್ಯಕ್ಕೆ ಪದೇ ಪದೆ ಬೆಂಕಿ ಹಚ್ಚುತ್ತಿರುವುದರಿಂದ ದಟ್ಟ ಹೊಗೆ, ಪ್ಲಾಸ್ಟಿಕ್ ವಸ್ತುಗಳು ಭಸ್ಮವಾದ ಬಳಿಕ ಬೀರುವ ದುರ್ನಾತ ಸ್ಥಳೀಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ರಸ್ತೆ ಬದಿ ಕಸ ಸುರಿಯುವವರ ಹಾಗೂ ಈ ಕಸಕ್ಕೆ ಬೆಂಕಿ ಹಾಕುವವರ ವಿರುದ್ಧವೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸ್ಥಳೀಯ ನಿವಾಸಿಗಳು ಆಗ್ರಹಿಸಿದ್ದಾರೆ.

> "ಜಯಲಕ್ಷ್ಮೀಪುರಂ 5ನೇ ಮೇನ್, 3ನೇ ಬ್ಲಾಕ್‌ನಲ್ಲಿ ರಸ್ತೆ ಬದಿಯಲ್ಲಿ ಪದೇ ಪದೆ ಕಸ, ಪ್ಲಾಸ್ಟಿಕ್ ತ್ಯಾಜ್ಯ ಎಂದು ಸುರಿದು ಹೋಗುತ್ತಿದ್ದಾರೆ. ಪಾಲಿಕೆಗೆ ದೂರು ನೀಡಿ, ಬಿಸಾಡಿರುವ ಕಸ ತೆರವು ಮಾಡಿಸುತ್ತಿದ್ದರೂ ಮತ್ತೆ ಮತ್ತೆ ತ್ಯಾಜ್ಯ ಎಸೆದು ಹೋಗುತ್ತಿದ್ದಾರೆ. ಅಕ್ಷರಸ್ಥರು, ತಿಳಿದಿರುವವರೇ ಕಸ ಎಸೆದು ಹೋಗುತ್ತಾರೆ. ಅಲ್ಲದೆ, ಕಸದ ರಾಶಿಗೆ ಬೆಂಕಿ ಹಚ್ಚುತ್ತಾರೆ. ಇದರಿಂದ ಸ್ಥಳೀಯರ ಆರೋಗ್ಯ ಹದಗೆಡುತ್ತಿದೆ. ಮಕ್ಕಳು, ಹಿರಿಯರ ಆರೋಗ್ಯ ಕಾಪಾಡಿಕೊಳ್ಳುವುದೇ ಸವಾಲಾಗಿದೆ. ಈ ಹಿನ್ನೆಲೆಯಲ್ಲಿ ಕಸ ಸುರಿಯುವವರ ಹಾಗೂ ಬೆಂಕಿ ಹಾಕುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಎರಡು ದಿನದ ಹಿಂದಷ್ಟೇ ತ್ಯಾಜ್ಯಕ್ಕೆ ಹಾಕಿದ ಬೆಂಕಿಯಿಂದಾಗಿ ದಟ್ಟ ಹೊಗೆ ಆವರಿಸಿತ್ತು. ಕೂಡಲೆ ಅಗ್ನಿಶಾಮಕ ಠಾಣೆಗೆ ಕರೆ ಮಾಡಿ ಬೆಂಕಿ ನಂದಿಸುವಂತೆ ಕೋರಲಾಗಿತ್ತು. ಸ್ಥಳಕ್ಕೆ ಬಂದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದ್ದರು. **–ಸುನೀತಾರಾವ್, ಜಯಲಕ್ಷ್ಮೀಪುರಂ ನಿವಾಸಿ**

ಕಸ ಹಾಗೂ ಪ್ಲಾಸ್ಟಿಕ್ ವಸ್ತುಗಳಿಗೆ ಪದೇ ಪದೆ ಬೆಂಕಿ ಹಾಕುತ್ತಿರುವುದರಿಂದ ವಿಷಕಾರಿ ಹೊಗೆ, ಧೂಳು ಸ್ಥಳೀಯ ಪರಿಸರವನ್ನು ಆವರಿಸುತ್ತಿದೆ. ಇದರಿಂದ ವಾಯುಮಾಲಿನ್ಯ ಹೆಚ್ಚಾಗುತ್ತಿದ್ದು, ಶ್ವಾಸಕೋಶದ ಸಮಸ್ಯೆ, ಕಣ್ಣಿನ ರೋಗಗಳು, ಅಲರ್ಜಿಗಳು ಮತ್ತು ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಈ ರಸ್ತೆಯನ್ನು ಬಯಲು ಶೌಚಾಲಯದಂತೆ ಕೆಲವರು ಬಳಸುತ್ತಿದ್ದು, ಸುತ್ತಮುತ್ತ ಇರುವ ವಸತಿ ಸಮುಚ್ಚಯದಲ್ಲಿ ವಾಸಿಸುತ್ತಿರುವವರು ತೊಂದರೆ ಅನುಭವಿಸುವಂತಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಅಭಿನಂದನೆ...



ಮೈಸೂರು ದಸರಾ ಮಹೋತ್ಸವ ಅಂಗವಾಗಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಯೋಜಿಸಿದ್ದ ಆಹಾರ ಮೇಳದಲ್ಲಿ ರಸಮಂಜರಿ ಕಾರ್ಯಕ್ರಮ್ನ ನಡೆಸಿಕೊಟ್ಟ ಗಾಯಕಿ ಶ್ರೀಮತಿ ಅನಿತಾ, ಗಾಯಕರಾದ ಮಲ್ಲಿಕಾರ್ಜುನ ಹಾಗೂ ಎಂ.ಕಾರ್ತಿಕ್ ಅವರನ್ನು ಅಭಿನಂದಿಸಲಾಯಿತು.

ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಸ್ಪರ್ಧೆಗಳ ಸಮಾರೋಪ ಸಮಾರಂಭ



ಅತ್ಯುತ್ತಮ ದೇಹದಾರ್ಢ್ಯ ಸ್ಪರ್ಧೆಗಳ ಸಮಾರೋಪ ಸಮಾರಂಭ ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್‌ನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಿತು.

ಮೈಸೂರು,ಅ.6–ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ 2025–26ನೇ ಸಾಲಿನ ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಜಿಮ್ನಾಸ್ಟಿಕ್, ಕುಸ್ತಿ, ಈಜು, ಯೋಗಾಸನ, ಕರಾಟೆ, ಕಿಕ್ ಬಾಕ್ಸಿಂಗ್, ಬಾಕ್ಸಿಂಗ್, ಭಾರ ಎತ್ತುವ ಹಾಗೂ ಅತ್ಯುತ್ತಮ ದೇಹದಾರ್ಢ್ಯ ಸ್ಪರ್ಧೆಗಳ ಸಮಾರೋಪ ಸಮಾರಂಭ ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್‌ನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಿತು. ಯುವರಾಜ ಕಾಲೇಜು, ಪ್ರಾಧ್ಯಾಪಕರು, ಪ್ರಾಂಶುಪಾಲರಾದ ಡಾ.ಎಂ.ಮಹದೇವಮೂರ್ತಿ, ಸೋಮಾನಿ ಕಾಲೇಜು ನಿವೃತ್ತ ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಸದಾಶಿವ ಭಟ್ ಸ್ಪರ್ಧಿಗಳಿಗೆ ಬಹುಮಾನ ವಿತರಣೆ ಮಾಡಿದರು. ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ. ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು.

ಅರ್ಜಿ ಆಹ್ವಾನ

ಮೈಸೂರು: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಮೈಸೂರು ವತಿಯಿಂದ 2025–26ನೇ ಸಾಲಿಗೆ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಜೈನ್, ಬೌದ್ಧ, ಸಿಖ್, ಹಾಗೂ ಪಾರ್ಸಿ ಜನಾಂಗದವರಿಗೆ ವಿವಿಧ ಯೋಜನೆಯಡಿಯಲ್ಲಿ ನಿಗಮದಿಂದ ಸಾಲ ಹಾಗೂ ಸಹಾಯಧನ ಸೌಲಭ್ಯಗಳನ್ನು ಕಲ್ಪಿಸಲು ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು 18ರಿಂದ 55 ವರ್ಷ ವಯೋಮಿತಿಯಿರಬೇಕು. ಅರ್ಜಿ ಸಲ್ಲಿಸಲು ಅ.16 ಕೊನೆಯ ದಿನ. https://kmdconline.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ದೂ.ಸಂ: 0821–2430080 ಸಂಪರ್ಕಿಸಿ.

ವಿಭಾಗೀಯ ಮಟ್ಟಕ್ಕೆ ಆಯ್ಕೆ...



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಭವನದಲ್ಲಿ ನಡೆದ ಜಿಲ್ಲಾಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಸುತ್ತೂರು ಶ್ರೀಮಠದ ವಸತಿ ಶಾಲೆಯ 12 ವಿದ್ಯಾರ್ಥಿಗಳು ಉಡುಪಿಯಲ್ಲಿ ಅ.9 ರಂದು ನಡೆಯುವ ವಿಭಾಗೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಚಿತ್ರದಲ್ಲಿ ತರಬೇತಿ ನೀಡಿದ ಯೋಗ ಶಿಕ್ಷಕರು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಿದ್ದಾರೆ.

ಮಧ್ಯಸ್ಥಿಕೆದಾರರ ನೇಮಕಕ್ಕೆ ಅರ್ಜಿ ಆಹ್ವಾನ

ಮೈಸೂರು,ಅ.6–ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಮೈಸೂರು ಮಧ್ಯಸ್ಥಿಕೆ ಕೇಂದ್ರಕ್ಕೆ ಹಾಗೂ ಮೈಸೂರಿನ ಎಲ್ಲಾ ತಾಲೂಕು ಕಾನೂನು ಸೇವೆಗಳ ಸಮಿತಿಗಳ ತಾಲೂಕು ಮಧ್ಯಸ್ಥಿಕೆ ಕೇಂದ್ರಗಳಲ್ಲಿ ರಾಜೀ ಸಂಧಾನದ ಮೂಲಕ ನ್ಯಾಯಾಲಯಗಳಲ್ಲಿರುವ ಬಾಕಿ ಪ್ರಕರಣಗಳನ್ನು ಇತ್ಯರ್ಥಪಡಿಸುವ ಸಲುವಾಗಿ 15 ವರ್ಷಗಳ ಹೆಚ್ಚು ಕಾಲ ಅನುಭವ ಹೊಂದಿರುವ ವಕೀಲರು, 15 ವರ್ಷ ಸೇವೆ ಸಲ್ಲಿಸಿದ ನಿವೃತ್ತ ನ್ಯಾಯಾಧೀಶರು, ಮಾಜಿ ಸೈನಿಕರು, ವಿಮಾ ಕಂಪನಿಗಳ ಹಿರಿಯ ಅಧಿಕಾರಿಗಳು, ಬ್ಯಾಂಕಿಂಗ್ ಸಂಸ್ಥೆಯ ಹಿರಿಯ ಅಧಿಕಾರಿಗಳು, ನಿವೃತ್ತ ಪ್ರಾಧ್ಯಾಪಕರು, ಶಿಕ್ಷಕರು ಮತ್ತು ವೈದ್ಯರನ್ನು ಮಧ್ಯಸ್ಥಿಕೆದಾರರ ಸೇವೆಗೆ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಪ್ರಾಧಿಕಾರದಲ್ಲಿ ಪಡೆದು ಅಥವಾ ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿ ಭರ್ತಿ ಮಾಡಿದ ಅರ್ಜಿಯನ್ನು ಅ.15ರ ಸಂಜೆ 5 ಗಂಟೆಯ ಒಳಗೆ ಖುದ್ದಾಗಿ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಎ.ಡಿ.ಆರ್ ಸೆಂಟರ್, ಹೊಸ ನ್ಯಾಯಾಲಯಗಳ ಆವರಣ, ಮಳಲವಾಡಿ, ಜಯನಗರ 5ನೇ ಕ್ರಾಸ್, ಮೈಸೂರು ಇಲ್ಲಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2330130 ಅನ್ನು ಸಂಪರ್ಕಿಸಬಹುದು.

ಹಣ್ಣು–ಹಂಪಲು ವಿತರಣೆ...



ಮೈಸೂರಿನ ಭಾರತಿ ವೃದ್ಧಾಶ್ರಮದ ಹಿರಿಯ ನಾಗರಿಕರಿಗೆ ಹಣ್ಣು ಹಂಪಲು, ದಿನಸಿ ಸಾಮಗ್ರಿ ವಿತರಿಸಿ ವಿಶ್ವ ಹಿರಿಯ ನಾಗರಿಕರ ದಿನ ಆಚರಿಸಲಾಯಿತು. ಈ ವೇಳೆ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ್, ರಾಜೇಶ್‌ಕುಮಾರ್, ಮಹೇಶ್, ಎಲ್‌ಐಸಿ ವೆಂಕಟೇಶ್, ನವನೀತ್‌ಕುಮಾರ್, ಅಕ್ಷಯ್ ಪ್ರಿಯದರ್ಶನ್, ಹರ್ಷಿತ್ ನಾಗೇಶ್, ದತ್ತ ಇನ್ನಿತರರು ಉಪಸ್ಥಿತರಿದ್ದರು.

ಪರಿಸರ ಸ್ನೇಹಿ ಹಸಿರು ಪಟಾಕಿ ಮಾರಾಟದ ಮುಚ್ಚಳಿಕೆ ಬರೆದುಕೊಡುವುದು ಕಡ್ಡಾಯ

ಪಟಾಕಿ ಮಾರಾಟಗಾರರಿಗೆ ಪರಿಸರ ಸಚಿವ ಈಶ್ವರ ಖಂಡ್ರೆ ಷರತ್ತು

ಬೆಂಗಳೂರು, ಅ. 6(ಕೆಎಂಶಿ)– ಭಾರ ಲೋಹಯುಕ್ತ ರಾಸಾಯನಿಕ ಪಟಾಕಿ ಮಾರಾಟ ಮಾಡುವುದಿಲ್ಲ. ಪರಿಸರ ಸ್ನೇಹಿ ಹಸಿರು ಪಟಾಕಿ ಮಾತ್ರ ಮಾರಾಟ ಮಾಡುವುದಾಗಿ ಪಟಾಕಿ ಮಳಿಗೆ ಮಾಲೀಕರಿಂದ ಮುಚ್ಚಳಿಕೆ ಬರೆಸಿಕೊಳ್ಳುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಬಿ.ಖಂಡ್ರೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಗೆ ಇಂದಿಲ್ಲಿ ಸೂಚಿಸಿದ್ದಾರೆ.

ಪರಿಸರ ಸ್ನೇಹಿ (ವಿದ್ಯುತ್ ಚಾಲಿತ) 68 ವಾಹನಗಳಿಗೆ ಹಸಿರು ನಿಶಾನೆ ತೋರಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರಲೋಹ




ಯುಕ್ತ ರಾಸಾಯನಿಕ ಪಟಾಕಿ ಮಾರಾಟ ಮಾಡುವವರ ಪರವಾನಗಿ ರದ್ದುಪಡಿಸಲು ಕ್ರಮ ವಹಿಸುವಂತೆ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಎಂ.ಪಿ. ನರೇಂದ್ರ ಸ್ವಾಮಿ ಅವರಿಗೆ ತಿಳಿಸಿದರು.

ಹದಿನೈದು ವರ್ಷ ಪೂರೈಸಿದ ಡೀಸೆಲ್ ವಾಹನಗಳನ್ನು ಸ್ಕ್ರ್ಯಾಪ್ ನೀತಿಯನ್ವಯ ಬಳಕೆಯಿಂದ ದೂರವಿಡಬೇಕು. ಏಕ ಬಳಕೆ ಪ್ಲಾಸ್ಟಿಕ್, ವೈದ್ಯಕೀಯ ತ್ಯಾಜ್ಯ, ಇ–ತ್ಯಾಜ್ಯ ವಿಲೇವಾರಿ ಘಟಕಗಳ ಮೇಲೆ ನಿಗಾ ಮತ್ತು ಏಕ ಬಳಕೆ ಪ್ಲಾಸ್ಟಿಕ್ ತಯಾರಿಕಾ ಘಟಕ, ಮಳಿಗೆಗಳ ತಪಾಸಣೆ, ಪರಿಶೀಲನೆ, ಜಲ ಮೂಲಗಳ ಗುಣಮಟ್ಟ ಪರೀಕ್ಷೆಗೆ ಸಿಬ್ಬಂದಿಗೆ ಎದುರಾಗಿದ್ದ ವಾಹನಗಳ ಕೊರತೆ ನೀಗಿಸಲು ವಿದ್ಯುತ್ ಚಾಲಿತ ವಾಹನಗಳನ್ನು ನೀಡಲಾಗಿದೆ.

ಇವುಗಳ ಸದ್ಬಳಕೆಯಿಂದ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಪರಿಸರ ಸಂರಕ್ಷಣೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಥ್ರೋಬಾಲ್ ಪಂದ್ಯಾವಳಿ: ಮಹಾಜನ ಕಾಲೇಜು ಪ್ರಥಮ



ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ಮಹಿಳೆಯರ ಅಂತರ ಕಾಲೇಜು ಥ್ರೋಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಥಮ ಸ್ಥಾನ ಗಳಿಸಿದೆ. ಚಿತ್ರದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್.ಮಧುಸೂದನ, ರಾಧಿಕಾ ರಾಣಿ, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಡಾ.ಹೆಚ್.ಎನ್.ಭಾಸ್ಕರ್, ಡಾ.ಸೋಮಶೇಖರ್, ತಂಡದ ನಾಯಕಿ ಪರಿಣಿತ, ನಿಶಾ, ಹರ್ಷಿಣಿ, ಅನುಶ್ರೀ, ಹರ್ಷಿತಾ, ಸ್ಮಿತಾ, ಕೃತಿಕ, ಕಾಂಚನ, ಮಮತ ಇದ್ದಾರೆ.

ಸನ್ಮಾನ...



ಮೈಸೂರು ಕುವೆಂಪುನಗರದ ಕುವೆಂಪು ಒಕ್ಕಲಿಗರ ಟ್ರಸ್ಟ್ ವತಿಯಿಂದ ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಬ್ಯಾಂಕ್‌ನ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಕೆ. ಉಮಾಶಂಕರ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಂಘದ ಕಾರ್ಯದರ್ಶಿ ರಘುರಾಮ್ ಗೌಡ, ಸಂಘಟನಾ ಕಾರ್ಯದರ್ಶಿ ಪೂಜಾ ಟೆಂಟ್ ಹೌಸ್‌ನ ಲಿಂಗಪ್ಪ, ಕೆ.ವಿ.ನಾಗಭೂಷಣ್, ಖಜಾಂಚಿ ಅನಿಲ್, ಸಂಚಾಲಕ ಬೂಕನಕೆರೆ ವಿಜೇಂದ್ರ ಉಪಸ್ಥಿತರಿದ್ದರು.

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡಗಳ ತಾಂತ್ರಿಕ ತಪಾಸಣೆ ನಡೆಸಿದ ಐಐಟಿ ರೂರ್ಕಿಯ ತಜ್ಞರ ತಂಡ

ಮೈಸೂರು, ಅ.6(ಎಂಟಿವೈ)– ಮೈಸೂರಿನ ಪಾರಂಪರಿಕ ಕಟ್ಟಡಗಳಾದ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಹಾಗೂ ದೇವರಾಜ ಮಾರುಕಟ್ಟೆಯ ವಾಸ್ತವತೆಯ ಸ್ಥಿತಿ–ಗತಿ ಮೌಲ್ಯಮಾಪನಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನದನ್ವಯ ನಿಯೋಜಿತ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ರೂರ್ಕಿ, ನಾಲ್ವರು ತಜ್ಞರ ತಂಡ ಸೋಮವಾರ ಬೆಳಗ್ಗೆ ಈ ಎರಡೂ ಕಟ್ಟಡಗಳನ್ನು ಪರಿಶೀಲಿಸಿತು.

ಮೈಸೂರಿನ ಪ್ರತಿಷ್ಠಿತ ಪಾರಂಪರಿಕ ಕಟ್ಟಡಗಳಾಗಿದ್ದು, 19ನೇ ಶತಮಾನದಲ್ಲಿ ನಿರ್ಮಾಣವಾದ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಹಾಗೂ ದೇವರಾಜ ಮಾರುಕಟ್ಟೆಯ ಒಂದು ಭಾಗ ಕುಸಿತವಾದ ಹಿನ್ನೆಲೆಯಲ್ಲಿ ಇದೀಗ ಎರಡೂ ಕಟ್ಟಡಗಳು ಶಿಥಿಲಾವಸ್ಥೆ ತಲುಪಿರುವ ಕಾರಣ ಅವುಗಳನ್ನು ನೆಲಸಮ ಮಾಡಿ, ಪುನರ್ ನಿರ್ಮಾಣ ಮಾಡುವ ಸಂಬಂಧ ಕರ್ನಾಟಕ ಸರ್ಕಾರ ನಿರ್ಧಾರ ಕೈಗೊಂಡಿತ್ತು. ರಾಜ್ಯ ಸರ್ಕಾರದ ಈ ನಿರ್ಧಾರವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಸ್ಪೆಷಲ್ ಲೀವ್ ಪಿಟಿಷನ್ (ಎಸ್‌ಎಲ್‌ಪಿ) ಸಲ್ಲಿಸಲಾಗಿತ್ತು. ಸುಪ್ರೀಂ ಕೋರ್ಟ್ ಈ ಎರಡೂ ಕಟ್ಟಡಗಳ ಮೌಲ್ಯಮಾಪನ ಮಾಡಿ, ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಸುವಂತೆ ಆದೇಶಿಸಿತ್ತು.



ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ರೂರ್ಕಿಯ ನಾಲ್ವರು ತಜ್ಞರ ತಂಡ ದೇವರಾಜ ಮಾರುಕಟ್ಟೆ ಕಟ್ಟಡ ಪರಿಶೀಲಿಸಿತು.

ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಭಾರತೀಯ ತಂತ್ರಜ್ಞಾನ ಸಂಸ್ಥೆ (ಇಂಡಿಯನ್ ಇನ್ಸ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ–ಐಐಟಿ) ರೂರ್ಕಿಯ ನಾಲ್ವರು ತಜ್ಞರ ತಂಡ ಮೈಸೂರಿಗೆ ಆಗಮಿಸಿದ್ದು, ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳೊಂದಿಗೆ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಹಾಗೂ ದೇವರಾಜ ಮಾರುಕಟ್ಟೆಯ ಕಟ್ಟಡಕ್ಕೆ ಭೇಟಿ ನೀಡಿ ವಿವಿಧ ಆಯಾಮಗಳಲ್ಲಿ ಪರಿಶೀಲನೆ ನಡೆಸಿದರು.

ಐಐಟಿಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರೊ.ಉಮೇಶ್‌ಕುಮಾರ್ ಶರ್ಮಾ ನೇತೃತ್ವದಲ್ಲಿ ಪ್ರೊ.ಸಂಜಯ್ ಚಿಕ್ಕರೆಮನೆ, ಪ್ರೊ.ರಾಮ್ ಸತೀಶ್ ಪಶುಪುಲೇಟಿ, ಪ್ರೊ.ಮಾನ್ವಿ ಸುನೇಜಾ ಅವರು ಎರಡು ಪಾರಂಪರಿಕ ಕಟ್ಟಡಗಳ ವಾಸ್ತವ ಸ್ಥಿತಿಗತಿಯನ್ನು ಪರಿಶೀಲಿಸಿದರು. ಈ ವೇಳೆ ಮೈಸೂರು ಮಹಾನಗರ ಪಾಲಿಕೆಯ ಇಇ ಮಧು, ಅಧಿಕಾರಿ ಬಾಬು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದು, ಐಐಟಿ ತಜ್ಞರ ತಂಡಕ್ಕೆ ಕಟ್ಟಡಗಳ ಬಗ್ಗೆ ಮಾಹಿತಿ ನೀಡಿದರು.

ತಜ್ಞರ ಸಮಿತಿ, ಈ ಎರಡೂ ಕಟ್ಟಡಗಳ ಕುಸಿದ ಭಾಗ, ಮೇಲ್ಛಾವಣಿ, ಪಿಲ್ಲರ್, ಗೋಡೆ, ಅಡಿಪಾಯ, ಕಟ್ಟಡಗಳ ನಾಲ್ಕು ಭಾಗದಲ್ಲಿಯೂ ಇಂಚಿಂಚೂ ಪರಿಶೀಲನೆ ನಡೆಸಿತು. ಅಲ್ಲದೆ, ಕಟ್ಟಡದ ಕೆಲವು ಭಾಗದಲ್ಲಿ ಸ್ಯಾಂಪಲ್ ಸಂಗ್ರಹಿಸಿ ಅದನ್ನು ವೈಜ್ಞಾನಿಕ ಪರೀಕ್ಷೆಗೊಳಪಡಿಸಿ, ಕಟ್ಟಡಗಳ ಸುಭದ್ರತೆ ಕಾಯ್ದುಕೊಳ್ಳಬಹುದೇ, ಇಲ್ಲ ನೆಲಸಮಗೊಳಿಸಿ, ಪುನರ್ ನಿರ್ಮಾಣ ಮಾಡಬೇಕೋ, ಇಲ್ಲವೇ ದುರಸ್ತಿಗೊಳಿಸಿ ಉಳಿಸಿಕೊಳ್ಳಬಹುದೋ ಎಂಬುದನ್ನು ನಿರ್ಧರಿಸಲಿದೆ. ಈ ಸಮಿತಿ ಸುಪ್ರೀಂ ಕೋರ್ಟ್ ಸೂಚನೆ ಮೇರೆಗೆ ಸೆ.9ರಿಂದ 8 ವಾರದೊಳಗೆ ವರದಿ ಸಲ್ಲಿಸಬೇಕಾಗಿದೆ. ಆ ನಿಟ್ಟಿನಲ್ಲಿ ಪರಿಶೀಲನಾ ಕಾರ್ಯವನ್ನು ಐಐಟಿ ರೂರ್ಕಿ ಸಮಿತಿ ಆರಂಭಿಸಿದೆ.

ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮತ್ತು ದೇವರಾಜ ಮಾರುಕಟ್ಟೆ ಕಟ್ಟಡಗಳ ನೆಲಸಮ ಮಾಡಿ ಪುನರ್ ನಿರ್ಮಾಣ ಮಾಡುವುದಕ್ಕೆ ಮೈಸೂರು ಮಹಾನಗರ ಪಾಲಿಕೆ ನಿರ್ಣಯ ಕೈಗೊಂಡಿತ್ತು. ಇದಕ್ಕೆ ರಾಜ್ಯ ಸರ್ಕಾರವೂ ಸಮ್ಮತಿಸಿತ್ತು. ಜೊತೆಗೆ ಅನುದಾನ ಕಾಯ್ದಿರಿಸಿತ್ತು. ಸರ್ಕಾರದ ನಿಲುವನ್ನು ಕರ್ನಾಟಕ ಹೈಕೋರ್ಟ್ ಎತ್ತಿ ಹಿಡಿದಿತ್ತು. ಆದರೆ, ಸರ್ಕಾರದ ಕ್ರಮ ಪ್ರಶ್ನಿಸಿ ದೇವರಾಜ ಮಾರುಕಟ್ಟೆಯ ವ್ಯಾಪಾರಿಗಳು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ (ಪಿಐಎಲ್) ಸಲ್ಲಿಸಿದ್ದರು. ಪಿಐಎಲ್ ವಜಾಗೊಂಡ ನಂತರ, ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಸುಪ್ರೀಂಕೋರ್ಟ್ ಇಂಟ್ಯಾಕ್ ಮತ್ತು ಭಾರತೀಯ ಪುರಾತತ್ವ ಸಮೀಕ್ಷೆ (ಎಎಸ್‌ಐ) ವಿವರವಾದ ವರದಿ ನೀಡುವಂತೆ ಸೂಚಿಸಿತ್ತು.

ಬೆಂಗಳೂರಲ್ಲಿ ರಿವರ್ಸ್ ತೆಗೆಯುವಾಗ ಕಾರು ಹರಿದು 11 ತಿಂಗಳ ಮಗು ಸಾವು

ಬೆಂಗಳೂರು: ಕಾರು ರಿವರ್ಸ್ ತೆಗೆಯುವಾಗ ಆಕಸ್ಮಿಕವಾಗಿ ಚಕ್ರಕ್ಕೆ ಸಿಲುಕಿ 11 ತಿಂಗಳ ಮಗು ಸಾವನ್ನಪ್ಪಿದ ದಾರುಣ ಘಟನೆ ಸೋಮವಾರ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತನ ಮಗುವನ್ನು ಅಜಾನ್ ಎಂದು ಗುರುತಿಸಲಾಗಿದ್ದು, ಮಾಗಡಿ ರಸ್ತೆಯಲ್ಲಿರುವ ಮನೆಯಲ್ಲಿ ಇಂದು ಬೆಳಗ್ಗೆ 9.45ರ ಸುಮಾರಿಗೆ ಈ ದುರಂತ ನಡೆದಿದೆ. ಮನೆ ಮಾಲೀಕರು ತಮ್ಮ ಕಾರನ್ನು ರಿವರ್ಸ್ ತೆಗೆಯುವಾಗ ಬಾಡಿಗೆದಾರರ ಮಗು ಆಕಸ್ಮಿಕವಾಗಿ ವಾಹನದ ಹಿಂದಿನಿಂದ ಬಂದಿದ್ದು, ಆ ಮಗುವಿನ ಮೇಲೆ ಕಾರು ಹರಿದಿದೆ ಎಂದು ಪ್ರಾಥಮಿಕ ತನಿಖೆಯನ್ನು ಉಲ್ಲೇಖಿಸಿ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮನೆ ಮಾಲೀಕ, ತಕ್ಷಣ ಮಗುವನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ದರು. ಆದರೆ ತೀವ್ರ ಗಾಯ ಹಾಗೂ ರಕ್ತಸ್ರಾವದಿಂದ ಮಗು ಸಾವನ್ನಪ್ಪಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಕಾರು ಚಾಲಕ ಸ್ವಾಮಿಯನ್ನು ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದು, ವಿಚಾರಣೆ ನಡೆಸುತ್ತಿರುವುದಾಗಿ ಬೆಂಗಳೂರು ಪಶ್ಚಿಮ ಸಂಚಾರ ವಿಭಾಗದ ಡಿಸಿಪಿ ಡಾ.ಅನೂಪ್ ಎ.ಶೆಟ್ಟಿ ಮಾಹಿತಿ ನೀಡಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 7 ಅಕ್ಟೋಬರ್ 2025

ನಾಡ ಪೆದ ಆಶಾ ಚಿತ್ರಕ್ಕೆ ಅತ್ಯುತ್ತಮ ಪ್ರಾದೇಶಿಕ ಭಾಷಾ ಸಿನಿಮಾ ಪ್ರಶಸ್ತಿ

ಮಡಿಕೇರಿ,ಅ.6–ಕೊಡವ ಭಾಷೆಯ ನಾಡ ಪೆದ ಆಶಾ ಚಿತ್ರಕ್ಕೆ ಅತ್ಯುತ್ತಮ ಪ್ರಾದೇಶಿಕ ಭಾಷಾ ಸಿನಿಮಾ ಪ್ರಶಸ್ತಿ ಲಭಿಸಿದೆ.

ಹಿರಿಯ ಸಾಹಿತಿ ನಾಗೇಶ್ ಕಾಲೂರು ಕಾದಂಬರಿ ಆಧರಿಸಿ ವಿಕೆ3 ಪಿಕ್ಚರ್ಸ್ ಬ್ಯಾನರಿನಡಿ ಈರಮಂಡ ಹರಿಣಿ ವಿಜಯ್ ಹಾಗೂ ಕೊಟ್ಟುಕತ್ತಿರ ಯಶೋಧ ಪ್ರಕಾಶ್ ನಾಡ ಪೆದ ಆಶಾವನ್ನು ನಿರ್ಮಿಸಿದ್ದು ಕೊಟ್ಟುಕತ್ತಿರ ಪ್ರಕಾಶ್ ಕಾರ್ಯಪ್ಪ ನಿರ್ದೇಶಿಸಿದ್ದಾರೆ. ಇದು ಮಹಿಳಾ ಪ್ರಧಾನ ಚಿತ್ರವಾಗಿದ್ದು, ಗ್ರಾಮೀಣ ಸೊಗಡನ್ನು ಸುಂದರವಾಗಿ ಬಿಂಬಿಸಲಾಗಿದೆ. ಕೊಡವ ಸಂಸ್ಕೃತಿ, ಉಡುಗೆ ತೊಡುಗೆ, ಸಂಪ್ರದಾಯ, ಆಚಾರ ವಿಚಾರಗಳನ್ನು ಮನ ಮುಟ್ಟುವಂತೆ ಚಿತ್ರಿಸಲಾಗಿದೆ. ಯುದ್ಧದಲ್ಲಿ ವೀರಯೋಧ ಪತಿಯನ್ನು ಕಳೆದುಕೊಳ್ಳುವ ಅಂಗನವಾಡಿ ಕಾರ್ಯಕರ್ತೆ ತನ್ನ ಬದುಕಿನ ಕಹಿ ಘಟನೆಯ ನಡುವೆಯೂ ಮನೆ ಮತ್ತು ಕುಟುಂಬವನ್ನು ಯಶಸ್ವಿಯಾಗಿ ನಿಭಾಯಿಸುವ ಕಥಾ ಹಂದರವನ್ನು ಮನೋಜ್ಞವಾಗಿ ಚಿತ್ರಿಸಲಾಗಿದೆ.



ಅತ್ಯುತ್ತಮ ಪ್ರಾದೇಶಿಕ ಭಾಷಾ ಸಿನಿಮಾ ಪ್ರಶಸ್ತಿಗೆ ಭಾಜನವಾದ ನಾಡ ಪೆದ ಆಶಾ ಚಿತ್ರ

ಫೆಬ್ರವರಿ ತಿಂಗಳಲ್ಲಿ 15 ದಿನಗಳ ಕಾಲ ಹಗಲುರಾತ್ರಿ ಎನ್ನದೆ ಸುಮಾರು 35 ತಂತ್ರಜ್ಞರನ್ನೊಳಗೊಂಡ ಚಿತ್ರ ತಂಡ ಕೊಡಗಿನ ಮೂರ್ನಾಡು, ಬೇತ್ರಿ, ಬಲಮುರಿ, ಕಡಗದಾಳು, ಸೋಮವಾರಪೇಟೆ, ಕೋಟೆಬೆಟ್ಟ, ನಾಪೋಕ್ಲು, ಮಡಿಕೇರಿ, ಬೋಳಿಬಾಣೆ, ಮೊಕ್ಕೊಲಿ ರೆಸಾರ್ಟ್, ನೆಲ್ಲಿಮಾನಿ ರೆಸಾರ್ಟ್, ಬೇತ್ರಿ ಮುಕ್ಕಾಟಿರ ಐನ್ ಮನೆ ಸೇರಿದಂತೆ ವಿವಿಧ ಸ್ಥಳಗಳ ಪ್ರಕೃತಿಯ ಸೌಂದರ್ಯದಲ್ಲಿ ಚಿತ್ರೀಕರಣ ನಡೆಸಲಾಗಿತ್ತು. ನಾಡ ಪೆದ ಆಶಾ ಬಿಡುಗಡೆಯಾದ ನಂತರ ಎಲ್ಲೆಡೆ ಎಲ್‌ಇಡಿ ಪರದೆಯ ಮೇಲೆ 123 ಪ್ರದರ್ಶನ ಕಂಡು ಜನಮೆಚ್ಚುಗೆ ಪಡೆದಿತ್ತು. ಅಲ್ಲದೆ ಹಲವು ಅಂತರ ರಾಷ್ಟ್ರೀಯ ಚಲಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಪ್ರಶಸ್ತಿಗಳನ್ನು ಕೂಡ ಗೆದ್ದುಕೊಂಡಿದೆ.

ಹುತಾತ್ಮ ಯೋಧರಿಗೆ ಗೌರವ ನಮನ



ಕೊಡವ ಯೋಧರಿಗೆ ಕೊಡವ ಸಿಎನ್‌ಸಿ ಗೌರವ ಸಲ್ಲಿಸಿತು.

ಮಡಿಕೇರಿ, ಅ.6–ಲಕ್ಕಿಕೋಟೆಯಲ್ಲಿ 18ನೇ ಶತಮಾನದಲ್ಲಿ 3ನೇ ಮತ್ತು 4ನೇ ಆಂಗ್ಲೋ–ಮೈಸೂರು ಯುದ್ಧಗಳಲ್ಲಿ ಹೋರಾಡಿ ಹುತಾತ್ಮರಾದ ಧೈರ್ಯಶಾಲಿ ಕೊಡವ ಯೋಧರಿಗೆ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಗೌರವ ನಮನ ಸಲ್ಲಿಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, ಆಂಗ್ಲೋ–ಮೈಸೂರು ಯುದ್ಧಗಳು ಭಾರತೀಯ ಇತಿಹಾಸದಲ್ಲಿ ಮಹತ್ವದ ಘಟನೆಗಳಾಗಿದ್ದು, ಕೊಡವ ಯೋಧರ ಕೊಡುಗೆಯನ್ನು ಗುರುತಿಸುವುದು ನಮ್ಮ ಕರ್ತವ್ಯವಾಗಿದೆ. ಪ್ರಾರ್ಥನೆ ಮತ್ತು ನಮನ ಸಲ್ಲಿಸುವ ಕಾರ್ಯವು ಕೊಡವ ಯೋಧರ ಶೌರ್ಯ, ತ್ಯಾಗ ಹಾಗೂ ಪರಂಪರೆಯನ್ನು ಗೌರವಿಸುವ ಒಂದು ಸಂಪ್ರದಾಯವಾಗಿದೆ. ಸಮುದಾಯದ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯೊಂದಿಗೆ ಸಂಪರ್ಕ ಸಾಧಿಸಲು ಇದು ಅರ್ಥಪೂರ್ಣ ಮಾರ್ಗವಾಗಿದೆ ಎಂದರು.

ಶೌರ್ಯ ಮತ್ತು ಸಮರ ಕೌಶಲ್ಯಗಳಿಗೆ ಹೆಸರುವಾಸಿಯಾದ ಕೊಡವ ಯೋಧರು, ಮೈಸೂರು ಸುಲ್ತಾನರ ವಿರುದ್ಧ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯೊಂದಿಗೆ ಮಿಲಿಟರಿ ಮೈತ್ರಿಯನ್ನು ರಚಿಸಿಕೊಂಡರು. ಆಂಗ್ಲೋ–ಮೈಸೂರು ಯುದ್ಧಗಳ ಸಂದರ್ಭದಲ್ಲಿ ಈ ಮೈತ್ರಿ ಮಹತ್ವದ್ದಾಗಿತ್ತು ಎಂದು ತಿಳಿಸಿದರು. ಜನರಲ್ ಆರ್ಥರ್ ವೆಲ್ಲೆಸ್ಲಿ ನೇತೃತ್ವದಲ್ಲಿ ನಡೆದ 4ನೇ ಆಂಗ್ಲೋ ಮೈಸೂರು ಯುದ್ಧ ಟಿಪ್ಪು ಸುಲ್ತಾನನ ಸೋಲು ಮತ್ತು ಸಾವಿಗೆ ಕಾರಣವಾಯಿತು. ಇದು ಮೈಸೂರು ಸುಲ್ತಾನರ ಅಂತ್ಯವನ್ನು ಸೂಚಿಸುತ್ತದೆ. ಈ ಯುದ್ಧಗಳಲ್ಲಿ ಕೊಡವ ಯೋಧರು ಭಾಗವಹಿಸಿರುವುದು ಗಮನಾರ್ಹ ಅಂಶವಾಗಿದೆ ಎಂದು ನಾಚಪ್ಪ ಹೇಳಿದರು.

ಹೈಕೋರ್ಟ್ ವಕೀಲ ಎ.ಕೆ.ವಸಂತ್ ಅಮೀನ್, ಕಾಂಡೇರ ಸುರೇಶ್, ವಸಂತ್ ಆಳ್ವ, ವಿನಯ್ ಹಾಗೂ ಗಿರೀಶ್ ಗೌರವ ಅರ್ಪಿಸಿದರು.

ಜಿಲ್ಲಾ ಯುವ ಭವನ ಯುವ ಒಕ್ಕೂಟದ ವಶಕ್ಕೆ

ಮಡಿಕೇರಿ: 12 ವರ್ಷಗಳಿಂದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ಮೀಸಲಾಗಿದ್ದ ಕೊಡಗು ಜಿಲ್ಲಾ ಯುವ ಭವನ ಇದೀಗ ಜಿಲ್ಲಾ ಯುವ ಒಕ್ಕೂಟಕ್ಕೆ ಮರಳಿ ದೊರಕಿದೆ. ಸುದರ್ಶನ ವೃತ್ತದಲ್ಲಿ ನಿರ್ಮಾಣಗೊಂಡಿದ್ದ ಜಿಲ್ಲಾ ಯುವ ಒಕ್ಕೂಟದ ಯುವ ಭವನವನ್ನು ಬಿಜೆಪಿ ಸರ್ಕಾರ ಜಿಲ್ಲೆಯ ಮೊದಲ ಮಹಿಳಾ ಕಾಲೇಜಿಗೆ ಸೂಕ್ತ ಕಟ್ಟಡ ಇಲ್ಲದ ಕಾರಣ 6 ತಿಂಗಳ ಅವಧಿಗೆ ಬಿಟ್ಟುಕೊಟ್ಟಿತ್ತು. ಪ್ರಸಕ್ತ ಸಾಲಿನಲ್ಲಿ ಶಾಸಕ ಡಾ.ಮಂತರ್ ಗೌಡ ಪ್ರಯತ್ನದ ಫಲವಾಗಿ ಮಹಿಳಾ ಕಾಲೇಜನ್ನು ನಗರದ ಜೂನಿಯರ್ ಕಾಲೇಜು ಆವರಣದಲ್ಲಿ ನೂತನವಾಗಿ ನಿರ್ಮಿಸಲಾದ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ಮಹಿಳಾ ಕಾಲೇಜು ಪಾಂಶುಪಾಲ ನಿರ್ಮಲ ಯುವ ಭವನದ ಕೀ ಗೊಂಚಲನ್ನು ಜಿಲ್ಲಾ ಯುವ ಒಕ್ಕೂಟ ಅಧ್ಯಕ್ಷ ಪಿ.ಪಿ.ಸುಕುಮಾರ್ ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭ ಜಿಲ್ಲಾ ಯುವ ಒಕ್ಕೂಟದ ಕಾರ್ಯಾಧ್ಯಕ್ಷ ಕೂಡಂಡ ಸಬಾ ಸುಬ್ರಮಣಿ, ಖಜಾಂಚಿ ಕುಂಜಿಲನ ಮಧು ಮೋಹನ್, ಸದಸ್ಯ ಡಿ. ನವೀನ್ ದೇರಳ, ತಾಲೂಕು ಯುವ ಒಕ್ಕೂಟ ಅಧ್ಯಕ್ಷ ಬಾಳಾಡಿ ದಿಲೀಪ್ ಕುಮಾರ್, ಕಾಲೇಜು ಪ್ರಾಧ್ಯಾಪಕರು ಹಾಜರಿದ್ದರು.

ಇಂಗ್ಲಿಷ್ ಭಾಷಣ ಸ್ಪರ್ಧೆಯಲ್ಲಿ ಬಿ.ಎ.ಆದಿಲ್ ರಾಷ್ಟ್ರಮಟ್ಟಕ್ಕೆ ಆಯ್ಕೆ

ಮಡಿಕೇರಿ,ಅ.6–ಸುನ್ನಿ ಸ್ಟೂಡೆಂಟ್ಸ್ ಫೆಡರೇಷನ್‌ನ ವತಿಯಿಂದ ಬೆಂ



ಗಡಿ ತಾಲೂಕಿನ ತುರ್ಕಳಿಕೆಯಲ್ಲಿ ನಡೆದ ರಾಜ್ಯ ಮಟ್ಟದ ಸಾಹಿತ್ಯೋತ್ಸವ' ಇಂಗ್ಲಿಷ್ ಭಾಷಣ ಸ್ಪರ್ಧೆಯಲ್ಲಿ ಕೊಡಗಿನ ಬಿ.ಎ.ಆದಿಲ್ ಪ್ರಥಮ ಸ್ಥಾನಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ಗೋಣಿಕೊಪ್ಪಲಿನ ಅತ್ತೂರು ನ್ಯಾಷನಲ್ ಅಕಾಡೆಮಿ ಶಾಲೆಯ 9ನೇ ತರಗತಿಯ ವಿದ್ಯಾರ್ಥಿಯಾಗಿರುವ ಆದಿಲ್ ಅತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಸಲೀನ ಅಶ್ರಫ್ ಹಾಗೂ ಪಾಲಿಬೆಟ್ಟ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಅಶ್ರಫ್ ದಂಪತಿ ಪುತ್ರ.

ಇಂದು ಸಾಮೂಹಿಕ ಸತ್ಯನಾರಾಯಣ ಪೂಜೆ

ಮಡಿಕೇರಿ, ಅ.6–ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಅ.7 ರ ಸಂಜೆ 4 ಗಂಟೆಯಿಂದ ಸಾಮೂಹಿಕ ಸತ್ಯ ನಾರಾಯಣ ಪೂಜೆ ನಡೆಯಲಿದೆ. ಸಾರ್ವಜನಿಕ ಭಕ್ತಾದಿಗಳು ದೇವಾಲಯಗಳಲ್ಲಿ ನಡೆಯಲಿರುವ ಪೂಜೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸುವಂತೆ ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ್ ಎನ್.ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಉತ್ತಮ ಸಮಾಜ ರೂಪಿಸಲು ವಿದ್ಯಾರ್ಥಿಗಳು ಮುಂದಾಗಬೇಕು



ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಾರ್ಷಿಕ ಶಿಬಿರದಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿಗಳು.

ವಿರಾಜಪೇಟೆ, ಅ.6–ಪಾಠ ಪ್ರವಚನದೊಂದಿಗೆ ಸಾಮಾಜಿಕ ಮೌಲ್ಯಗಳಿಗೆ ಗೌರವ ಸೂಚಿಸಿ ಉತ್ತಮ ಸಮಾಜ ರೂಪಿಸುವಲ್ಲಿ ವಿದ್ಯಾರ್ಥಿಗಳು ಮುಂದಾಗಬೇಕೆಂದು ನರಿಯಂಡಡ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪೆಮ್ಮಂಡ ಕೌಶಿ ಕಾವೇರಮ್ಮ ಹೇಳಿದ್ದಾರೆ.

ಕಾಲೇಜು ಶಿಕ್ಷಣ ಇಲಾಖೆ ಕಾವೇರಿ ಕಾಲೇಜು ಆಶ್ರಯದಲ್ಲಿ ಕಡಂಗ ಅರಪಟ್ಟು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಭಾಂಗಣದಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಾರ್ಷಿಕ ಶಿಬಿರದಲ್ಲಿ ಹೂವಿನ ಗಿಡಕ್ಕೆ ನೀರು ಎರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಕೌಶಿ ಕಾವೇರಮ್ಮ ಸಮಾಜದ ಅಭಿವೃದ್ಧಿಗೆ ಯುವ ಸಮೂಹವು ಪೂರಕವಾಗಿ ಪ್ರತಿಸ್ಪಂದಿಸಬೇಕು ಎಂದರು.

ಕಾಲೇಜು ಶಿಕ್ಷಣದಲ್ಲಿ ಪಠ್ಯ ಪುಸ್ತಕದಲ್ಲಿರುವ ತಿರುಳು ಮತ್ತು ಮಾಹಿತಿ ತಿಳಿದುಕೊಂಡರೆ ಸಾಲದು, ಬಾಹ್ಯವಾದ ಚಿಂತನೆಗಳ ಬಗ್ಗೆ ಪರಿಜ್ಞಾನದ ಅರಿವು ಹೊಂದುವುದು ಮುಖ್ಯ. ಪೋಷಕರು ಮತ್ತು ಶಿಕ್ಷಕರ ಒತ್ತಡಕ್ಕೆ ಮಣಿದು ಓದದೆ ಬದಲಿಗೆ ಆತ್ಮಗೌರವ ಶಿಕ್ಷಣದ ಹಂಬಲದೊಂದಿಗೆ ಓದಬೇಕು. ಯುವ ಸಮುದಾಯವು ಮೊಬೈಲ್ ವ್ಯಾಮೋಹಕ್ಕೆ ಬಲಿಯಾಗದೆ ಉತ್ತಮ ಹವ್ಯಾಸಕ್ಕೆ ಜೀವನಕ್ಕೆ ಮಾದರಿಯಾಗುವ ವಿಷಯಗಳಿಗೆ ಸೀಮಿತಗೊಳಿಸಿಕೊಳ್ಳಬೇಕೆಂದು ಹೇಳಿದರು.

ಧ್ವಜಾರೋಹಣಗೈದ ನರಿಯಂಡಡ ಗ್ರಾಮ ಉಪಾಧ್ಯಕ್ಷ ಕೋಡಿರ ಎಂ. ವಿನೋದ್ ನಾಣಯ್ಯ ಮಾತನಾಡಿ, ಶಿಸ್ತು, ಸಂಯಮ, ನಡತೆ ಹಾಗೂ ನಾಯಕತ್ವ ಕಲಿಯಲು ಶಿಬಿರಗಳು ಉತ್ತಮ ವೇದಿಕೆಯಾಗಿದೆ. ಶಿಬಿರದಲ್ಲಿ ಕಲಿಯುವ ಪ್ರತಿಯೊಂದು ವಿಷಯಗಳು ಜೀವನ ಸುಧಾರಣೆಯ ಅಂಶಗಳಾಗಿವೆ. ಇವುಗಳು ಶಿಬಿರಕ್ಕೆ ಮಾತ್ರ ಸೀಮಿತವಾಗದೆ ಜೀವನದ ಸಂಗಾತಿಗಳಾಗಬೇಕು ಎಂದರು.

ಎಡಪಾಲ ಗ್ರಾಮದ ನಿವೃತ್ತ ಮುಖ್ಯ ಶಿಕ್ಷಕ ರಾಜ್ಯ ಪ್ರಶಸ್ತಿ ವಿಜೇತ ಕೆ.ಎ. ಉಮ್ಮರ್ ಮಾತನಾಡಿದರು.

ಕಾವೇರಿ ಕಾಲೇಜು ಪ್ರಾಂಶುಪಾಲ ಬೆನಡಿಕ್ಟ್ ಆರ್ ಸಲ್ದಾನ ಶಿಬಿರಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು. ಸಹಿಪ್ರಾ ಶಾಲೆ ಅರಪಟ್ಟು ಕಡಂಗ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಭವ್ಯಶ್ರೀ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಅರಪಟ್ಟು ಕಡಂಗ ಶಾಲೆಯ ಸಹ ಶಿಕ್ಷಕ ವತ್ಸಲ ಶ್ರೀಶ, ಕಾವೇರಿ ಕಾಲೇಜು ಉಪನ್ಯಾಸಕರು, ಎನ್‌ಎಸ್‌ಎಸ್ ಘಟಕದ ಯೋಜನಾಧಿಕಾರಿ ಸುನೀಲ್ ಕುಮಾರ್ ಬಿ.ಬಿ. ಉಪಸ್ಥಿತರಿದ್ದರು. ಕಾವೇರಿ ಕಾಲೇಜು ನಿರ್ಮಿತಾ ಸ್ವಾಗತಿಸಿ, ವಿದ್ಯಾರ್ಥಿನಿ ರಮ್ಯ ನಿರೂಪಿಸಿ, ಉಪನ್ಯಾಸಕ ಮಾಣಿಕ ವಂದಿಸಿದರು.

ಕಾಂತೂರು ಮೂರ್ನಾಡು ಗ್ರಾಪಂನಿಂದ ಮುನ್ನೋಟ ಪುಸ್ತಕ ಬಿಡುಗಡೆ

ನಾಪೋಕ್ಲು: ಕಾಂತೂರು ಮೂರ್ನಾಡು ಗ್ರಾಮ ಪಂಚಾಯಿತಿ ವತಿಯಿಂದ ಪಂಚಾಯ್ತಿಯ ವಿಶೇಷ ಸಾಧನೆ, ಕೆಲಸ ಕಾರ್ಯಗಳ ಮಾಹಿತಿಯನ್ನು ಒಳಗೊಂಡ ಮುನ್ನೋಟ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ಪಂಚಾಯತಿ ಸಭಾಂಗಣದಲ್ಲಿ ಅಧ್ಯಕ್ಷ ಕುಶನ್ ರೈ.ಬಿ.ಎಸ್ ಅಧ್ಯಕ್ಷತೆಯಲ್ಲಿ ಚುನಾಯಿತ ಪ್ರತಿನಿಧಿಗಳ ಸಾಮಾನ್ಯ ಸಭೆಯಲ್ಲಿ 22 ಪುಟಗಳ ಪುಸ್ತಕ ಅನಾವರಣಗೊಳಿಸಲಾಯಿತು. ಸಭೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚಂದ್ರಮೌಳಿ ಮಾತನಾಡಿ ಕಳೆದ ಸಾಲಿನಲ್ಲಿ ಅತ್ಯುತ್ತಮ ಸಮಾಜಮುಖಿ ಕೆಲಸಗಳು ಉತ್ತಮವಾಗಿ ಕಾರ್ಯರೂಪಕ್ಕೆ ತರಲಾಗಿದೆ ಎಂದರು. ಸದಸ್ಯರೆಲ್ಲರೂ ಒಗ್ಗಟಾಗಿ ನಿಸ್ವಾರ್ಥವಾಗಿ ಕೆಲಸ ಮಾಡಿದಾಗ ಮಾತ್ರ ಸಮಾಜದಲ್ಲಿ ಒಳ್ಳೆಯ ಕೆಲಸ ಮಾಡಲು ಸಾಧ್ಯವಾಯಿತು ಎಂದು ಶ್ಲಾಘಿಸಿದರು. ಕೊಡಗಿನ ಪಂಚಾಯಿತಿಗಳಲ್ಲಿ ಇದೇ



ಪಂಚಾಯ್ತಿಯ ವಿಶೇಷ ಸಾಧನೆ, ಕೆಲಸ ಕಾರ್ಯಗಳ ಮುನ್ನೋಟ ಪುಸ್ತಕ ಬಿಡುಗಡೆ.

ಮೊದಲ ಬಾರಿಗೆ ಗ್ರಾಪಂನ ಐದು ವರ್ಷಗಳ ಸಾಧನೆ ಕಾರ್ಯವನ್ನು ಎಲ್ಲಾ ಸಮುದಾಯದ ಜನರಿಗೆ ಅನುಕೂಲವಾಗುವಂತೆ ಪುಸ್ತಕವನ್ನು ಮುಂದಿನ ಗ್ರಾಮಸಭೆಯಲ್ಲಿ ವಿತರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಗ್ರಾಪಂ ಉಪಾಧ್ಯಕ್ಷೆರೇಖಾ ಬಾಲು ಬಿ.ಎಸ್, ಸದಸ್ಯ ಮುಂಡಂಡ ವಿಜು ತಿಮ್ಮಯ್ಯ, ಅಪ್ಪಚಂಡ ಮೀನಾಕ್ಷಿ ದೇವಯ್ಯ, ಮುಡೇರ ಶರ್ಮಿಳಾ ಮನು, ಎಂ.ಎನ್.ಪುಷ್ಪ ಮುಂಡಂಡ ಪವಿ ಸೋಮಣ್ಣ, ನಿಂಗಪ್ಪ ಹೆಚ್.ಎನ್, ಬಿ.ಎಸ್ ಕೃಷ್ಣಪ್ಪ, ಯಶ್ವಿನ್ ಪೊನ್ನಪ್ಪ, ರಾಜೇಶ್ ಎಚ್.ಎಸ್.ಪಾರೆಮಜಲು ರೀತ ಸುದರ್ಶನ್, ಮುಕ್ಕಾಟಿರ ಸೌಮ್ಯ ಸತೀಶ್ ಮತ್ತುಲತಾ ಎಂವೈ ಹಾಗೂ ಸಿಬ್ಬಂದಿ ಇದ್ದರು.

ಅಪರಿಚಿತ ಶವ ಪತ್ತೆ

ಮಡಿಕೇರಿ: ಬೊಯಿಕೇರಿ ಸಮೀಪದ ಕಾಫಿ ತೋಟದ ಪಕ್ಕದ ಕಾಡಿನಲ್ಲಿ ಸೆ. 30ರಂದು ಅಪರಿಚಿತ ಮೃತದೇಹವೊಂದು ಸಂಪೂರ್ಣ ಕೊಳೆತು ಅಸ್ಥಿ ಪಂಜರ ರೀತಿಯಲ್ಲಿ ಪತ್ತೆಯಾಗಿದೆ. ಈ ಘಟನೆ ಕುರಿತು ಗ್ರಾಮಾಂತರ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ. ವೃತ್ತ ನಿರೀಕ್ಷಕ ಚಂದ್ರಶೇಖರ್, ಠಾಣಾಧಿಕಾರಿ ತಮ್ಮಯ್ಯ ಮತ್ತು ಕ್ರೈಂ ಸಿಬ್ಬಂದಿಗಳು ಎಲ್ಲೆಡೆ ಶೋಧ ನಡೆಸುವ ಮೂಲಕ ಮೃತ ವ್ಯಕ್ತಿಯ ಗುರುತು ಪತ್ತೆ, ಸಾವಿನ ಕಾರಣಗಳ ಸುಳಿವಿಗಾಗಿ ಹುಡುಕಾಟ ನಡೆಸಿದರು. ಈಗಾಗಲೇ ವಿವಿಧ ಪೊಲೀಸ್ ಠಾಣೆಗಳಲ್ಲಿ ಪುರುಷ ನಾಪತ್ತೆ ಪ್ರಕರಣ ದಾಖಲಾಗಿದ್ದರೆ ಅದರ ಮಾಹಿತಿ ನೀಡುವಂತೆ ಪೊಲೀಸ್ ಇಲಾಖೆ ಮನವಿ ಮಾಡಿದೆ. ಶೋಧ ಕಾರ್ಯಾಚರಣೆಯಲ್ಲಿ ಯಾವುದೇ ಸುಳಿವು ಲಭಿಸಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಲಗೈ ಸಮುದಾಯವನ್ನು ಎ1ಕಾಲಂಗೆ ಸೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ

ಚಾಮರಾಜನಗರ, ಅ.6–ಹೊಲಯ ಸಮುದಾಯವನ್ನು ಬಿ ಕಾಲಂ ನಿಂದ ಎ1 ಕಾಲಂಗೆ ಸೇರಿಸುವಂತೆ ಒತ್ತಾಯಿಸಿ ರಾಜ್ಯ ದಲಿತ ಸಂಘರ್ಷ ಸಮಿತಿ, ಬಲಗೈ ಸಮುದಾಯದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಿದವು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಕೆಳಗಡೆ ಕುಳಿತು ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಆಗಮಿಸಿದ ಉಪತಹಸೀಲ್ದಾರ್ ರಂಗರಾಜ್ ಮುಖಾಂತರ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ಮಾತನಾಡಿ, ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಗಳಿಗೆ ಜಾರಿ ಮಾಡಿರುವ ಒಳಮೀಸಲಾತಿಯಲ್ಲಿ ಬಲಗೈ ಸಮುದಾಯಕ್ಕೆ ತುಂಬಾ ಅನ್ಯಾಯವಾಗಿ



ಬಲಗೈ ಸಮುದಾಯವನ್ನು ಎ1 ಕಾಲಂಗೆ ಸೇರಿಸುವಂತೆ ಒತ್ತಾಯಿಸಿ ರಾಜ್ಯ ದಲಿತ ಸಂಘರ್ಷ ಸಮಿತಿ, ಬಲಗೈ ಸಮುದಾಯ ಪ್ರತಿಭಟನೆ ನಡೆಸಿತು.

ಸಮುದಾಯಕ್ಕೆ ಮರಣಶಾಸನವಾಗಿದೆ. ನಮ್ಮ ಸಮುದಾಯದ ಮಕ್ಕಳು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸರ್ಕಾರಿ ಉದ್ಯೋಗವನ್ನು ಪಡೆಯಲು ಅನುವು ಮಾಡಿಕೊಡಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟ ಮಾಡುವುದಲ್ಲದೆ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಡಿಎಸ್‌ಎಸ್ ಯರಿಯೂರು ರಾಜಣ್ಣ ಮಾತನಾಡಿ, ಒಳ ಮೀಸಲಾತಿ ವಿಚಾರದಲ್ಲಿ 3 ಭಾಗಗಳಾಗಿ ವರ್ಗೀಕರಿಸಿ ರಾಜ್ಯ ಸರ್ಕಾರ ಬಲಗೈ ಸಮುದಾಯಕ್ಕೆ ಅನ್ಯಾಯ ಮಾಡಲು ಹೊರಟಿದೆ. ಬಲಗೈ ಸಮುದಾಯವನ್ನು ಬಿ ಕಾಲಂನಿಂದ ಕೈ ಬಿಟ್ಟು ಯಥಾಸ್ಥಿತಿ ಕಾಪಾಡುವ ಮೂಲಕ ಎರಡು ಸಮುದಾಯಗಳಿಗೂ ಸಾಮಾಜಿಕ ನ್ಯಾಯ ಕೊಡಿಸಿಕೊಡಬೇಕು ಎಂದು ಆಗ್ರಹಿಸಿದರು.

ಬಲಗೈ ಸಮುದಾಯಕ್ಕೆ ಒಳಮೀಸಲಾತಿಯಲ್ಲಿ ನ್ಯಾಯಕೊಡಿಸಲು ವಿಫಲರಾಗಿರುವ ಸಮುದಾಯದ ಸಚಿವರು ತಮ್ಮ ಸ್ಥಾನಗಳಿಗೆ ಸಾಮೂಹಿಕ ರಾಜೀನಾಮೆ ನೀಡಬೇಕು ಎಂದು ರಾಮಸಮುದ್ರ ಸುರೇಶ್ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸೋಮುಸುಂದರ್, ಶಿವಶಂಕರ್, ಮಹದೇವಯ್ಯ, ರವಿಕುಮಾರ್, ಆಟೋ ಉಮೇಶ್ ಮಂಚೇಶ್, ಸಿದ್ದಪ್ಪ, ಮಹದೇವಸ್ವಾಮಿ, ಉಮೇಶ್ ಕುಮಾರ್, ಶಿವನಾಗಣ್ಣ, ರಂಗಸ್ವಾಮಿ, ರವಿಕುಮಾರ್, ಮಹದೇವಸ್ವಾಮಿ, ವೆಂಕಟರಮಣ, ಬಸವರಾಜು, ಶೇಖರ್ ಇತರರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತ ಸಂಘ ಪ್ರತಿಭಟನೆ

ಚಾಮರಾಜನಗರ ಅ.6–ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಪ್ರವಾಸಿ ಮಂದಿರದ ಬಳಿ ಸೇರಿದ ಪ್ರತಿಭಟನಾಕಾರರು ಅಲ್ಲಿಂದ ಬೈಕ್ ರ್‍ಯಾಲಿಯಲ್ಲಿ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು. ಹನೂರು ತಾಲೂಕು ಅಜ್ಜಿಪುರದ ಹತ್ತಿರ ಇರುವ ಉಡುತೊರೆಹಳ್ಳ ಜಲಾಶಯ ಹಾಗೂ ಕೀರೆಪಾತಿ ಕೆರೆಗೆ ಏತ ನೀರಾವರಿ ಮೂಲಕ ನೀರು ತುಂಬಿಸಬೇಕು. ಹೂಗ್ಯಂ ಗ್ರಾಮದಲ್ಲಿ ಪವರ್ ಸ್ಟೇಷನ್ ನಿರ್ಮಿಸಬೇಕು. ಗೋಪಿನಾಥಂ ಗ್ರಾಪಂ ಸೇರಿದ ಗ್ರಾಮಗಳಿಗೆ ಮೂಲ ಸೌಕರ್ಯ ಹಾಗೂ ಸಾಗುವಳಿ ಚೀಟಿ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಮಲೆಮಹದೇಶ್ವರ ಅರಣ್ಯ ವಿಭಾಗವನ್ನು ಹುಲಿ ಸಂರಕ್ಷಣ ಯೋಜನೆಗೆ ಸೇರಿಸಲು ಕೆಲಸಗಳು ನಡೆಯುತ್ತಿದ್ದು ಹುಲಿ ಯೋಜನೆ ರದ್ದು ಮಾಡಬೇಕು. ಬದನಗುಪ್ಪೆ ಹಾಗೂ



ರಾಜ್ಯ ರೈತ ಸಂಘದ ಜಿಲ್ಲಾ ಸಮಿತಿ ಜಿಲ್ಲಾಡಳಿತ ಭವನದ ಬಳಿ ಪ್ರತಿಭಟನೆ ನಡೆಸಿದರು

ಕೆಲ್ಲಂಬಳ್ಳಿಯಲ್ಲಿ ಕೈಗಾರಿಕಾ ಉದ್ದೇಶಕ್ಕೋಸ್ಕರ ರೈತರ ಭೂಮಿಗಳನ್ನು ಸ್ವಾಧೀನ ಪಡಿಸಿಕೊಂಡಿದ್ದು ಭೂಮಿ ನೀಡಿರುವ ಪ್ರತಿಂರೊಬ್ಬ ರೈತ ಕುಟುಂಬಗಳ ಸದಸ್ಯರೋರ್ವರಿಗೆ ಖಾಯಂ ಉದ್ಯೋಗ ನೀಡಬೇಕು. ಜಿಲ್ಲೆಯಲ್ಲಿ ಕಬಿನಿ 2ನೇ ಹಂತದ ಕೆಲಸಕ್ಕೆ ಸರ್ಕಾರವು ಮಂಜೂರು ಮಾಡಬೇಕು. ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲೂಕಿನಾದ್ಯಂತ ಏತ ನೀರಾವರಿ ಯಿಂದ ವಂಚಿತವಾಗಿರುವ ಉಳಿದ ಕೆರೆಗಳಿಗೆ ನೀರು ತುಂಬಿಸಬೇಕು. ಹಿಂದಿನ ಅಕ್ರಮ ಸಕ್ರಮ ಯೋಜನೆಯನ್ನು ಮುಂದುವರಿಸಿ ರೈತರ ಕೃಷಿ ಪಂಪ್ ಸೆಟ್‌ಗಳನ್ನು ಸಕ್ರಮಗೊಳಿಸಬೇಕು. ಈ ವೇಳೆ ರೈತ ಸಂಘದ ಮುಖಂಡರು, ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಚಾಮರಾಜನಗರ ನಗರಸಭೆ ವಿರುದ್ಧ ಎಸ್‌ಡಿಪಿಐ ಜಿಲ್ಲಾ ಘಟಕ ಪ್ರತಿಭಟನೆ



ಚಾಮರಾಜನಗರ ನಗರ ಸಭೆಯಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಆಗ್ರಹಿಸಿ ಎಸ್‌ಡಿಪಿಐ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಿದರು.

ಚಾಮರಾಜನಗರ ಅ.6– ನಗರ ಸಭೆಯಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಆಗ್ರಹಿಸಿ ಎಸ್‌ಡಿಪಿಐ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ನಗರಸಭಾ ಕಚೇರಿ ಮುಂಭಾಗ ಸೇರಿದ ಪ್ರತಿಭಟನಾಕಾರರು ಮೂರ್‍ನಾಲ್ಕು ತಿಂಗಳಿಂದ ನಗರಸಭೆ ಆಡಳಿತ ಸಂಪೂರ್ಣವಾಗಿ ಕುಸಿದು ಹೋಗಿದೆ. ಹಲವು ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಸಮರ್ಪಕ ಕಸ ವಿಲೇವಾರಿ ಆಗದೆ ಇರುವುದು, ವಾರ್ಡ್‌ಗಳ ಅಭಿವೃದ್ಧಿಗಾಗಿ ಇರುವ ವಿವಿಧ ಯೋಜನೆಗಳ ಅನುದಾನವನ್ನು ಸದ್ಬಳಕೆ ಮಾಡಿಲ್ಲ ಎಂದು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಉದ್ಯಮ ಪರವಾನಗಿ, ಜನನ, ಮರಣ ಪ್ರಮಾಣ ಪತ್ರ ನೀಡುವುದರಲ್ಲಿ ವಿಳಂಬ, ಗುತ್ತಿಗೆದಾರರಿಗೆ ನಿಗದಿತ ಸಮಯಕ್ಕೆ ಬಿಲ್ ಆಗದೆ ಇರುವುದು. ಅಮೃತ್–2 ಯೋಜನೆ ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿರುವುದು, ನಗರೋತ್ಥಾನ 4ನೇ ಹಂತದ ಕಾಮಗಾರಿಯು ಕೆಲವು ವಾರ್ಡ್‌ಗಳಲ್ಲಿ ಪ್ರಾರಂಭವಾಗಿರುವುದಿಲ್ಲ ಎಂದು ಆರೋಪಿಸಿದರು. ಪ್ರತಿದಿನ ಸಾರ್ವಜನಿಕರು ನಗರಸಭೆ ಕಚೇರಿಗೆ ಬಂದು ಹೋಗಿ ಕೆಲಸ ಆಗದೆ ಇರುವುದಕ್ಕೆ ಹಿಡಿಶಾಪ ಹಾಕುವುದು ಸರ್ವೇ ಸಾಮಾನ್ಯವಾಗಿದೆ. ಈ ಸಂಬಂಧ ಸಾರ್ವಜನಿಕರಿಂದ ಅನೇಕ ಬಾರಿ ದೂರುಗಳು ಬಂದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಕೂಡಲೇ ಅಧಿಕಾರಿಗಳು ನಗರಸಭೆಯಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಖಲೀಲ್ ಉಲ್ಲಾ, ಪ್ರಧಾನ ಕಾರ್ಯದರ್ಶಿ ಮಹೇಶ್, ಪದಾಧಿಕಾರಿಗಳಾದ ಅಬ್ರಾರ್ ಅಹಮ್ಮದ್, ನಯಾಜ್ ಉಲ್ಲಾ, ಜಬೀನೂರ್, ಇರ್ಫಾನ್, ನಸರುಲ್ಲಾ ಸೇರಿದಂತೆ ಇತರರು ಭಾಗವಹಿಸಿದ್ದರು.

ವಿಜ್ಞಾನ ಕ್ಷೇತ್ರದಲ್ಲಿ ಉಪಗ್ರಹಗಳ ಪಾತ್ರ ಪ್ರಮುಖ

ಚಾಮರಾಜನಗರ, ಅ.6–ಆಧುನಿಕ ವಿಜ್ಞಾನ ಕ್ಷೇತ್ರದಲ್ಲಿ ಉಪಗ್ರಹಗಳ ಪಾತ್ರ ಪ್ರಮುಖವಾಗಿದೆ ಎಂದು ಯು.ಆರ್. ರಾವ್ ಬಾಹ್ಯಾಕಾಶ ಕೇಂದ್ರದ ಸಹ ನಿರ್ದೇಶಕ ರಾಮನಗೌಡ ವಿ. ನಾಡಗೌಡ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ), ಯು.ಆರ್.ರಾವ್ ಉಪಗ್ರಹ ಕೇಂದ್ರ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಗ್ರಾವಿಟಿ ಸೈನ್ಸ್ ಫೌಂಡೇಶನ್(ರಿ), ಸಂಯುಕ್ತಾಶ್ರಯದಲ್ಲಿ ವಿಶ್ವ ಬಾಹ್ಯಾಕಾಶ ಸಪ್ತಾಹ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ವಿದ್ಯಾರ್ಥಿ ಕಾರ್ಯಾಗಾರ ಮತ್ತು ವಸ್ತುಪ್ರದರ್ಶನ ಉದ್ಘಾಟಿಸಿ, ಬೆಂಗಳೂರಿನ ಯು.ಆರ್. ಉಪಗ್ರಹ ಕೇಂದ್ರವು ಇಸ್ರೋದ ಪ್ರಮುಖ ಅಂಗ ಸಂಸ್ಥೆಗಳಲ್ಲಿ ಒಂದಾಗಿದ್ದು ಅತೀ ಹೆಚ್ಚಿನ ಉಪಗ್ರಹಗಳನ್ನು ಉತ್ಪಾದಿಸುತ್ತದೆ. ಭೂ ವೀಕ್ಷಣೆ, ಸಂಪರ್ಕ ಸೇವೆ, ಬೆಳೆ ಸಮೀಕ್ಷೆ, ಪ್ರಕೃತಿ ವಿಕೋಪಗಳು, ದೇಶದ ಗಡಿಯಲ್ಲಿ ನಡೆಯುವ ಗೂಢಾಚಾರ ಮಾಹಿತಿಗಳನ್ನು ಪಡೆಯಲು, ಪ್ರಕೃತಿ ವಿಕೋಪಗಳ ದುಷ್ಪರಿಣಾಮಗಳನ್ನು ಕಡಿಮೆ ಮಾಡಲು, ಭೂಮಿಯಲ್ಲಿ ನೀರು ಅರಣ್ಯ ಸಮೀಕ್ಷೆಗಳನ್ನು ಅಂದಾಜಿಸಲು ಉಪಗ್ರಹಗಳು ಪ್ರಮುಖವಾಗಿದೆ ಎಂದರು.

ಜಿಲ್ಲೆಯಲ್ಲಿ ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಕಡಿಮೆಯಾಗುತ್ತಿದೆ. ಯಾವುದೇ ಕ್ಷೇತ್ರವಿರಲಿ ಪುರುಷರಿಗೆ ಸರಿ ಸಮಾನವಾಗಿ ಸಾಧನೆ ಮಾಡುವ ಎಲ್ಲಾ ಅವಕಾಶಗಳು ಇರುತ್ತವೆ ಹೀಗಾಗಿ ಯಾವುದೇ ಹಿಂಜರಿಕೆ ಇಲ್ಲದೆ ಆಸಕ್ತ ಕ್ಷೇತ್ರಗಳಲ್ಲಿ ಬದ್ಧತೆಯಿಂದ ತೊಡಗಿಸಿಕೊಂಡು ಸಾಧನೆ ಮಾಡಬೇಕು ಎಂದು ಜಿಪಂ ಸಿಇಒ ಮೋನಾ ರೋತ್ ತಿಳಿಸಿದರು.



ಬಾಹ್ಯಾಕಾಶ ಕೇಂದ್ರದ ಸಹ ನಿರ್ದೇಶಕ ರಾಮನಗೌಡ ವಿ. ನಾಡಗೌಡ ಮಾತನಾಡಿದರು.

ಎಸ್‌ಪಿ ಡಾ.ಬಿ.ಟಿ.ಕವಿತಾ ಮಾತನಾಡಿ, ವಿಜ್ಞಾನ ಮತ್ತು ಜೀವನ ಎರಡು ಒಂದಕ್ಕೊಂದು ಹೊಂದಿಕೊಂಡಿದ್ದು ಹಾಸುಹೊಕ್ಕಾಗಿದೆ. ವಿಜ್ಞಾನವು ಬದುಕಿನ ಗುಣಮಟ್ಟವನ್ನು ನಿರ್ಧರಿಸುತ್ತದೆ. ಉತ್ತಮ ಪ್ರತಿಭೆಗಳು ಬರಬೇಕಾದರೆ ಶಾಲಾ ಹಂತಗಳಲ್ಲಿ ಸ್ಪರ್ಧೆಗಳಾಗಬೇಕು. ಪ್ರತಿಭಾವಂತರಿಗೆ ವೇದಿಕೆ ದೊರೆಯಲು ಅನುಕೂಲವಾಗುತ್ತದೆ ಎಂದರು.

ಜಿಪಂ ಮುಖ್ಯ ಯೋಜನಾಧಿಕಾರಿ ಹೊನ್ನರಾಜು, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಎನ್. ಪುಟ್ಟಗೌರಮ್ಮ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಚಂದ್ರಪಾಟೀಲ್, ಗ್ರಾವಿಟಿ ಸೈನ್ಸ್ ಫೌಂಡೇಷನ್‌ನ ಕಾರ್ಯದರ್ಶಿಗಳಾದ ಎ.ಎಸ್.ಅಭಿಷೇಕ್, ಹಿರಿಯ ವಿಜ್ಞಾನಿಗಳಾದ ಸಂಜೀವ್ ಕುಮಾರ್, ಇಸ್ರೋ ವಿಜ್ಞಾನಿಗಳಾದ ಪ್ರಿಯಾಂಕ, ರಾಜೇಶ್ವರಿ, ವಿಷ್ಣು ಕಿಶೋರ್ ಪೈ, ಪ್ರಸಾದ್ ಮಂಜುನಾಥ್, ವೈಜ್ಞಾನಿಕ ಅಧಿಕಾರಿ ರಚನಾ ಇತರರಿದ್ದರು.

ಅಪರಿಚಿತ ಪುರುಷನ ಶವ ಪತ್ತೆ

ಯಳಂದೂರು, ಅ.6– ಯಳಂದೂರು ಠಾಣಾ ವ್ಯಾಪ್ತಿಯ ಮಲಾರಪಾಳ್ಯ ಗ್ರಾಮದ ಕಬಿನಿ ಚಾನೆಲ್‌ನಲ್ಲಿ ಸುಮಾರು 30ರಿಂದ 35 ವರ್ಷದ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದೆ.

ಮೃತದೇಹವು ಕೊಳೆತಿದ್ದು, ಈತ 3–4 ದಿನಗಳ ಹಿಂದೆ ಚಾನೆಲ್‌ಗೆ ಬಿದ್ದು ಮೃತಪಟ್ಟಿರಬಹುದು ಎಂದು ಅಂದಾಜಿಸಲಾಗಿದೆ. ಎಡಗೈಯಲ್ಲಿ R V ರವಿ ಮತ್ತು ಬಲ ಮುಂಗೈಯಲ್ಲಿ ಜೋಕರ್ ಟ್ಯಾಟೂ ಹಾಕಿರುತ್ತದೆ. ಈತನ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಯಳಂದೂರು ಪೊಲೀಸ್ ಠಾಣೆ 08226240028, 9480804649, ಅಥವಾ ಚಾಮರಾಜನಗರ ಪೊಲೀಸ್ ಕಂಟ್ರೋಲ್ ರೂಂ 08226222383, 9480804600ಗೆ ಮಾಹಿತಿ ತಿಳಿಸಲು ಕೋರಲಾಗಿದೆ

ನೂತನ ಡಿವೈಎಸ್ಪಿ ಸ್ನೇಹರಾಜ್‌ರಿಗೆ ಸನ್ಮಾನ

ಚಾಮರಾಜನಗರ ಅ.6–ಚಾಮರಾಜನಗರದ ಉಪವಿಭಾಗದ ನೂತನ ಡಿವೈಎಸ್ಪಿ ಸ್ನೇಹರಾಜ್ ಅವರಿಗೆ ಒಲುಮೆಯ ಗೂಡು ಸದಸ್ಯರು ನಗರದ ಡಿವೈಎಸ್ಪಿ ಕಚೇರಿಯಲ್ಲಿ ಸನ್ಮಾನಿಸಿದರು. ಕವಿ.ಸಿ.ಶಂಕರ ಅಂಕನಶೆಟ್ಟಿಪುರ, ಹಿರಿಯ ಹೋರಾಟಗಾರ ಪಿ.ಸಂಘಸೇನಾ, ನಮ್ಮನೆ ಪ್ರಶಾಂತ್, ಕವಯತ್ರಿ ಪದ್ಮಮ್ಮ, ಮಹಿಳಾ ಹೋರಾಟಗಾರ ಡಿ.ಎನ್.ಉಷಾ, ರಂಗಭೂಮಿ ಕಲಾವಿದ ಶಿವಶಂಕರ ಚಟ್ಟು, ಎಂ.ರಾಜೇಂದ್ರ, ಮನೋಹರ, ಮಲ್ಲೇಶ, ವಿಜಯ್.ಎಸ್, ರೇಷ್ಮಾ ರಾಧ, ಇತರರು ಹಾಜರಿದ್ದರು.

ಶಾಸಕರಿಂದ ದೊಡ್ಡಕತ್ತಿ ಹಬ್ಬದ ಲಾಂಛನ ಬಿಡುಗಡೆ



ದೊಡ್ಡ ಕತ್ತಿಹಬ್ಬದ ಲಾಂಛನ ಸಮಾರಂಭಕ್ಕೆ ಶಾಸಕ ಕೃಷ್ಣಮೂರ್ತಿ ಚಾಲನೆ ನೀಡಿದರು

ಕೊಳ್ಳೇಗಾಲ: ಶ್ರೀ ರಾಮಲಿಂಗ ಪಟ್ಟಣದ ದೊಡ್ಡ ಕತ್ತಿಹಬ್ಬದ ಲಾಂಛನ ಉದ್ಘಾಟನೆ ಹಾಗೂ ಕಾರ್ಯಕ್ರಮಗಳ ಚಾಲನಾ ಮಹೋತ್ಸವಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ವಿದ್ಯುಕ್ತವಾಗಿ ಚಾಲನೆ ನೀಡಿದರು

ಪಟ್ಟಣದ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕತ್ತಿಹಬ್ಬ ಕಾರ್ಯಕ್ರಮದ ಯಜಮಾನರನ್ನಾಗಿ ಅಣಾದ್ರಯ್ಯರವರನ್ನು ನೇಮಕಗೊಳಿಸಲಾಯಿತು. ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ದೇವಾಂಗ ಸಮಾಜ ಪಟ್ಟಣದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದೆ, ಪ್ರತಿಂರೊಬ್ಬರಿಗೂ ಗೌರವ ತರುವ ನಿಟ್ಟಿನಲ್ಲಿ ಸ್ಪಂದಿಸಿದೆ. ಈ ಸಮಾಜ ಇಂದು ದೊಡ್ಡ ಕತ್ತಿ ಹಬ್ಬ ಆಚರಣೆಗೆ ಮುಂದಾಗಿರುವುದು ಹೆಮ್ಮೆಯ ವಿಚಾರ ಎಂದರು.

ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ದೊಡ್ಡ ಕತ್ತಿಹಬ್ಬ ಸೇವಾ ಟ್ರಸ್ಟ್ ಅಧ್ಯಕ್ಷ ಸಿ.ಎಂ.ಪರಮೇಶ್ವರಯ್ಯ, ಶೆಟ್ಟಿಗಾರ ಲಕ್ಷ್ಮಣ್, ಗುರುಗಳಾದ ಪೂಲಾ ಕುಮಾರಸ್ವಾಮಿ, ಗ್ಯಾರಂಟಿ ಯೋಜನೆಗಳ ಸಮಿತಿ ಜಿಲ್ಲಾ ಅಧ್ಯಕ್ಷ ಹೊಂಗನೂರು ಚಂದ್ರು, ನಗರಸಭೆ ಅಧ್ಯಕ್ಷೆ ರೇಖಾ ರಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್ ಇನ್ನಿತರಿದ್ದರು

ಮೈಸೂರು ಮಿತ್ರ ಮಂಗಳವಾರ 7 ಅಕ್ಟೋಬರ್ 2025

ದೀಪಾಲಂಕಾರ ಆಕರ್ಷಣೆ; ಮೈಸೂರಲ್ಲಿ ಮುಂದುವರೆದ ಜನ, ವಾಹನ ದಟ್ಟಣೆ

ಮೈಸೂರು,ಅ.6(ಪಿಎಂ)– ದಸರಾ ವಿದ್ಯುತ್ ದೀಪಾಲಂಕಾರದ ಕ್ರೇಜ್ ಪರಿಣಾಮ ಮೈಸೂರಿನಲ್ಲಿ ಜನ ಹಾಗೂ ವಾಹನ ದಟ್ಟಣೆ ಮುಂದುವರೆದಿದ್ದು, ಸಂಜೆ 7ರಿಂದ ರಾತ್ರಿ 9ರವರೆಗೂ ಅರಮನೆ ಮತ್ತು ವಸ್ತು ಪ್ರದರ್ಶನ ಸೇರಿದಂತೆ ನಗರದ ಹೃದಯಭಾಗದ ರಸ್ತೆ ಹಾಗೂ ವೃತ್ತಗಳಲ್ಲಿ ಸುಗಮ ಸಂಚಾರ ಅಸಾಧ್ಯವಾಗಿ ಪರಿಣಮಿಸಿರುವುದು ಸೋಮವಾರವೂ ಕಂಡು ಬಂದಿತು.

ಈ ನಡುವೆ ಸಂಚಾರ ಸುಗಮಗೊಳಿಸುವುದು ಸಂಚಾರ ಪೊಲೀಸರಿಗೆ ಸವಾಲಾಗಿದ್ದು, ಸಿಗ್ನಲ್‌ಗಳಲ್ಲಿ ವಾಹನ ಸವಾರರು ಕಾದು ಕಾದು ಬೇಸರ ವ್ಯಕ್ತಪಡಿಸುವುದು ಸಾಮಾನ್ಯವಾಗಿದೆ. ಜಂಬೂ ಸವಾರಿ ಮೆರವಣಿಗೆ ಸಂಪನ್ನಗೊಂಡರೂ ಪ್ರವಾಸಿಗರ ಸಂಖ್ಯೆ ಮೈಸೂರಿಲ್ಲಿ ಕಡಿಮೆಯಾಗಿಲ್ಲ. ಸಂಜೆಯಾಗುತ್ತಿದ್ದಂತೆ ಮೈಸೂರಿಗರು ಮಾತ್ರವಲ್ಲದೆ, ಅವರ ನೆಂಟರಿಷ್ಟರು, ಪ್ರವಾಸಿಗರು ದೀಪಾಲಂಕಾರ ಕಣ್ತುಂಬಿಕೊಳ್ಳಲು ರಸ್ತೆಗಿಳಿಯುತ್ತಿದ್ದಾರೆ.

ಇದರ ಪರಿಣಾಮ ವಾಹನ ಹಾಗೂ ಜನದಟ್ಟಣೆ ಸಂಜೆ ವೇಳೆ ಸಾಮಾನ್ಯ ಆಗಿಬಿಟ್ಟಿದ್ದು, ನಗರದ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಬೈಕ್, ಕಾರು, ಓಪನ್ ಜೀಪ್, ಸನ್‌ರೂಫ್ ಕಾರುಗಳಲ್ಲಿ ಸಂಚರಿಸಿ ದೀಪಾಲಂಕಾರ ಕಣ್ತುಂಬಿಕೊಳ್ಳುವ ಸೆಳೆತ ಮುಂದುವರೆದಿದೆ. ದೀಪಾಲಂಕಾರದ ಬೆಳಕಿನಲ್ಲಿ ಸೆಲ್ಫಿ ಹಾಗೂ ಫೋಟೋ ಶೂಟ್‌ಗೆ ಜನ ಮುಗಿಬೀಳುತ್ತಿದ್ದು, ಈ ಹಿನ್ನೆಲೆಯಲ್ಲಿ ನಗರದ ಹೃದಯಭಾಗದ ಫುಟ್‌ಪಾತ್‌ಗಳಲ್ಲಿ ಸಹ ಓಡಾಡುವುದೂ ಕಷ್ಟಕರ ಎನ್ನುವಂತಾಗಿದೆ.

ಪ್ರತಿ ಸಿಗ್ನಲ್‌ನಲ್ಲಿಯೂ ತಮ್ಮನ್ನು ಮುಂದೆ ಸಾಗಲು ಬಿಟ್ಟರೆ ಸಾಕಪ್ಪಾ ಎನ್ನುವಷ್ಟರ ಮಟ್ಟಿಗೆ ವಾಹನ ಸವಾರರು ಹೈರಣಾಗುತ್ತಿದ್ದರೆ, ಸಂಚಾರ ಸುಗಮಗೊಳಿಸಲು ಪೊಲೀಸರು ಹರಸಾಹಸ ಪಡುವಂತಾಗಿದೆ. ದೀಪಾಲಂಕಾರದ ಪರಿಣಾಮ ಸಿಗ್ನಲ್‌ಗಳಲ್ಲಿ ಸಾಕಷ್ಟು ದೂರದವರೆಗೆ ವಾಹನಗಳು ಸಾಲು ಸಾಲಾಗಿ ನಿಲ್ಲುವ ಸನ್ನಿವೇಶ ಸೃಷ್ಟಿಯಾಗಿದೆ. ಇಂತಹ ತ್ರಾಸದಾಯಕ ಪರಿಸ್ಥಿತಿಯಲ್ಲಿಯೂ ಜನ ನಗರದಲ್ಲಿ ಸಂಚರಿಸಿ ದೀಪಾಲಂಕಾರಕ್ಕೆ ಮನಸೋಲುತ್ತಿದ್ದಾರೆ.

ಅರಮನೆ ಸುತ್ತಲಿನ ರಸ್ತೆಗಳಲ್ಲಿ ದೀಪಾಲಂಕಾರ ನೋಡಲು ಇಂದೂ ಸಹ ಭಾರೀ ಜನಸ್ತೋಮ ಕಂಡು ಬಂದಿತು. ಈ ಹಿನ್ನೆಲೆಯಲ್ಲಿ ವಾಹನ ಸವಾರರನ್ನು ನಿಯಂತ್ರಿಸಲು ಸಂಚಾರ ಪೊಲೀಸರು ಹೆಣಗಾಡುತ್ತಿದ್ದ ದೃಶ್ಯ ಸಾಮಾನ್ಯ ವಾಗಿತ್ತು ಕೆಆರ್ ವೃತ್ತ ಚಾಮರಾಜ ಒಡೆಯರ್ ವೃತ್ತ ಜಯಚಾಮರಾಜ ಒಡೆಯರ್ ವೃತ್ತ, ಡಿ.ದೇವರಾಜ ಅರಸು ರಸ್ತೆ ಜೆಎಲ್‌ಬಿ ರಸ್ತೆ ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಸಯ್ಯಾಜಿರಾವ್ ರಸ್ತೆಗಳಲ್ಲಿ ಸುಗಮ ಸಂಚಾರ ಇಂದೂ ಕಷ್ಟಕರವಾಗಿತ್ತು ಜೊತೆಗೆ ಆಂಬುಲೆನ್ಸ್‌ಗಳಿಗೆ ದಾರಿ ಮಾಡಿಕೊಡುವಲ್ಲಿ ಸಂಚಾರ ಪೊಲೀಸರು ಹೈರಾಣಾಗುತ್ತಿದ್ದರು.




ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿನ ವ್ಯಾಪಕ ವಾಹನ ದಟ್ಟಣೆ

ಅ.19ಕ್ಕೆ ವಿದ್ಯಾರ್ಥಿಗಳಿಗೆ ಡಾ.ಕೆ.ಬಿ.ಗಣಪತಿ ಸ್ಮಾರಕ ರಸ್ತೆ ಓಟದ ಸ್ಪರ್ಧೆ



ಡಾ.ಕೆ.ಬಿ.ಜಿ



ಮೈಸೂರು, ಅ.6– ಮೈಸೂರು ಅಥ್ಲೆಟಿಕ್ಸ್ ಕ್ಲಬ್ ವತಿಯಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾಗಿದ್ದ ದಿವಂಗತ ಡಾ.ಕೆ.ಬಿ.ಗಣಪತಿ ಸ್ಮಾರಕ ರಸ್ತೆ ಓಟದ ಸ್ಪರ್ಧೆಯನ್ನು ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದೆ.

ಐದು ವರ್ಷದೊಳಗಿನ ಮಕ್ಕಳಿಗೆ 100 ಮೀಟರ್ ಟ್ರಾಕ್ ಓಟ ನಡೆಯಲಿದ್ದು, ಗುರಿ ಪೂರ್ಣಗೊಳಿಸಿದ ಎಲ್ಲಾ ಮಕ್ಕಳಿಗೂ ಬಹುಮಾನ, ಪದಕ ಹಾಗೂ ಪ್ರಮಾಣ ಪತ್ರ ನೀಡಲಾಗುತ್ತದೆ. ಪ್ರಾಥಮಿಕ ಶಾಲೆ(400 ಮೀ.), ಮಾಧ್ಯಮಿಕ ಶಾಲೆ(800 ಮೀ.), ಪ್ರೌಢಶಾಲೆ(1.5 ಕಿ.ಮೀ.) ಹಾಗೂ ಪಿಯುಸಿ(2 ಕಿ.ಮೀ.) ಹಂತದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸ್ಪರ್ಧೆ ನಡೆಯಲಿದ್ದು, ಪ್ರತಿ ವಿಭಾಗದಲ್ಲೂ ಮೊದಲ ಆರು ಜನರಿಗೆ ನಗದು ಬಹುಮಾನ ನೀಡಲಾಗುತ್ತದೆ. ಮೊದಲ ಬಹುಮಾನ 1,500, 2ನೇ ಬಹುಮಾನ 1,250, 3ನೇ ಬಹುಮಾನ 1,000, 4ನೇ ಬಹುಮಾನ 750, 5ನೇ ಬಹುಮಾನ 500 ಹಾಗೂ 6ನೇ ಬಹುಮಾನ 250 ರೂ. ನಿಗದಿಪಡಿಸಲಾಗಿದೆ.

ಭಾಗವಹಿಸುವ ವಿದ್ಯಾರ್ಥಿಗಳು (ಬಾಲಕರು / ಬಾಲಕಿಯರು) ಕ್ಲಬ್‌ನ ಸಂಘಟನಾ ಕಾರ್ಯದರ್ಶಿಯೂ ಆಗಿರುವ ತರಬೇತುದಾರ ಜಿ.ಆರ್. ಪ್ರಭಾಕರ್(9751971978) ಹಾಗೂ ಉಪಾಧ್ಯಕ್ಷ ಸಿ.ಕೆ.ಮುರುಳೀಧರನ್ (9845231243) ಅವರನ್ನು ಸಂಪರ್ಕಿಸಿ, ಅ.15ರೊಳಗೆ ಶಾಲೆಯ ಗುರುತಿನ ಚೀಟಿ ಹಾಗೂ ಆಧಾರ್ ಕಾರ್ಡ್‌ನೊಂದಿಗೆ ಹೆಸರು ನೋಂದಾಯಿಸಿ ಕೊಳ್ಳಬೇಕು. ಅ.18ರ ಸಂಜೆ 4ಕ್ಕೆ ಓವಲ್ ಮೈದಾನದ ಬಳಿಯ ಲಯನ್ಸ್ ಹಾಲ್‌ನಲ್ಲಿ ಚೆಸ್ಟ್ ನಂಬರ್ ಪಡೆದುಕೊಳ್ಳಬೇಕು. ಮೈಸೂರು ವಿಶ್ವವಿದ್ಯಾನಿಲಯದ ಮೈದಾನ(ಹಳೇ ಡಿಸಿ ಆಫೀಸ್ ಬಳಿ)ದಲ್ಲಿ ಅ.19ರಂದು ಬೆಳಗ್ಗೆ 6ಕ್ಕೆ ಸ್ಪರ್ಧೆ ನಡೆಯಲಿದೆ ಎಂದು ಕ್ಲಬ್‌ನ ಕಾರ್ಯದರ್ಶಿ ಎಂ.ಯೋಗೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನ ಡಾ.ನಿತ್ಯಾನಂದರಾವ್ ಬೆಂಗಳೂರು ಟರ್ಫ್ ಕ್ಲಬ್ ಸ್ಟೀವರ್ಡ್; ಸರ್ಕಾರದಿಂದ ನಾಮನಿರ್ದೇಶನ



ಡಾ.ನಿತ್ಯಾನಂದರಾವ್

ಮೈಸೂರು,ಅ.6(ಪಿಎಂ)– ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್‌ನ ಸ್ಟೀವರ್ಡ್ ಆಗಿ ಮೈಸೂರಿನ ಡಾ.ನಿತ್ಯಾನಂದರಾವ್ ಅವರನ್ನು ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡಿದೆ. ಇದೇ ಸೆ.29ರಿಂದ ಜಾರಿಗೆ ಬರುವಂತೆ ಅವರನ್ನು ಬೆಂಗಳೂರಿನ ಟರ್ಫ್ ಕ್ಲಬ್‌ಗೆ ಸ್ಟೀವರ್ಡ್ ಆಗಿ ನೇಮಕ ಮಾಡಲಾಗಿದೆ. ಮೈಸೂರಿನ ಯಾದವಗಿರಿ ನಿವಾಸಿಯಾದ ಇವರು, ಮೈಸೂರು ರೇಸ್ ಕ್ಲಬ್ ಅಧ್ಯಕ್ಷರಾಗಿಯೂ ಸಹ ಸೇವೆ ಸಲ್ಲಿಸಿದ್ದರು.

ಇವರೊಂದಿಗೆ ರಾಜ್ಯ ಸರ್ಕಾರದ ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿ, ಬೆಂಗಳೂರು ಪೊಲೀಸ್ ಆಯುಕ್ತರನ್ನು ಸಹ ಸ್ಟೀವರ್ಡ್ ಆಗಿ ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್‌ಗೆ ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡಿದೆ. ಜೊತೆಗೆ ಹರಿಯಾಣದ ವಿಕ್ರಮ್ ಸಿಂಗ್ ಅವರನ್ನು ಬೆಂಗಳೂರು ಟರ್ಫ್ ಕ್ಲಬ್‌ನ ಸಮಿತಿ ಸದಸ್ಯರನ್ನಾಗಿಯೂ ನೇಮಿಸಲಾಗಿದೆ.

ಕೆಎಸ್‌ಟಿಎ ಫೆಲೋಗೆ ಆಯ್ಕೆ



ಮೈಸೂರು, ಅ.6– ಕರ್ನಾಟಕ ಸೈನ್ಸ್ ಅಂಡ್ ಟೆಕ್ನಾಲಜಿ ಅಕಾಡೆಮಿ(ಕೆಎಸ್‌ಟಿಎ) ಫೆಲೋಶಿಪ್‌ಗೆ ಮೈಸೂರು ವಿಶ್ವವಿದ್ಯಾನಿಲಯ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ಆಯ್ಕೆಯಾಗಿದ್ದಾರೆ.

ದೇವನೂರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಆರಂಭಿಸಿ ಮೈಸೂರು ವಿವಿಯಲ್ಲಿ ಪಿಹೆಚ್.ಡಿ ಪಡೆದ ನಂತರ ಇವರು, ಅಮೆರಿಕಾದ ಮಿಚಿಗನ್ ಸ್ಟೇಟ್ ಯೂನಿವರ್ಸಿಟಿ ಪೋಸ್ಟ್ ಡಾಕ್ಟರೇಟ್ ಆಗಿ, ರಾಷ್ಟ್ರ ಮಟ್ಟದ ಯುಜಿಸಿ ಸಮಿತಿಗಳ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಈವರೆಗೆ 22 ವಿದ್ಯಾರ್ಥಿಗಳ ಪಿಹೆಚ್.ಡಿ ಸಂಶೋಧನೆಗೆ ಮಾರ್ಗದರ್ಶನ ನೀಡಿದ್ದಾರೆ. ಸುಮಾರು 480 ಸಂಶೋಧನಾ ಲೇಖನಗಳು, 4300 ಉಲ್ಲೇಖಗಳನ್ನು ಪ್ರಕಟಿಸಿದ್ದಾರೆ. 10ಕ್ಕೂ ಹೆಚ್ಚು ಪುಸ್ತಕಗಳನ್ನೂ ರಚಿಸಿದ್ದಾರೆ. ಈ ಫೆಲೋಶಿಪ್‌ಗೆ ನಾಮನಿರ್ದೇಶನ ಮಾಡಿದ ತಮ್ಮ ಗುರು ಪ್ರೊ.ಚಿದಾನಂದಗೌಡರಿಗೆ ಧನ್ಯವಾದ ತಿಳಿಸಿದ್ದಾರೆ.

ಪರಿಶಿಷ್ಟ 101 ಜಾತಿಯವರು ಬೌದ್ಧ ಧರ್ಮಕ್ಕೆ ಮತಾಂತರವಾದರೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ: ಸರ್ಕಾರದ ಆದೇಶ

ಮೈಸೂರು, ಅ.6(ಎಸ್‌ಪಿಎನ್)– ಕರ್ನಾಟಕ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಪರಿಶಿಷ್ಟ ಜಾತಿಯವರು ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದಲ್ಲಿ ಅಂತಹವರಿಗೆ ಕರ್ನಾಟಕ ಎಸ್ಸಿ, ಎಸ್ಟಿ ಮತ್ತು ಇತರೆ ಒಬಿಸಿ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ 1990(ತಿದ್ದುಪಡಿ), ಅಧಿನಿಯಮ 2024 ಮತ್ತು 1992ರ ನಿಯಮಗಳಂತೆ 'ಪರಿಶಿಷ್ಟ ಜಾತಿ' ಪ್ರಮಾಣ ಪತ್ರ ನೀಡಲು ರಾಜ್ಯ ಸರ್ಕಾರ ಸೋಮವಾರ ಆದೇಶಿಸಿದೆ.

ಎಸ್ಸಿ ಜಾತಿ ಪ್ರಮಾಣ ಪತ್ರ ಪಡೆಯುವ ಅರ್ಜಿಗಳಲ್ಲಿ ಧರ್ಮದ ಕಾಲಂನಲ್ಲಿ 'ಬೌದ್ಧ' ಎಂದು ನಮೂದಿಸಲು ಅವಕಾಶ ನೀಡುವುದು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ, ಖಾಸಗಿ ಹಾಗೂ ಇತರೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿನ ದಾಖಲೆಗಳಲ್ಲಿ ಅರ್ಜಿದಾರರು, ಪೋಷಕರು ಇಚ್ಛಿಸಿದ್ದಲ್ಲಿ ಧರ್ಮದ ಕಾಲಂನಲ್ಲಿಯೂ 'ಬೌದ್ಧ' ಎಂದು ನಮೂದಿಸಲು ಅವಕಾಶ ನೀಡುವುದು.

ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಗಳ ನಿಗಮ ಮಂಡಳಿಗಳು/ ಇತರೆ ಸಂಸ್ಥೆಗಳು ಸದರಿ ಆದೇಶದಂತೆ ಕ್ರಮವಹಿಸುವುದು ಎಂದು ಸಮಾಜ ಕಲ್ಯಾಣ ಇಲಾಖೆ ಉಪ ಕಾರ್ಯದರ್ಶಿ ಎಂ.ಸುಮಿತ್ರ ಆದೇಶಿಸಿದ್ದಾರೆ.

ಹರ್ಷ ಕೊಲೆ ಕೇಸ್‌ನ ಸಾಕ್ಷಿ ಅಮ್ಜದ್ ಹತ್ಯೆ: ಶಿವಮೊಗ್ಗಕ್ಕೆ ಮತ್ತೆ ಎಂಟ್ರಿ ಕೊಟ್ಟ ಎನ್‌ಐಎ

ಶಿವಮೊಗ್ಗ: ರಾಜ್ಯದಲ್ಲಿ ಸಂಚಲನ ಸೃಷ್ಟಿಸಿದ್ದ ಹರ್ಷ ಕೊಲೆ ಪ್ರಕರಣದಲ್ಲಿ ಸಾಕ್ಷಿಯಾಗಿದ್ದ ಅಮ್ಜದ್ ಹತ್ಯೆ ಕೇಸ್‌ಗೆ ಸಂಬಂಧಿಸಿದಂತೆ ಎನ್‌ಐಎ ಅಧಿಕಾರಿಗಳು ನಗರಕ್ಕೆ ಭೇಟಿ ನೀಡಿದ್ದಾರೆ. ಎನ್‌ಐಎ ಎಸ್ಪಿ ನೇತೃತ್ವದ ಮೂರು ಅಧಿಕಾರಿಗಳ ತಂಡ ಶಿವಮೊಗ್ಗದಲ್ಲಿ ತನಿಖೆ ಆರಂಭಿಸಿದೆ. ಅಮ್ಜದ್ ಕೊಲೆಯಲ್ಲಿ ಹರ್ಷ ಕೊಲೆಯ ನಂಟಿನ ಸಾಧ್ಯತೆ ಹಿನ್ನೆಲೆ ತನಿಖೆ ನಡೆಯುತ್ತಿದೆ. ನಗರದ ಪೊಲೀಸರ ಸಹಾಯದೊಂದಿಗೆ ಎನ್‌ಐಎ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಅಮ್ಜದ್ ಕೊಲೆಯಲ್ಲಿ ಭಾಗಿಯಾದವರ ವಿಚಾರಣೆಗೂ ತಯಾರಿ ನಡೆಯುತ್ತಿದೆ.

ಲೋಕಾಯುಕ್ತ ಡಿವೈಎಸ್ಪಿಯಂತೆ ನಟಿಸಿ ಸುಲಿಗೆ: ವಜಾಗೊಂಡಿದ್ದ ಪೊಲೀಸ್ ಪೇದೆ ಬಂಧನ

ಬೆಂಗಳೂರು: ಲೋಕಾಯುಕ್ತ ಉಪ ಪೊಲೀಸ್ ವರಿಷ್ಠಾಧಿಕಾರಿ (ಡಿವೈಎಸ್ಪಿ) ಯಂತೆ ನಟಿಸಿ ಸರ್ಕಾರಿ ಅಧಿಕಾರಿಗಳಿಗೆ ಬೆದರಿಕೆ ಹಾಕಿ ಹಣ ವಸೂಲಿ ಮಾಡುತ್ತಿದ್ದ ಪ್ರಕರಣದಲ್ಲಿ ವಜಾಗೊಂಡಿದ್ದ ಕಾನ್‌ಸ್ಟೆಬಲ್‌ನನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ಐಜೂರ್ ಪೊಲೀಸರು ಬಂಧಿಸಿದ್ದಾರೆ.

ಬೆಳಗಾವಿ ಮೂಲದ ಆರೋಪಿ ಮುರ್ರೆಗಪ್ಪ ಬಂಧಿತ ಪೇದೆ. ಲೋಕಾಯುಕ್ತ ಅಧಿಕಾರಿ ಎಂದು ನಟಿಸಿ ಮಾಗಡಿ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ (ಸಿಡಿಪಿಒ) ಅವರಿಗೆ ಕರೆ ಮಾಡಿ ಹಣಕ್ಕಾಗಿ ಬೇಡಿಕೆ ಇಟ್ಟಿದ್ದಾನೆ.

ಇದಾದ ನಂತರ, ಸಿಡಿಪಿಒ ಅಧಿಕಾರಿ ಸುರೇಂದ್ರ ದೂರು ದಾಖಲಿಸಿದ್ದಾರೆ. ಕರೆ ವಿವರ ದಾಖಲೆಗಳು ಮತ್ತು ತಾಂತ್ರಿಕ ಪುರಾವೆಗಳ ಆಧಾರದ ಮೇಲೆ, ಪೊಲೀಸರು ಆತನನ್ನು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಬಂಧಿಸಿದ್ದಾರೆ. ಆತನಿಂದ ಒಂಬತ್ತು ಸಿಮ್ ಕಾರ್ಡ್‌ಗಳು ಮತ್ತು ಮೂರು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮುರ್ರೆಗಪ್ಪ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಲೋಕಾಯುಕ್ತ ಡಿವೈಎಸ್ಪಿ ಎಂದು ನಟಿಸಿ ಸರ್ಕಾರಿ ಅಧಿಕಾರಿಗಳಿಗೆ ಕರೆ ಮಾಡಲು ಪ್ರಾರಂಭಿಸಿದರು, ದಾಳಿ ನಡೆಸುವುದಾಗಿ ಬೆದರಿಕೆ ಹಾಕಿ, ವಿಷಯವನ್ನು ಇತ್ಯರ್ಥಗೊಳಿಸಲು 50,000 ರೂ.ಗಳಿಂದ 1 ಲಕ್ಷ ರೂ.ಗಳವರೆಗೆ ಹಣವನ್ನು ಬೇಡಿಕೆ ಇಟ್ಟಿದ್ದ ಎಂದು ಹೇಳಲಾಗಿದೆ.

ಆತ ಆನ್‌ಲೈನ್ ವಹಿವಾಟಿನ ಮೂಲಕ ಹಣ ಸ್ವೀಕರಿಸುತ್ತಿದ್ದ. ಮುರ್ರೆಗಪ್ಪ ಪತ್ರಿಕೆಗಳಲ್ಲಿ ಸರ್ಕಾರಿ ಟೆಂಡರ್‌ಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದ ಇಲಾಖಾ ಮುಖ್ಯಸ್ಥರನ್ನು ಸಂಪರ್ಕಿಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

17 ವರ್ಷಗಳ ಕಾಲ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದ ಮುರ್ರೆಗಪ್ಪ ಎರಡು ವರ್ಷಗಳು ಬೆಳಗಾವಿಯ ಲೋಕಾಯುಕ್ತದಲ್ಲಿ ಕರ್ತವ್ಯ ನಿರ್ವಹಿಸಿದ್ದ 2022 ರಲ್ಲಿ, ವಾರಂಟ್ ಪ್ರಕರಣದ ವಿಚಾರಣೆಯ ನಂತರ ಆತನನ್ನು ಸೇವೆಯಿಂದ ವಜಾಗೊಳಿಸಲಾಯಿತು. ಆತನಿಗೆ ಮೂವರು ಮಕ್ಕಳಿದ್ದಾರೆ, ಮುರ್ರೆಗಪ್ಪ ವಿರುದ್ಧ 58 ಪ್ರಕರಣಗಳು ದಾಖಲಾಗಿವೆ.

ಲಕ್ಷಾಂತರ ಜನರ ಕಣ್ಮನ ತಣಿಸಿದ್ದ ದಸರಾ ವಿದ್ಯುತ್ ದೀಪಾಲಂಕಾರ ಈಗ ಅರೆಬರೆ!

ಮೈಸೂರು,ಅ.6(ಪಿಎಂ)– ಲಕ್ಷಾಂತರ ಜನರ ಮನತಣಿಸಿದ ದಸರಾ ವಿದ್ಯುತ್ ದೀಪಾಲಂಕಾರ ಸೋಮವಾರದಿಂದ ಅರೆಬರೆಗೆ ಸೀಮಿತವಾಗುತ್ತಿದೆ! ನಗರದ ಹೊರವಲಯದ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ದೀಪಾಲಂಕಾರ ಅಂತ್ಯಗೊಂಡಿದೆ.

ಈ ಬಾರಿಯ ದಸರಾ ಮಹೋತ್ಸವದಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ಬೆಳಕಿನ ಚಿತ್ತಾರದಲ್ಲಿ ಝಗಮಗಿಸಲೆಂದು 136 ಕಿ.ಮೀ. ರಸ್ತೆ ಹಾಗೂ 118 ವೃತ್ತಗಳಲ್ಲಿ ದೀಪಾಲಂಕಾರ ಮಾಡಲಾಗಿದೆ. ಜೊತೆಗೆ ಅ.12ರವರೆಗೂ ದೀಪಾಲಂಕಾರ ಮುಂದುವರೆಯಲಿದೆ ಎಂದೂ ಸೆಸ್ಕ್ ತಿಳಿಸಿದೆ. ಆದರೆ ಈಗ ಇದನ್ನು ಸೀಮಿತಗೊಳಿಸಲು ಸೆಸ್ಕ್ ಮುಂದಾಗಿದೆಯೇ ಎನ್ನುವ ಪ್ರಶ್ನೆ ಉದ್ಭವಿಸಿದೆ. ಕಾರಣ ನಗರದ ಹೊರವಲಯದ ರಸ್ತೆ ಹಾಗೂ ವೃತ್ತಗಳಲ್ಲಿ ದೀಪಾಲಂಕಾರ ತೆರವು ಕಾರ್ಯಾಚರಣೆ ನಡೆದಿದೆ ಎಂದು ನಾಗರಿಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಸಿ.ನಾರಾಯಣಗೌಡ ಬೇಸರ: ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ದಸರಾ ವಿದ್ಯುತ್ ದೀಪಾಲಂಕಾರ ನಿನ್ನೆವರೆಗೆ ತುಂಬಾ ಚೆನ್ನಾಗಿತ್ತು ಆದರೆ ಇಂದು ಅರೆಬರೆ ಮಾಡಿದ್ದಾರೆ. ಶೇ.50ರಷ್ಟು ಕಡೆಗಳಲ್ಲಿ ಲೈಟ್ಸ್ ಆನ್ ಮಾಡಿಲ್ಲ. ಕೆಲವೆಡೆ 7.30, ಮತ್ತೆ ಹಲವೆಡೆ 7.45ಕ್ಕೆ ಲೈಟ್ಸ್ ಆನ್ ಮಾಡಿದ್ದಾರೆ. ಎಷ್ಟೋ ಕಡೆ ಲೈಟ್ ಹಾಕಿಲ್ಲ. ಅ.12ರವರೆಗೆ ದೀಪಾಲಂಕಾರ ಇರಲಿದೆ ಎಂದು ತಿಳಿಸಿ, ಹೀಗೆ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನಗರ ಹೃದಯಭಾಗದಲ್ಲಿ ದೀಪಾಲಂಕಾರ: ನಗರದ ತೀರಾ ಹೊರವಲಯ ಹೊರತಾಗಿ ಜಂಬೂ ಸವಾರಿ ಮಾರ್ಗ ಸೇರಿದಂತೆ ನಗರ ಕೇಂದ್ರಿತ ವೃತ್ತ ಹಾಗೂ ರಸ್ತೆಗಳಲ್ಲಿ ದೀಪಾಲಂಕಾರ ಅ.12ರವರೆಗೂ ಮುಂದುವರೆಯಲಿದೆ ಎಂದು ಸೆಸ್ಕ್ ಅಧೀಕ್ಷಕ ಇಂಜಿನಿಯರ್ ಸುನೀಲ್ ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ನಗರದ ಹೊರವಲಯ ಹೊರತಾಗಿ ನಗರದ ಹೃದಯಭಾಗದಲ್ಲಿ ಸರಿಯಾಗಿ ಸಂಜೆ 7ಕ್ಕೆ ದೀಪಾಲಂಕಾರ ಆನ್ ಮಾಡಲಾಗಿದೆ. ನಗರದ ಕೇಂದ್ರ ಭಾಗದಲ್ಲಿ ಪೂರ್ಣವಾಗಿ ಹಾಗೂ ಸಮರ್ಪಕವಾಗಿ ದೀಪಾಲಂಕಾರ ಮುಂದುವರೆಸಲಾಗಿದೆ. ಜಂಬೂ ಸವಾರಿ ಮಾರ್ಗ ಸೇರಿದಂತೆ ನಗರ ಕೇಂದ್ರಿತ ವೃತ್ತ ಹಾಗೂ ರಸ್ತೆಗಳಲ್ಲಿ ದೀಪಾಲಂಕಾರ ಅ.12ರವರೆಗೂ ಇರಲಿದೆ. ನಗರದ ತೀರಾ ಹೊರವಲಯದಲ್ಲಿ ಮಾತ್ರ ಹೆಚ್ಚು ಆದ್ಯತೆ ನೀಡುತ್ತಿಲ್ಲ ಎಂದು ಅವರು ತಿಳಿಸಿದರು.

ವಿಮೋಚನಾ ದಿನ ಆಚರಣೆ



ಮೈಸೂರಿನ ಶ್ರೀ ಛಾಯಾದೇವಿ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಕರ್ನಾಟಕ ವಿಮೋಚನಾ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಹೈದರಾಬಾದ್ ಕರ್ನಾಟಕದ ಕಾಲೇಜಿನ ಪ್ರಶಿಕ್ಷಣಾರ್ಥಿಗಳು, ಬೋಧಕ ವೃಂದದವರು ಹಾಗೂ ಪ್ರಥಮ ಮತ್ತು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು

68 ಪರಿಸರ ಸ್ನೇಹಿ ವಾಹನಗಳಿಗೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಬೆಂಗಳೂರು: 68 ಪರಿಸರ ಸ್ನೇಹಿ ವಾಹನಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು (ಸೋಮವಾರ) ವಿಧಾನಸೌಧದ ಮುಂಭಾಗದಲ್ಲಿ ಚಾಲನೆ ನೀಡಿದರು. ಪರಿಸರ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಲಾಂಛನ ಬಿಡುಗಡೆ ಮಾಡಿದರು.

ಸಿಎಂಗೆ ಇವಿ ಕಾರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಓಡಾಡಲು ಶೀಘ್ರದಲ್ಲಿಯೇ ಪರಿಸರ ಸ್ನೇಹಿ ವಿದ್ಯುತ್ ಚಾಲಿತ ಕಾರು ಒದಗಿಸಲಾಗುವುದು ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ತಿಳಿಸಿದರು.

ಮುಖ್ಯಮಂತ್ರಿಯವರಿಗೆ ಕಾರು ಒದಗಿಸಿದ ಬಳಿಕ ಅರಣ್ಯ ಸಚಿವ ಖಂಡ್ರೆಯವರಿಗೆ ಇವಿ ಕಾರು ನೀಡಲಾಗುವುದು. ಮುಂದೆ ಹಂತಹಂತವಾಗಿ ಎಲ್ಲ ಸಚಿವರು, ಅಧಿಕಾರಿಗಳೂ ಇವಿ ಕಾರುಗಳಲ್ಲಿಯೇ ಓಡಾಡುವಂತೆ ಮಾಡುವುದು ನಮ್ಮ ಉದ್ದೇಶ ಎಂದು ಹೇಳಿದರು.


ಕಾರ್ಯಕ್ರಮದಲ್ಲಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ, ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ, ವಸತಿ ಸಚಿವ ಜಮೀರ್ ಅಹಮದ್‌ಖಾನ್, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ರಾಜ್ಯ ಗ್ಯಾರಂಟಿ ಯೋಜನೆ ಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಉಪಸ್ಥಿತರಿದ್ದರು.

ಫಲಪುಷ್ಪ ಪ್ರದರ್ಶನದಲ್ಲಿ ಬಹುಮಾನ



ಮೈಸೂರು ದಸರಾ ಮಹೋತ್ಸವ–2025ರ ಫಲಪುಷ್ಪ ಪ್ರದರ್ಶನದ ಶೈಕ್ಷಣಿಕ ಸಂಸ್ಥೆಗಳ ವಿಭಾಗದಲ್ಲಿ(ಲಾನ್ಸ್ ನಿರ್ವಹಣೆ ಮತ್ತು ಹೂ ಕುಂಡಗಳ ಸುವ್ಯವಸ್ಥಿತ ಜೋಡಣೆ ಸ್ಪರ್ಧೆ) ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ಪ್ರಥಮ ಬಹುಮಾನ ಸಿಕ್ಕಿದ್ದು, ಕಪ್‌ಗಳೊಂದಿಗೆ ಶಿಕ್ಷಣ ಸಂಸ್ಥೆಯ ಪ್ರಮುಖರು ಹಾಗೂ ಕಾರ್ಮಿಕರು ಸಂಭ್ರಮಿಸಿದರು.

ಅಂಕಪಟ್ಟಿಯಲ್ಲಿ ಸ್ವಾಮೀಜಿ ಫೋಟೋ; ದಂಗಾದ ವಿದ್ಯಾರ್ಥಿ!



ಬಳ್ಳಾರಿ, ಅ. 6: ಅಂಕಪಟ್ಟಿಯಲ್ಲಿ ವಿದ್ಯಾರ್ಥಿ ಭಾವ ಚಿತ್ರ ಹಾಕುವ ಬದಲು ಸ್ವಾಮೀಜಿಯೊಬ್ಬರ ಫೋಟೋ ಹಾಕಲಾಗಿದೆ. ಈ ಮಾರ್ಕ್ಸ್ ಕಾರ್ಡ್ ನೋಡಿದ ದೇವರಾಜ್ ಮೂಲಿಮನಿ ಎಂಬ ವಿದ್ಯಾರ್ಥಿಯೇ ದಂಗಾಗಿ ಹೋಗಿದ್ದಾನೆ ಇಂತಹದೊಂದು ಘಟನೆ ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯ ಅಡಿ ಬರುವ ಕೊಪ್ಪಳದ ಗವಿಸಿದ್ದೇಶ್ವರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದಲ್ಲಿ ನಡೆದಿದೆ.

ಈ ದೇವರಾಜ್ ಮೂಲಿಮನಿ ಓದುತ್ತಿರುವ ಕೊಪ್ಪಳದ ಗವಿಸಿದ್ದೇಶ್ವರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ವಿಜಯನಗರ ಶ್ರೀಕೃಷ್ಣ ದೇವರಾಯ ವಿವಿ ವ್ಯಾಪ್ತಿಗೆ ಬರುತ್ತದೆ. ಈ ವಿದ್ಯಾರ್ಥಿಯು ಆನ್‌ಲೈನ್ ಮೂಲಕ ಅಂಕಪಟ್ಟಿಗಾಗಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣೆ ವ್ಯವಸ್ಥೆಗೆ ಅರ್ಜಿ ಸಲ್ಲಿಸಿದ್ದ.

ಕೆಲ ದಿನಗಳ ಬಂದ ಅಂಕಪಟ್ಟಿ ನೋಡಿದ ದೇವರಾಜ್‌ಗೆ ಆಘಾತವಾಗಿತ್ತು. ಅವನ ಫೋಟೋ ಬದಲು ಸ್ವಾಮೀಜಿಯೊಬ್ಬರ ಫೋಟ್ ಅಂಕಪಟ್ಟಿಯಲ್ಲಿತ್ತು.

ವಿದ್ಯಾರ್ಥಿಯೇ ಹಾಗೆ ಅರ್ಜಿ ಹಾಕಿದ್ದ: ಈ ಬಗ್ಗೆ ವಿಜಯನಗರ ಶ್ರೀಕೃಷ್ಣ ದೇವರಾಯ ವಿವಿ ಮೌಲ್ಯಮಾಪನ ಕುಲಸಚಿವ ಎನ್‌ಎಂ ಸಾಲಿ ಪ್ರತಿಕ್ರಿಯಿಸಿದ್ದು, ವಿದ್ಯಾರ್ಥಿಯ ಮಾಹಿತಿ ಆನ್‌ಲೈನ್ ಮೂಲಕ ಯುಯುಸಿಎಂಎಸ್‌ನಲ್ಲಿ ವಿದ್ಯಾರ್ಥಿಯೇ ಹಾಗೆ ಹಾಕಿದ್ದ. ನಾವು ಅದರ ಪರಿಶೀಲನೆ ಮಾಡಲ್ಲ. ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣೆ ವ್ಯವಸ್ಥೆಯಿಂದಲೇ ಮಾರ್ಕ್ಸ್ ಕಾರ್ಡ್ ನಮಗೆ ಬರುತ್ತೆ ಆ ಬಳಿಕ ನಾವು ಪ್ರಿಂಟ್ ಮಾಡಿ ಅವರಿಗೆ ಕೊಡೋದಷ್ಟೇ ನಮ್ಮ ಕೆಲಸ ಎಂದಿದ್ದಾರೆ.

ತಪ್ಪಾಗಿದ್ದರೆ ಮತ್ತೆ ಅದೇ ವಿದ್ಯಾರ್ಥಿ ತನ್ನ ಸರಿಯಾದ ಮಾಹಿತಿಯನ್ನ ಯುಯುಸಿಎಂಎಸ್‌ನಲ್ಲಿ ಹಾಕಬೇಕು. ಇದು ಕೇವಲ ಈ ವಿದ್ಯಾರ್ಥಿಯ ಸಮಸ್ಯೆಯಲ್ಲ, ಇನ್ನು ಕೆಲವರು ಸೆಲ್ಫಿ ಫೋಟೋ ಮತ್ತೆ ಕೆಲವರು ಗೂಗಲ್ ಫೋಟೋ ಹಾಕಿದ್ದಾರೆ. ಆನ್‌ಲೈನ್ ಮೂಲಕ ಹಾಕಿದ ಮಾಹಿತಿ ನಮಗೆ ತಿಳಿಯುವುದು ಮಾರ್ಕ್ಸ್ ಕಾರ್ಡ್ ಬಂದ ಬಳಿಕವೇ ಎಂದರು.

ಸದ್ಯ ಎಲ್ಲರಿಂದಲೂ ಈಗ ಮತ್ತೆ ಅರ್ಜಿಯನ್ನು ಪಡೆದು ಯುಯುಸಿಎಂಎಸ್‌ಗೆ ನಾವು ಕಳಿಸುತ್ತೇವೆ. ಆ ಬಳಿಕ ಬೇರೆ ಮಾರ್ಕ್ಸ್ ಕಾರ್ಡ್ ಆ ವಿದ್ಯಾರ್ಥಿಗಳಿಗೆ ಕೊಡುತ್ತೇವೆ ಎಂದು ಎನ್‌ಎಂ ಸಾಲಿ ಹೇಳಿದ್ದಾರೆ. ಒಟ್ಟಿನಲ್ಲಿ ಈ ಪ್ರಕರಣದಲ್ಲಿ ಯಾರು ಯಡವಟ್ಟು ಮಾಡಿದ್ದಾರೆ ಅನ್ನೋದು ತನಿಖೆಯಿಂದಷ್ಟೇ ತಿಳಿದು ಬರಬೇಕಾಗಿದೆ.

ಇಟಲಿಯಲ್ಲಿ ಭೀಕರ ಅಪಘಾತ: ನಾಲ್ವರು ಭಾರತೀಯರು ಸಾವು

ಆರು ಮಂದಿಗೆ ಗಾಯ

ಮಟೇರಾ: ದಕ್ಷಿಣ ಇಟಲಿಯ ಮಟೇರಾ ನಗರದಲ್ಲಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ನಾಲ್ವರು ಭಾರತೀಯರು ಸಾವನ್ನಪ್ಪಿದ್ದಾರೆ ಎಂದು ರೋಮ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸೋಮವಾರ ತಿಳಿಸಿದೆ.

ಶನಿವಾರ ಅಗ್ರಿ ವ್ಯಾಲಿಯ ಮಟೇರಾ ನಗರದ ಸ್ಕ್ಯಾಂಜಾನೊ ಜೊನಿಕೊ ಪುರಸಭೆಯಲ್ಲಿ ಭಾರತೀಯರು ಪ್ರಯಾಣಿಸುತ್ತಿದ್ದ ರೆನಾಲ್ಟ್ ಸಿನಿಕ್ ಎಸ್ ಯುವಿ ಕಾರು, ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಏಳು ಆಸನಗಳ ಈ ಕಾರಿನಲ್ಲಿ 10 ಜನ ಪ್ರಯಾಣಿಸುತ್ತಿದ್ದರು ಎಂದು ಇಟಾಲಿಯನ್ ಸುದ್ದಿ ಸಂಸ್ಥೆ ಎಎನ್‌ಎಸ್‌ಎ ವರದಿ ಮಾಡಿದೆ.

ಮೃತರನ್ನು ಕುಮಾರ್ ಮನೋಜ್ (34), ಸಿಂಗ್ ಸುರ್ಜಿತ್(33), ಸಿಂಗ್ ಹರ್ವಿಂದರ್(31) ಮತ್ತು ಸಿಂಗ್ ಜಸ್ಕರನ್(20) ಎಂದು ಗುರುತಿಸಲಾಗಿದೆ.

ದಕ್ಷಿಣ ಇಟಲಿಯ ಮಟೇರಾದಲ್ಲಿ ನಡೆದ ರಸ್ತೆ ಅಪಘಾತದಲ್ಲಿ ನಾಲ್ವರು ಭಾರತೀಯ ಪ್ರಜೆಗಳ ದುರಂತ ಸಾವಿಗೆ ಭಾರತೀಯ ರಾಯಭಾರ ಕಚೇರಿ ತೀವ್ರ ಸಂತಾಪ ಸೂಚಿಸುತ್ತದೆ" ಎಂದು ಭಾರತೀಯ ರಾಯಭಾರ ಕಚೇರಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದೆ.

ವಿವರಗಳನ್ನು ಪಡೆಯಲು ನಾವು ಸ್ಥಳೀಯ ಇಟಾಲಿಯನ್ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದೇವೆ. ಸಂಬಂಧಪಟ್ಟ ಕುಟುಂಬಗಳಿಗೆ ರಾಯಭಾರ ಕಚೇರಿ ಎಲ್ಲಾ ಸಂಭಾವ್ಯ ಕಾನ್ಸುಲರ್ ಸಹಾಯ ಒದಗಿಸುತ್ತದೆ ಎಂದು ರಾಯಭಾರ ಕಚೇರಿ ತಿಳಿಸಿದೆ.

ಅಪಘಾತದಲ್ಲಿ ಗಾಯಗೊಂಡ ಐದು ಮಂದಿಯನ್ನು ಪೊಲಿಕೊರೊ(ಮಟೆರಾ) ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಭೀರವಾಗಿ ಗಾಯಗೊಂಡ ಮತ್ತೊಬ್ಬರನ್ನು ಪೊಟೆಂಜಾದ ಸ್ಯಾನ್ ಕಾರ್ಲೊ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಎಎನ್‌ಎಸ್‌ಎ ವರದಿ ಮಾಡಿದೆ.

ಕೇಂದ್ರ ಸಚಿವ ವಿ.ಸೋಮಣ್ಣ ಸಮಸಮಾಜದ ವಿರೋಧಿ

ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

ಬೆಂಗಳೂರು: ಮೇಲ್ಜಾತಿಗಳನ್ನು ತುಳಿಯಲು ಸಮೀಕ್ಷೆ ನಡೆಸಲಾಗುತ್ತಿದೆ ಎಂಬ ಕೇಂದ್ರ ಸಚಿವ ವಿ.ಸೋಮಣ್ಣ ಅವರ ಆರೋಪ ಬಾಲಿಶವಾದದ್ದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ ಅವರು, ಜನರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು ನಡೆಸದಿದ್ದರೆ, ಸಮಾಜದಲ್ಲಿ ಜನರ ಸ್ಥಿತಿಗತಿ ಬಗ್ಗೆ ಅರಿಯಲು ಸಾಧ್ಯವಿಲ್ಲ. ಈ ಸಮೀಕ್ಷೆಯಲ್ಲಿ ಯಾವ ಜಾತಿಯವರನ್ನು ತುಳಿಯುವ ಪ್ರಶ್ನೆಯಿಲ್ಲ. ಸಮಸಮಾಜ ನಿರ್ಮಾಣವನ್ನು ವಿರೋಧಿಸುವವರು ಇಂತಹ ಹೇಳಿಕೆಗಳನ್ನು ನೀಡುವ ಮೂಲಕ ಜನರ ದಾರಿ ತಪ್ಪಿಸುತ್ತಿದ್ದಾರೆ ಎಂದಿದ್ದಾರೆ.

ಈಗಾಗಲೇ 1.10 ಕೋಟಿ ಕುಟುಂಬಗಳ ಸಮೀಕ್ಷಾ ಕಾರ್ಯ ಮುಗಿದಿದ್ದು, ನಿನ್ನೆವರೆಗೆ ಶೇ 63ರಷ್ಟು ಸರ್ವೆ ಕಾರ್ಯ ಪ್ರಗತಿಯಾಗಿದೆ. ನಾಳೆ ಸಂಜೆವರೆಗೆ ಸಮೀಕ್ಷೆಯ ಪ್ರಗತಿಯನ್ನು ಪರಿಶೀಲಿಸಿ, ಸಮೀಕ್ಷೆ ಅವಧಿ ವಿಸ್ತರಣೆ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಅವರು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ಮೇಲ್ಜಾತಿಗಳನ್ನು ತುಳಿಯುವ ಸಲುವಾಗಿ ಜಾತಿವಾರು ಸಮೀಕ್ಷೆ ಮಾಡಲಾಗುತ್ತಿದೆ. ಸಿದ್ದರಾಮಯ್ಯ ಸರ್ಕಾರ ತಕ್ಷಣವೇ ಈ ಸಮೀಕ್ಷೆಯನ್ನು ನಿಲ್ಲಿಸಬೇಕು ಎಂದು ಸೋಮಣ್ಣ ಆಗ್ರಹಿಸಿದ್ದರು. ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ್ದ ಅವರು, 'ಮೇಲ್ಜಾತಿ ಅಥವಾ ಯಾವುದೋ ಜಾತಿಗಳನ್ನು ತುಳಿಯುವ ಸಲುವಾಗಿ ಇಷ್ಟೆಲ್ಲಾ ಅಸಹ್ಯಕರವಾದ ಸಮೀಕ್ಷೆಯನ್ನು ನಡೆಸುತ್ತಿದ್ದಾರೆ. ಸಮೀಕ್ಷೆ ಬಗ್ಗೆ ಅಧಿಕಾರಿಗಳಿಗೇ ಪೂರ್ಣ ಮಾಹಿತಿ ಇಲ್ಲ. ಇದು ಇನ್ನೊಂದು ಕಾಂತರಾಜ ಆಯೋಗದ ಸಮೀಕ್ಷೆಯಂತಾಗುತ್ತದೆ. ಈ ಎಲ್ಲ ಗೊಂದಲಗಳಿಗೆ ತೆರೆ ಎಳೆಯಬೇಕು ಎಂದು ಹೇಳಿದ್ದರು.

ಲಿಂಗಾಯತ ಧರ್ಮದ ವಿಷಯದಲ್ಲಿ ಜನರ ನಿಲುವೇ ನನ್ನ ನಿಲುವು: ಕೊಪ್ಪಳ ಜಿಲ್ಲೆಯಲ್ಲಿ ಶೇ 97 ರಷ್ಟು ಸಮೀಕ್ಷೆ ಪೂರ್ಣಗೊಂಡಿದ್ದು, ಇದು ಒಳ್ಳೆಯ ಬೆಳವಣಿಗೆ. ಸಮಾಜದಲ್ಲಿ ಬದಲಾವಣೆಯನ್ನು ವಿರೋಧಿಸುವವರು ಸಮೀಕ್ಷೆಯ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ. ಲಿಂಗಾಯತ ಧರ್ಮದ ವಿಷಯದಲ್ಲಿ ಜನರು ಸ್ವಯಂಪ್ರೇರಣೆಯಿಂದ ತಮ್ಮ ಧರ್ಮವನ್ನು ತಿಳಿಸಿದಂತೆ ಸಮೀಕ್ಷಾಗಾರರು ಧರ್ಮವನ್ನು ನಮೂದಿಸಿಕೊಳ್ಳುತ್ತಾರೆ. ಈ ಬಗ್ಗೆ ಜನರ ನಿಲುವೇ ನನ್ನ ನಿಲುವು ಎಂದು ಎಕ್ಸ್‌ನಲ್ಲಿ ಸ್ಪಷ್ಟಪಡಿಸಿದ್ದಾರೆ. ಬಲ್ಡೋಟಾ ಕಾರ್ಖಾನೆ ಯೋಜನೆ ಕುರಿತು ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿದ ಸಿಎಂ ಈ ವಿಚಾರ ನ್ಯಾಯಾಲಯದಲ್ಲಿ ಇದ್ದು, ತೀರ್ಪಿನ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಕುರುಬೂರು ಪಿಎಸಿಎಸ್‌ಗೆ 11 ನಿರ್ದೇಶಕರು ಅವಿರೋಧ ಆಯ್ಕೆ

ಮಾಜಿ ಅಧ್ಯಕ್ಷರ ಚಾಣಾಕ್ಷ ನಡೆ: ಒಟ್ಟು 33 ಆಕಾಂಕ್ಷಿಗಳ ಪೈಕಿ 22 ಮಂದಿ ನಾಮಪತ್ರ ವಾಪಸ್



ಕುರುಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿ

ತಿ.ನರಸೀಪುರ, ಅ.6– ತಾಪಂ ಮಾಜಿ ಸದಸ್ಯ ಹಾಗೂ ಕುರುಬೂರು ಪಿಎಸಿಎಸ್ ಮಾಜಿ ಅಧ್ಯಕ್ಷ ಸೀಹಳ್ಳಿ ಗುರುಮೂರ್ತಿ ಅವರ ಚಾಣಾಕ್ಷ ನಡೆಯಿಂದ ಕುರುಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ 11 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇಲ್ಲಿನ ಪಿಎಸಿಎಸ್ ನಿರ್ದೇಶಕರ ಆಯ್ಕೆಗಾಗಿ ಅ.11ಕ್ಕೆ ಚುನಾವಣೆ ನಿಗದಿಯಾಗಿತ್ತು. ಆದರೆ ನಾಮಪತ್ರ ಸಲ್ಲಿಸಿದ್ದ ಒಟ್ಟು 33 ಸದಸ್ಯರ ಪೈಕಿ 22 ಆಕಾಂಕ್ಷಿಗಳು ತಮ್ಮ ಉಮೇದುವಾರಿಕೆ ವಾಪಸ್ ಪಡೆಯುವ ಮೂಲಕ ಚುನಾವಣಾ ಕಣದಿಂದ ಹಿಂದೆ ಸರಿದು 11 ನಿರ್ದೇಶಕರ ಅವಿರೋಧ ಆಯ್ಕೆಗೆ ಸಹಕರಿಸಿದರು.

ಆಡಳಿತ ಮಂಡಳಿಗೆ ಆಯ್ಕೆ ಬಯಸಿ ಸಾಲಗಾರರ ಕ್ಷೇತ್ರದಿಂದ 26 ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ 7 ಮಂದಿ ಉಮೇದುವಾರಿಕೆ ಸಲ್ಲಿಸಿದ್ದರು. ನಂತರ ನಡೆದ ರಾಜಕೀಯ ಬೆಳವಣಿಗೆಯಲ್ಲಿ ನಾಮಪತ್ರ ಹಿಂಪಡೆಯಲು ಅಂತಿಮ ದಿನವಾದ ಅ.5 ರಂದು ಸಾಲಗಾರರ ಕ್ಷೇತ್ರದಿಂದ 16 ಮಂದಿ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ 6 ಮಂದಿ ಆಕಾಂಕ್ಷಿಗಳು ನಾಮಪತ್ರ ವಾಪಸ್ ಪಡೆದ ಹಿನ್ನೆಲೆಯಲ್ಲಿ ಕಣದಲ್ಲಿ ಉಳಿದ 11 ಮಂದಿ ಅವಿರೋಧವಾಗಿ ಆಯ್ಕೆಯಾದರು.

ಸಾಲಗಾರರ ಕ್ಷೇತ್ರದಿಂದ ಮೀಸಲಾದ ಸಾಮಾನ್ಯ ಸ್ಥಾನಕ್ಕೆ ಕೆ.ಎಸ್.ನಾಗರಾಜಮೂರ್ತಿ, ಎಂ.ಶಾಂತ, ಕೆ.ಎಂ.ಮಹದೇವಸ್ವಾಮಿ, ಎಂ.ರವಿ, ಜಯಪ್ಪ, ಮಹಿಳಾ ಮೀಸಲು ಸ್ಥಾನಕ್ಕೆ ಮಂಜುಳಾ, ಲಲಿತಮ್ಮ, ಹಿಂದುಳಿದ ಪ್ರವರ್ಗ 'ಎ' ಯಿಂದ ಪುಟ್ಟಸ್ವಾಮಿ, ಹಿಂದುಳಿದ ಪ್ರವರ್ಗ 'ಬಿ' ಯಿಂದ ಮಹದೇವಸ್ವಾಮಿ, ಪರಿಶಿಷ್ಟ ಜಾತಿಗೆ ಮೀಸಲಾದ ಸ್ಥಾನಕ್ಕೆ ಶಿವಮಲ್ಲಯ್ಯ ಹಾಗೂ ಸಾಲಗಾರರಲ್ಲದ ಕ್ಷೇತ್ರ ದಿಂದ ಸಾಮಾನ್ಯ ವರ್ಗಕ್ಕೆ ಮೀಸಲಾದ ಸ್ಥಾನಕ್ಕೆ ಕೆ.ಎಂ. ಶಿವಕುಮಾರ್ ಅವರು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎ.ಹಸೀನಾ ಘೋಷಿಸಿದರು. ಈ ವೇಳೆ ಸಹಕಾರ ಸಂಘದ ಸಿಇಓ ಕೆ.ಸಿ.ಶ್ರೀನಿವಾಸ ಮೂರ್ತಿ ಹಾಜರಿದ್ದರು.

ಸೀಹಳ್ಳಿ ಗುರುಮೂರ್ತಿ ನೇತೃತ್ವದ ಸಭೆ

ಯಶಸ್ವಿ: ಸಹಕಾರ ಸಂಘಕ್ಕೆ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಬೇಕೆಂಬ ಆಶಯದೊಂದಿಗೆ ತಿ.ನರಸೀಪುರದ ಕಬಿನಿ ಅತಿಥಿ ಗೃಹದಲ್ಲಿ ತಾಪಂ ಮಾಜಿ ಅಧ್ಯಕ್ಷ ಸೀಹಳ್ಳಿ ಗುರುಮೂರ್ತಿ ನೇತೃತ್ವದಲ್ಲಿ ಸಭೆ ನಡೆಸಲಾಯಿತು.

ಸಭೆಯಲ್ಲಿ ಕುರುಬೂರು, ಕನ್ನಾಯಕನಹಳ್ಳಿ, ಮಾಡ್ರಹಳ್ಳಿ, ಸೀಹಳ್ಳಿ, ಕನ್ನಹಳ್ಳಿ, ತೊಟ್ಟವಾಡಿ ಹಾಗೂ ಕೊತ್ತೇಗಾಲ ಗ್ರಾಮದ ಮುಖಂಡರು ಭಾಗವಹಿಸಿದ್ದು, ಈ ವೇಳೆ ನಿರ್ದೇಶಕರ ಸ್ಥಾನಕ್ಕೆ ಆಯ್ಕೆ ಬಯಸಿ ನಾಮಪತ್ರ ಸಲ್ಲಿಸಿದ್ದ 33 ಮಂದಿ ಹಾಜರಿದ್ದರು. ಗ್ರಾಮದಲ್ಲಿ ಚುನಾವಣೆ ನಡೆಸುವ ಮೂಲಕ ದುಂದು ವೆಚ್ಚ ಮಾಡುವುದು ಬೇಡ. ಗ್ರಾಮದಲ್ಲಿ ಎಲ್ಲರೂ ಪರಸ್ಪರ ಸಹಕಾರದೊಂದಿಗೆ ಚುನಾವಣೆ ನಡೆಸದೇ ಅವಿರೋಧವಾಗಿ ಆಯ್ಕೆ ಮಾಡಿ ಕೊಳ್ಳೋಣ ಎಂದು ಗುರುಮೂರ್ತಿ ಮನವಿ ಮಾಡಿದ ಹಿನ್ನೆಲೆಯಲ್ಲಿ 22 ಆಕಾಂಕ್ಷಿಗಳು ನಾಮಪತ್ರ ವಾಪಸ್ ಪಡೆಯಲು ಸಮ್ಮತಿಸಿದರು. ಅಂತಿಮವಾಗಿ 11 ಮಂದಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾದರು.

ಬಾರಸೆ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ಬಾರಸೆ ಪಿಎಸಿಎಸ್ ಅಧ್ಯಕ್ಷರಾಗಿ ಬಾವಜಾನ್, ಉಪಾಧ್ಯಕ್ಷರಾಗಿ ಮಂಜುನಾಥ್ ಆಯ್ಕೆಯಾದರು.

ಬೆಟ್ಟದಪುರ, ಅ.6– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿ ಬಾರಸೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಬಾವಜಾನ್ ಹಾಗೂ ಉಪಾಧ್ಯಕ್ಷರಾಗಿ ಕೆ.ಜೆ.ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಸೋಮವಾರ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಾವಜಾನ್, ಉಪಾಧ್ಯಕ್ಷ ಸ್ಥಾನಕ್ಕೆ ಮಂಜುನಾಥ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆಯ ಯತೀಂದ್ರ ಘೋಷಿಸಿದರು.

ಇದೇ ವೇಳೆ ಕಾಂಗ್ರೆಸ್ ಯುವ ಮುಖಂಡ, ಜಿಲ್ಲಾ ಡಿಸಿಸಿ ಬ್ಯಾಂಕ್ ನಿರ್ದೇಶಕ ಈಚೂರು ಲೋಕೇಶ್ ಹಾಗೂ ಇತರರು ನೂತನ ಅಧ್ಯಕ್ಷ ಉಪಾಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿದರು.

ನೂತನ ಅಧ್ಯಕ್ಷ ಬಾವಜಾನ್ ಮಾತನಾಡಿ, ನಾನು ಸಹಕಾರ ಸಂಘದ ಅಧ್ಯಕ್ಷನಾಗಿ ಆಯ್ಕೆಯಾಗಲು ಸಹಕರಿಸಿದ ಸಚಿವ ಕೆ.ವೆಂಕಟೇಶ್ ಹಾಗೂ ಮುಖಂಡ ನಿತಿನ್ ವೆಂಕಟೇಶ್, ಸಂಘದ ಎಲ್ಲಾ ನಿರ್ದೇಶಕರನ್ನು ಅಭಿನಂದಿಸುತ್ತೇನೆ. ಮುಂದಿನ ದಿನಗಳಲ್ಲಿ ಸಂಘದ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಈ ವೇಳೆ ಕಾರ್ಯಕಾರಿ ಮಂಡಳಿ ಸದಸ್ಯರಾದ ಈ.ಪಿ.ಲೋಕೇಶ್, ಎಸ್.ಆರ್. ಮಹೇಂದ್ರ, ಬಸವರಾಜು, ಬಿ.ಕೆ.ಸಿದ್ದರಾಜೇ ಅರಸ್, ಮಹಾದೇವ, ನಾಗೇಗೌಡ, ಅಮೃತೇಶ್, ಹೆಚ್.ಕೆ.ಶೋಭ, ಭಾಗ್ಯಮ್ಮ, ಟಿ.ವೀರಭದ್ರ, ಜಿಲ್ಲಾ ಬ್ಯಾಂಕ್ ಪ್ರತಿ ನಿಧಿ ಟಿ.ಯತೀಶ್, ಸಂಘದ ನೌಕರ ಬಿ.ಎನ್. ನಂದೀಶ್, ಸಿಇಓ ಲೋಹಿತ್ ಸೇರಿದಂತೆ ಇತರರಿದ್ದರು.

ಇಂದು ಉಚಿತ ದಂತ ಚಿಕಿತ್ಸಾ ಶಿಬಿರ

ಕೆ.ಆರ್.ನಗರ, ಅ.6– ಪಟ್ಟಣದ ಭಾರತ್ ವಿಕಾಸ್ ಪರಿಷತ್ ಕಶ್ಯಪ ಶಾಖೆ, ಕೆ.ಆರ್.ನಗರ ಮತ್ತು ಕೊಡುಗು ದಂತ ಮಹಾವಿದ್ಯಾಲಯ, ವಿರಾಜಪೇಟೆ ಇವರ ಸಂಯುಕ್ತಾಶಯದಲ್ಲಿ ಅ.7 ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ಗಾಂಧಿ ಪಾರ್ಕ್ ಎದುರಿನ ಭಾರತಿ ವಿದ್ಯಾಮಂದಿರದಲ್ಲಿ ಉಚಿತ ದಂತ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಹುಳುಕು ಹಲ್ಲು ತೆಗೆಯುವುದು, ಹಲ್ಲುಗಳ ಫಿಲ್ಲಿಂಗ್, ಹಲ್ಲುಗಳ ಕ್ಲೀನಿಂಗ್ ಉಚಿತವಾಗಿ ನಡೆಸಲಾಗುವುದು ಮತ್ತು ಹಲ್ಲುಗಳ ಸಂರಕ್ಷಣೆ ಬಗ್ಗೆ ಮಾಹಿತಿ ನೀಡಲಾಗುವುದು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶಿಬಿರದ ಪ್ರಯೋಜನ ಪಡೆಯುವಂತೆ ಪ್ರಕಟಣೆ ತಿಳಿಸಿದೆ.

ಇಂದು ವಾಲ್ಮೀಕಿ ಜಯಂತೋತ್ಸವ



ಹೆಚ್.ಡಿ.ಕೋಟೆ, ಅ.6– ತಾಲೂಕು ನಾಯಕರ ಸಮಾಜದಿಂದ ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಅ.7 ರಂದು ಬೆಳಗ್ಗೆ 10 ಗಂಟೆಗೆ ಮಹರ್ಷಿ ವಾಲ್ಮೀಕಿ ಜಯಂತೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಸಮಾಜ ಸೇವಕ ಹಾಗೂ ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣ ನಾಯಕ ತಿಳಿಸಿದ್ದಾರೆ. ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಗೂ ಸಮಾಜದ ಎಲ್ಲಾ ಬಂಧುಗಳೊಂದಿಗೆ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು. ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ.

ವೀರೇದೇವನಪುರ ಪಿಎಸಿಎಸ್ ಕಾಂಗ್ರೆಸ್ ತೆಕ್ಕೆಗೆ


ವೀರೇದೇವನಪುರ ಪಿಎಸಿಎಸ್ ನಿರ್ದೇಶಕರು ವಿಜಯೋತ್ಸವ ಆಚರಿಸಿದರು.

ನಂಜನಗೂಡು, ಅ.6– ತಾಲೂಕಿನ ವೀರೇದೇವನಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ವಿಜಯ್ ಕುಮಾರ್ ಬಣದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸುವ ಮೂಲಕ ಮೇಲುಗೈ ಸಾಧಿಸಿದ್ದಾರೆ.

ವೀರೇದೇವನಪುರ ಪಿಎಸಿಎಸ್‌ನ 12 ನಿರ್ದೇಶಕರ ಪೈಕಿ ಮಹಿಳಾ ಕ್ಷೇತ್ರದ ಸೌಭಾಗ್ಯ ಶ್ರೀನಿವಾಸಮೂರ್ತಿ, ಪಾರ್ವತಮ್ಮ, ಎಸ್ಟಿ ಮೀಸಲು ಕ್ಷೇತ್ರದಿಂದ ಸ್ವಾಮಿ ನಾಯಕ, ಬಿಸಿಎಂ (ಎ) ದೊಡ್ಡಮಾದೇಗೌಡ ಸೇರಿದಂತೆ ನಾಲ್ವರು ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದರು. ಉಳಿದ 8 ಸ್ಥಾನಗಳಿಗೆ 14 ಮಂದಿ ಸ್ಪರ್ಧಿಸಿದ್ದರು. ನಂತರ ಭಾನುವಾರ ನಡೆದ ಚುನಾವಣೆಯಲ್ಲಿ ಸಾಲಗಾರರ ಸಾಮಾನ್ಯ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ವಿಜಯಕುಮಾರ್, ದೊರೆಸ್ವಾಮಿ, ಕುಳ್ಳಯ್ಯ, ನಾಗರಾಜು, ಬಸವೇಗೌಡ ಆಯ್ಕೆಯಾದರು. ಬಿಸಿಎಂ(ಬಿ) ಮೀಸಲು ಕ್ಷೇತ್ರ ದಿಂದ ಗುರುಸಿದ್ದಪ್ಪ, ಎಸ್ಸಿ ರಂಗದಾಸ್, ಸಾಲಗಾರರಲ್ಲದ ಕ್ಷೇತ್ರದಿಂದ ಬಿಜೆಪಿ ಬೆಂಬಲಿತ ಬದನವಾಳು ಮಹೇಶ್ ಜಯ ಸಾಧಿಸುವ ಮೂಲಕ ಆಯ್ಕೆಯಾದರು.

ವಿಜಯ್ ಕುಮಾರ್ ಮಾತನಾಡಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ಮತ್ತು ಬೆಲೆ ಏರಿಕೆಯಿಂದಾಗಿ ಜನರು ಬಿಜೆಪಿ ಪಕ್ಷದ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ. ಕಾಂಗ್ರೆಸ್‌ನ ಜನಪರ ಆಡಳಿತ ಮತ್ತು ಗ್ಯಾರಂಟಿ ಯೋಜನೆಗಳಿಂದಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು 11 ಸದಸ್ಯರು ಆಯ್ಕೆಯಾಗಿದ್ದೇವೆ. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಭೂತಪೂರ್ವ ಜಯ ಸಾಧಿಸಲಿದೆ ಎಂದರು. ಇದೇ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಸಿಹಿ ಹಂಚಿ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ಮುಖಂಡರಾದ ಸುರೇಶ್, ಎನ್.ಎಂ. ಮಂಜುನಾಥ್, ಬದನವಾಳು ಸೋಮು, ಸೇರಿದಂತೆ ಮುಖಂಡರು ಗ್ರಾಮಸ್ಥರು ಮತ್ತು ರೈತರು ಉಪಸ್ಥಿತರಿದ್ದರು.

ಕರ್ತವ್ಯ ಲೋಪ ಹಿನ್ನೆಲೆ: ಸೇವೆಯಿಂದ ಅಮಾನತು


ಮಂಜುನಾಥ್

ಹುಣಸೂರು, ಅ.6– ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕ ಆರ್.ಮಂಜುನಾಥ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಅಧೀನ ಕಾರ್ಯದರ್ಶಿ–2 (ಸಹಕಾರ ಇಲಾಖೆ) ಮುನಿ ಆಂಜನಪ್ಪ ಆದೇಶ ಹೊರಡಿಸಿದ್ದಾರೆ.

ಈ ಹಿಂದೆ ಆರ್.ಮಂಜುನಾಥ್ ಅವರು ಮೈಸೂರು ಮತ್ತು ಹುಣಸೂರು ಉಪ ವಿಭಾಗದಲ್ಲಿ ಸಹಕಾರ ಸಂಘಗಳ ಉಪನಿಬಂಧಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ವೇಳೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಮೈಸೂರು, ಜೆ.ಪಿ.ನಗರ ಬ್ರಾಹ್ಮಣ ಸಂಘ(ರಿ) ಮೈಸೂರು, ಭೇರ್ಯ ವ್ಯವಸಾಯ ಸೇವಾ ಸಹಕಾರ ಸಂಘ. ನಿ. ಭೇರ್ಯ. ಕೆ.ಆರ್ ನಗರ ತಾಲೂಕು ಈ ಸಂಘ ಹಾಗೂ ಸಂಸ್ಥೆಗಳಲ್ಲಿ ಮಾಡಿರುವ ಅವ್ಯವಹಾರಗಳ ಕುರಿತು ತನಿಖೆ ನಡೆಸಿ, ಕ್ರಮ ಕೈಗೊಳ್ಳುವಂತೆ ಮೈಸೂರು ಸರಸ್ವತಿಪುರಂ ನಿವಾಸಿ ಹೆಚ್.ತೇಜಸ್ವಿ ನೀಡಿದ್ದ ದೂರಿನ ಮೇರೆಗೆ ವಿಚಾರಣೆ ನಡೆಸಿದ ವೇಳೆ ಕರ್ತವ್ಯ ಲೋಪ ಎಸಗಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಸೇವೆಯಿಂದ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಸರಗೂರಲ್ಲಿ ವಿಶ್ವ ಸೆರೆಬ್ರಲ್ ಪಾಲ್ಸಿ ದಿನಾಚರಣೆ


ಕಾರ್ಯಕ್ರಮವನ್ನು ದಾಸ್ ಸೂರ್ಯವಂಶಿ ಉದ್ಘಾಟಿಸಿದರು.

ಸರಗೂರು, ಅ.6– ಪಟ್ಟಣದ ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆ ಆವರಣದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಚೈತನ್ಯ ಪೇರೆಂಟ್ಸ್ ಅಸೋಸಿಯೇಷನ್ ಹಾಗೂ ಸಮುದಾಯದ ಸಹಭಾಗಿತ್ವದೊಂದಿಗೆ ವಿಶ್ವ ಸೆರೆಬ್ರಲ್ ಪಾಲ್ಸಿ ದಿನಾಚರಣೆ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಂಗವಿಕಲರ ಹಕ್ಕು ಅಧಿನಿಯಮ ಅನುಷ್ಠಾನದ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ, ಸರಗೂರಲ್ಲಿ ಕಾರ್ಯಕ್ರಮ ನಡೆಯುತ್ತಿರುವುದು ಸಂತಸದ ವಿಷಯ. ವಿಶೇಷಚೇತನರ ಸಮಸ್ಯೆಗಳಿಗೆ ಸ್ಪಂದಿಸಲು ನಾವು ಸದಾ ಸಿದ್ಧರಿದ್ದೇವೆ. ಡಿಸೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರೂ ಭಾಗವಹಿಸಬೇಕು ಎಂದರು.

ಮೈಸೂರು ಜಿಲ್ಲಾ ಅಂಗವಿಕಲ ಪುನರ್ವಸತಿ ಕೇಂದ್ರದ ಕಾರ್ಯದರ್ಶಿ ಎಸ್.ಎಸ್. ವೈದ್ಯನಾಥ್ ಮಾತನಾಡಿ, ವಿಶೇಷ ಚೇತನರಿಗಾಗಿ ವಿಶೇಷ ನ್ಯಾಯಾಲಯವಿದೆ. ಅವರಿಗಾಗಿ ವಕೀಲರನ್ನು ನೇಮಕ ಮಾಡಲಾಗಿದೆ. ಸಮಸ್ಯೆ ಕಂಡು ಬಂದಲ್ಲಿ ದೂರು ನೀಡಿದರೆ ನಿಮ್ಮ ಸಮಸ್ಯೆಗೆ ಪರಿಹಾರ ಕೊಡಿಸುವ ಕೆಲಸ ಮಾಡುತ್ತಾರೆ. ವಿಶೇಷಚೇತನರಿಗೆ ತಾರತಮ್ಯ ಮಾಡದೆ ಎಲ್ಲರನ್ನು ಸರಿಸಮಾನವಾಗಿ ನೋಡ ಬೇಕು ಎಂದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಆರೋಗ್ಯ ವಿಭಾಗದ ಮುಖ್ಯಸ್ಥ ಡಾ.ಜಿ.ಎಸ್.ಕುಮಾರ್, ಚೈತನ್ಯ ಪೇರೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷೆ ಸೌಮ್ಯ ಮಾತನಾಡಿದರು. ಇದೇ ವೇಳೆ ಹೋಲಿಗೆ ತರಬೇತಿ ಪಡೆದ ಮಕ್ಕಳ ಪೋಷಕರಿಗೆ ತರಬೇತಿ ಪ್ರಮಾಣ ಪತ್ರ, ಆಟೋಟ ಸ್ಪರ್ಧೆ, ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದ ವಿಶೇಷಚೇತನ ಮಕ್ಕಳು ಮತ್ತು ಪೋಷಕರಿಗೆ ಬಹುಮಾನ ವಿತರಿಸಿದರು.

ಕಾರ್ಯಕ್ರಮದಲ್ಲಿ ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಹೆಚ್.ಡಿ.ಕೋಟೆ ತಾಲೂಕು ಸಂಯೋಜಕ ಮಹದೇವಯ್ಯ, ಸರಗೂರು ತಾಲೂಕು ಸಂಯೋಜಕ ದೇವರಾಜು, ಹೆಚ್.ಡಿ.ಕೋಟೆ ಲಯನ್ಸ್ ಅಧ್ಯಕ್ಷ ಭಾಸ್ಕರ, ವರ್ತಕರ ಮಂಡಳಿ ಅಧ್ಯಕ್ಷ ಎಸ್.ಪಿ.ಪ್ರಸಾದ್, ವಿವೇಕಾನಂದ ಸ್ಮಾರಕ ಆಸ್ಪತ್ರೆಯ ವ್ಯವಸ್ಥಾಪಕಿ ಸುಷ್ಮಶ್ರೀ, ಡಾ.ದೀಪಶ್ರೀ, ನಿಂಗರಾಜು, ಮಮತ, ಪೂರ್ಣಿಮಾ, ಸದಾಶಿವ, ಶ್ರೀಧರ, ಮಹೇಶ್, ಬೋರಪ್ಪ, ಪರೀನಾ, ಸುನೀತ, ಚೈತನ್ಯ ಪೇರೆಂಟ್ಸ್ ಅಸೋಸಿಯೇಷನ್‌ನ ಪದಾಧಿಕಾರಿಗಳಾದ ಸೌಮ್ಯ, ವಿದ್ಯಾ, ವನಿತ, ಭಾವನ, ಜಯಶೀಲಾ ಇತರರಿದ್ದರು.

ರೈತರಿಂದ ಅರ್ಜಿ ಆಹ್ವಾನ

ಕೆ.ಆರ್.ನಗರ, ಅ.6– ಕೃಷಿ ಇಲಾಖೆ ವತಿಯಿಂದ ರಿಯಾಯಿತಿ ದರದಲ್ಲಿ ಪಿವಿಸಿ ಪೈಪ್ ಹಾಗೂ ಸ್ಪಿಂಕ್ಲರ್ ಪೈಪ್‌ಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತ ರೈತರು ಅಗತ್ಯ ದಾಖಲಾತಿಗಳೊಂದಿಗೆ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನ ಹೋಬಳಿಯ ರೈತ ಸಂಪರ್ಕ ಕೇಂದ್ರಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪಟ್ಟಣದ ಸಹಾಯಕ ಕೃಷಿ ನಿರ್ದೇಶಕ ಕೆ.ಜೆ.ಮಲ್ಲಿಕಾರ್ಜುನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುಣಸೂರಲ್ಲಿ 71ನೇ ವನ್ಯಜೀವಿ ಸಪ್ತಾಹ

ಅರಣ್ಯ ಇಲಾಖೆ ಸಿಬ್ಬಂದಿ, ವಿದ್ಯಾರ್ಥಿಗಳಿಂದ ಜಾಗೃತಿ ಜಾಥಾ


ಹುಣಸೂರಲ್ಲಿ 71ನೇ ವನ್ಯಜೀವಿ ಸಪ್ತಾಹಕ್ಕೆ ಅಯೂಬ್ ಖಾನ್ ಚಾಲನೆ ನೀಡಿದರು.

ಹುಣಸೂರು, ಅ.6– 71ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ನಗರದಲ್ಲಿ ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗ ವತಿಯಿಂದ ಅರಣ್ಯ ಇಲಾಖೆ ಸಿಬ್ಬಂದಿ, ಕಾಲೇಜು ವಿದ್ಯಾರ್ಥಿಗಳು ಜಾಥಾ ನಡೆಸಿ ಸಾರ್ವಜನಿಕರಿಗೆ ವನ್ಯಜೀವಿಗಳು ಹಾಗೂ ಅರಣ್ಯ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಿದರು.

ನಗರದ ಅರಣ್ಯ ಇಲಾಖೆ ಕಚೇರಿ ಆವರಣದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎಸ್.ರವಿಶಂಕರ್, ನಾಗರಹೊಳೆ ಹುಲಿ ಯೋಜನೆ ನಿರ್ದೇಶಕಿ ಪಿ.ಎ.ಸೀಮಾ, ಡಿವೈಎಸ್ಪಿ ಗೋಪಾಲಕೃಷ್ಣ, ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮತ್ತಿತರ ಗಣ್ಯರು ಹುಲಿವೇಷ, ವನ್ಯಪ್ರಾಣಿಗಳ ವೇಷಧಾರಿಗಳ ಕುಣಿತದೊಂದಿಗೆ ಪಾರಿವಾಳ, ಬಲೂನ್ ಹಾರಿಸಿ, ಹಸಿರು ನಿಶಾನೆ ತೋರುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು.

ಸಂವಿಧಾನ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾತನಾಡಿ, ನಾಡಿನಲ್ಲಿ ಕುಳಿತು ಕಾಡಿನ ಬಗ್ಗೆ ಮಾತನಾಡುತ್ತೇವೆ. ಕಾಡನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮದಾಗಬೇಕು. ಕಾಡಿದ್ದರೆ ನಾಡು, ನಾವು ಎಂಬ ಮನೋಭಾವ ಪ್ರತಿಯೊಬ್ಬರಲ್ಲೂ ಮೂಡಬೇಕು. ಅರಣ್ಯ ಇದ್ದರಷ್ಟೆ ಸಾಲದು. ಅಲ್ಲಿ ವನ್ಯಜೀವಿಗಳಿರಬೇಕು. ಅರಣ್ಯ ಇಲಾಖೆ ವನ್ಯಜೀವಿ ಸಪ್ತಾಹ ಮೂಲಕ ಜನರಲ್ಲಿ ವನ್ಯಜೀವಿಗಳು ಮತ್ತು ಅರಣ್ಯ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುತ್ತಿರುವುದು ಅರ್ಥಪೂರ್ಣವಾಗಿದೆ ಎಂದರು.

ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎಸ್.ರವಿಶಂಕರ್ ಮಾತನಾಡಿ, ಈ ಬಾರಿಯ ಸಪ್ತಾಹದ ಧ್ಯೇಯ ವಾಕ್ಯದಂತೆ ಮಾನವ–ಪ್ರಾಣಿ ಸಹಬಾಳ್ವೆ ಕುರಿತಂತೆ ಜಾಗೃತಿ ಮೂಡಿಸಲಾಗುತ್ತಿದೆ. ವಿದ್ಯಾರ್ಥಿಗಳು ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಬೇಕೆಂದು ಸೂಚಿಸಿದರು.

ಡಿಸಿಎಫ್ ಮಹಮ್ಮದ್ ಫಯಾಜುದ್ದೀನ್ ಮಾತನಾಡಿದರು. ನಗರದ ಜ್ಞಾನಧಾರ ಪದವಿ ಕಾಲೇಜು, ಶಾಸ್ತ್ರೀ ಕಾಲೇಜಿನ ನೂರಾರು ವಿದ್ಯಾರ್ಥಿಗಳು, ಅರಣ್ಯ ಇಲಾಖೆ ಸಿಬ್ಬಂದಿ, ಹುಲಿ ವೇಷಧಾರಿಗಳ ಕುಣಿತ, ವನ್ಯಪ್ರಾಣಿಗಳ ಸಂರಕ್ಷಣೆ ಕುರಿತ ಸ್ತಬ್ದ ಚಿತ್ರದೊಂದಿಗೆ ಕೈಯಲ್ಲಿ ಅರಣ್ಯ, ವನ್ಯಜೀವಿ ಸಂರಕ್ಷಣೆ ಕುರಿತಾದ ಭಿತ್ತಿಫಲಕ ಹಿಡಿದು ಜಾಥಾ ಮೂಲಕ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು.

ಈ ವೇಳೆ ಎಸಿಎಫ್‌ಗಳಾದ ಮಹದೇವಯ್ಯ, ಪ್ರಮುಲ್ಲ ಶೆಟ್ಟಿ, ಲಕ್ಷ್ಮಿಕಾಂತ, ಆರ್‌ಎಫ್‌ಓಗಳಾದ ಹರಿ ಪ್ರಸಾದ್, ಪದ್ಮಶ್ರೀ, ನಂದಕುಮಾರ್, ಡಿಆರ್‌ಎಫ್ ಓಗಳಾದ ಮಲ್ಲಿಕಾರ್ಜುನ್, ಚಂದ್ರಹಾಸ, ಮಂಜುನಾಥ್, ಪಾರ್ವತಿ, ಸಂಪತ್, ಪ್ರಸನ್ನ, ಮಂಜುನಾಥ್, ಸಾಮಿಲ್ ಮಾಲೀಕರ ಸಂಘದ ಅಲ್ತಾಫ್ ಅಹಮದ್ ಇತರರಿದ್ದರು.

ನಾಳೆ ರಾಜೇಂದ್ರ ಶ್ರೀಗಳ 'ಶತೋತ್ತರ ದಶಮಾನೋತ್ಸವ' ಕಾರ್ಯಕ್ರಮ


ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಲಾಯಿತು.

ತಿ.ನರಸೀಪುರ, ಅ.6– ಜಗದ್ಗುರು ಡಾ.ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸೇವಾ ಪ್ರತಿಷ್ಠಾನದಿಂದ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 'ಶತೋತ್ತರ ದಶಮಾನೋತ್ಸವ' ಕಾರ್ಯಕ್ರಮ ಪಟ್ಟಣದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ ಎಂದು ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಹಾಗೂ ವೀರಶೈವ ಲಿಂಗಾಯತ ಸಮಾಜದ ಮುಖಂಡ ಬೆನಕನಹಳ್ಳಿ ಎಂ.ಶಿವಮಲ್ಲಪ್ಪ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.8 ರಂದು ಬೆಳಗ್ಗೆ 9.30ಕ್ಕೆ ಪಟ್ಟಣದ ಖಾಸಗಿ ಬಸ್ ನಿಲ್ದಾಣದಿಂದ ಆರಂಭವಾಗುವ ಶ್ರೀರಾಜೇಂದ್ರ ಸ್ವಾಮಿಗಳ ಬೆಳ್ಳಿ ವಿಗ್ರಹದ ಮೆರವಣಿಗೆ ವಿದ್ಯೋದಯ ಕಾಲೇಜು ಸಭಾಂಗಣಕ್ಕೆ ತಲುಪಲಿದ್ದು, ನಂತರ ವೇದಿಕೆ ಕಾರ್ಯಕ್ರಮ ಆರಂಭವಾಗಲಿದೆ ಎಂದರು.

ಶ್ರೀಮಠದ ಗುರು ಪರಂಪರೆಯ ಎಲ್ಲಾ ಪೀಠಾಧಿಪತಿಗಳು ಸಾಧಿಸಿದ ಧಾರ್ಮಿಕ ಮತ್ತು ಸಾಮಾಜಿಕ ಸೇವೆಯ ಸಾಕಾರ ರೂಪವಾಗಿ ಡಾ.ರಾಜೇಂದ್ರ ಶ್ರೀಗಳು ಧರ್ಮದ ತಳಹದಿಯ ಮೇಲೆ ಸಮಾಜ ರೂಪಿತವಾಗಬೇಕೆಂಬ ಕನಸನ್ನು ನನಸಾಗಿಸಿದವರು. ಅಂತಹ ಜಗದ್ಗುರುಗಳ 110ನೇ ಜಯಂತಿಯನ್ನು ವಿಜೃಂಭಣೆಯಿಂದ ನಡೆಸಲು ಪ್ರತಿಷ್ಠಾನ ಮುಂದಾಗಿದೆ. ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ತುಮಕೂರು ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ವಹಿಸಲಿದ್ದು, ವಾಟಾಳು ಮಠದ ಮಠಾಧ್ಯಕ್ಷ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಪಾಂಡುವಟ್ಟಿ ಮತ್ತು ಕಮ್ಮತಹಳ್ಳಿ ಮಠಾಧ್ಯಕ್ಷ ಗುರುಮಹಾಸ್ವಾಮಿಗಳು ಭಾಗವಹಿಸಲಿದ್ದಾರೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಸುನೀಲ್ ಬೋಸ್, ಶಾಸಕರಾದ ಗಣೇಶ್ ಪ್ರಸಾದ್, ಶ್ರೀವತ್ಸ ಮುಖ್ಯ ಅತಿಥಿ ಆಗಮಿಸಲಿದ್ದು, ಗ್ರಾಮ ವಿದ್ಯೋದಯ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವ ಸ್ವಾಮಿ ಸಹಕಾರದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ದಿನೇಶ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ರೇಣುಕಾ ಪ್ರಸನ್ನ, ವೀರಶೈವ ಲಿಂಗಾಯತ ಯುವ ವೇದಿಕೆ ರಾಜ್ಯಾಧ್ಯಕ್ಷ ಪ್ರಶಾಂತ್ ಕಲ್ಲೂರು ಹಾಗೂ ಮೈಸೂರು ಕಿಡ್ನಿ ಫೌಂಡೇಶನ್ ಮುಖ್ಯಸ್ಥ ಕೃಷ್ಣೇಗೌಡರನ್ನು ಸನ್ಮಾನಿಸಲಾಗುತ್ತಿದೆ. ಮದ್ದಾರಲಿಂಗಯ್ಯನ ಹುಂಡಿ ವಿರಕ್ತ ಮಠದ ಗೌರಿಶಂಕರಸ್ವಾಮೀಜಿ, ಮಾಡ್ರಹಳ್ಳಿ ಪಟ್ಟದ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಹಲವಾರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ನೆರಗ್ಯಾತನಹಳ್ಳಿ ವಿರಕ್ತ ಮಠದ ಇಮ್ಮಡಿ ಶಿವಕುಮಾರ ಸ್ವಾಮೀಜಿ, ಸಿದ್ದರಹಳ್ಳಿ ಪಾರಮಾರ್ಥಿಕ ಮಠದ ಮಲ್ಲಿಕಾರ್ಜುನ ಸ್ವಾಮೀಜಿ ಸೇರಿದಂತೆ ತಾಲೂಕಿನ ವಿವಿಧ ಮಠಗಳ ಹರ ಗುರು ಚರ ಮೂರ್ತಿಗಳು ಭಾಗವಹಿಸಲಿದ್ದು, ಕಾರ್ಯಕ್ರ ಮಕ್ಕೆ ತಾಲೂಕಿನ ಎಲ್ಲಾ ಹಿರಿಯ ಮುಖಂಡರು, ಸಂಘ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ರಾಜಕೀಯ ಪಕ್ಷಗಳ ಮುಖಂಡರು, ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಶಿವಕುಮಾರ ಸ್ವಾಮಿ ಟ್ರಸ್ಟ್ ಅಧ್ಯಕ್ಷ ನಿಂಗಪ್ಪ, ವೀರಶೈವ ಮಹಾಸಭಾ ಕೋಶಾಧ್ಯಕ್ಷ ನಂಜುಂಡಸ್ವಾಮಿ, ಮುಖಂಡ ಮಾಯಪ್ಪ, ಜೆಎಸ್‌ಎಸ್ ಯೋಗೀಶ್ ಹಾಜರಿದ್ದರು.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಣೆ



ಸಾಲಿಗ್ರಾಮ, ಅ.6– ಪಟ್ಟಣದ ಎಸ್‌ಎಲ್‌ಆರ್ ಕಲ್ಯಾಣ ಮಂಟಪದಲ್ಲಿ ದಿ.ಡಾ.ಅಖಿಲೇಶ್ ಎಂ.ಗೌಡರ 30ನೇ ಹುಟ್ಟುಹಬ್ಬ ಹಾಗೂ ಮೊದಲ ವರ್ಷದ ಸ್ಮರಣೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ವೈದ್ಯಕೀಯ, ದಂತ ವೈದ್ಯಕೀಯ, ಪಶು ವೈದ್ಯಕೀಯ ಪದವಿಗೆ ಉಚಿತ ಪ್ರವೇಶ ಪಡೆದ ವಿದ್ಯಾರ್ಥಿಗಳು ಹಾಗೂ ತಾಲೂಕಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಪ್ರತಿಭಾ ಪುರಸ್ಕಾರ ವಿತರಿಸಿದರು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀಸೋಮೇಶ್ವರನಾಥ ಸ್ವಾಮೀಜಿ, ಎಂಎಲ್‌ಸಿ ಮಂಜೇಗೌಡ, ಜಿಪಂ ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್, ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ, ಕಸಾಪ ಅಧ್ಯಕ್ಷ ಮಧುಚಂದ್ರ, ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಳಿ ಸೋಮಶೇಖರ್, ಚಾಮರಾಜನಗರ ಎಡಿಸಿ ಜವರೇಗೌಡ, ರಾಜ್ಯ ಆರ್‌ಟಿಜಿ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್,ಮುಖಂಡರಾದ ಎಸ್.ಪಿ.ಆನಂದ, ಗೋವಿಂದೇಗೌಡ, ನಟರಾಜ್, ಪ್ರಕಾಶ್, ಮಂಜುನಾಥ್, ಕುಚೇಲ, ಪೂರ್ಣಚಂದ್ರೇಗೌಡ, ಜಯರಾಂ, ಹರೀಶ್, ಲೋಕೇಶ್, ನಾಗೇಂದ್ರ, ಪಾಪಣ್ಣ, ಡೈರಿ ಮಹೇಶ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ರಾಜ್ಯ ದಮನಿತ ಸಮಾಜಗಳ ಸಮಾನ ಮನಸ್ಕರ ವೇದಿಕೆ ಅಸ್ತಿತ್ವಕ್ಕೆ

ಉಪ್ಪಾರದ ಸಮಾಜದ ಹಿರಿಯ ನಾಯಕ ಜಿ.ಎಂ.ಗಾಡ್ಕರ್


ವೇದಿಕೆ ಸಂಚಾಲಕರು ಮತ್ತು ಸಲಹೆಗಾರರ ಸಭೆ ನಡೆಯಿತು

ತಿ.ನರಸೀಪುರ, ಅ.6– ದಮನಿತ ಸಮುದಾಯಗಳ ಧ್ವನಿಯಾಗಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕೆನ್ನುವ ಸದುದ್ದೇಶದಿಂದ ನೂತನವಾಗಿ ಕರ್ನಾಟಕ ರಾಜ್ಯ ದಮನಿತ ಸಮಾಜಗಳ ಸಮಾನ ಮನಸ್ಕರ ವೇದಿಕೆ ಅಸ್ತಿತ್ವಕ್ಕೆ ತರಲಾಗಿದೆ ಎಂದು ಉಪ್ಪಾರದ ಸಮಾಜದ ಹಿರಿಯ ನಾಯಕ ಜಿ.ಎಂ.ಗಾಡ್ಕರ್ ತಿಳಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ವೇದಿಕೆ ಸಂಚಾಲಕರು ಮತ್ತು ಸಲಹೆಗಾರರ ಸಭೆಯಲ್ಲಿ ಮಾತನಾಡಿದ ಅವರು, ಹಿಂದುಳಿದ ಸಣ್ಣ ಮತ್ತು ಅತೀ ಸಣ್ಣ ಸಮುದಾಯಗಳಲ್ಲಿ ಸಾಕಷ್ಟು ಸಮಸ್ಯೆಗಳು ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿವೆ. ಆದರೆ ಯಾವುದೇ ಸರ್ಕಾರಗಳು ಅದನ್ನು ಬಗೆಹರಿಸುವ ಪ್ರಯತ್ನ ಮಾಡದಿರುವುದು ವಿಪರ್ಯಾಸ. ಆದ್ದರಿಂದ ದಮನಿತ ಸಮಾಜವನ್ನು ಸಂಘಟಿಸಿ ಜನಶಕ್ತಿಯಾಗಿ ಪರಿವರ್ತನೆ ಮಾಡಿ ಹೋರಾಟ ರೂಪಿಸುವಂತಹ ಸಂಘಟನೆ ಕಟ್ಟೋಣ ಎಂದರು.

ರಾಜ್ಯ ನಾಯಕರ ಯುವಸೇನೆ ರಾಜ್ಯಾಧ್ಯಕ್ಷ ಮತ್ತು ಪ್ರಧಾನ ಸಂಚಾಲಕ ದೇವರಾಜ್ ಟಿ.ಕಾಟೂರು ಮಾತನಾಡಿ, ದಮನಿತ ಸಮಾಜಗಳ ಸಮಾನ ಮನಸ್ಕರ ವೇದಿಕೆ ಯಾವುದೇ ರಾಜಕೀಯ ಪಕ್ಷ ಅಥವಾ ಯಾವುದೇ ರಾಜಕೀಯ ವ್ಯಕ್ತಿಗಳ ವಿರುದ್ಧ ಕಟ್ಟಿರುವ ಸಂಘಟನೆಯಲ್ಲ. ಇದು ಪ್ರಸ್ತುತ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡುವ ಸಂಘಟನೆಯಾಗಿದ್ದು, ಡಾ.ಬಿ. ಆರ್.ಅಂಬೇಡ್ಕರ್ ಅವರ ಆಶಯವಾದ ಸಮ ಸಮಾಜ ನಿರ್ಮಾಣ ಮನೋಭಾವವುಳ್ಳ ಪ್ರತಿಯೊಬ್ಬರೂ ಈ ಸಂಘಟನೆ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಮೈಸೂರು ವಿಭಾಗದ 5 ಜಿಲ್ಲೆಯಲ್ಲಿ ದಮನಿತ ಸಮಾಜಗಳ ಸಭೆ ನಡೆಸಿ ಪ್ರಾಮಾಣಿಕವಾಗಿ ಹೋರಾಡುವ ಹಿನ್ನಲೆಯುಳ್ಳ ಯುವ ಹೋರಾಟಗಾರರನ್ನು ಗುರುತಿಸಿ ಜಿಲ್ಲಾ, ತಾಲೂಕು ಮತ್ತು ಹೋಬಳಿ ಸಂಚಾಲಕರನ್ನು ಆಯ್ಕೆ ಮಾಡಿ ನಂತರ ಮೈಸೂರಿನಲ್ಲಿ ವಿಭಾಗ ಮಟ್ಟದ ಜಾಗೃತಿ ಮತ್ತು ಸಂಘಟನೆ ಸಭೆ ಮಾಡಬೇಕೆಂದು ತಿಳಿಸಿದರು.

ಹಿರಿಯ ದಲಿತ ಮುಖಂಡ ಜಿ.ಎಂ. ಅಂದಾನಿ ಮಾತನಾಡಿ, ತಮ್ಮ ಸ್ವಂತ ಶಕ್ತಿಯಿಂದ ಹೋರಾಟ ಮಾಡಿ ಬೆಳೆದು ಬಂದವರು ಹೊಸ ವೇದಿಕೆ ಕಟ್ಟಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಹೊಸಕೋಟೆ ಕುಮಾರ್ ಮಾತನಾಡಿ, ಭ್ರಷ್ಟಾಚಾರ, ಶೋಷಣೆ, ದಮನಿತ ಸಮಾಜಗಳ ಮೇಲೆ ಆಗುವ ದಬ್ಬಾಳಿಕೆ, ದೌರ್ಜನ್ಯ ವಿರುದ್ಧ ಹೋರಾಟ ಮಾಡುವಂತ ಬಲಿಷ್ಠ ಸಂಘಟನೆಯಾಗಿ ಬೆಳೆಯಲಿ. ಇದಕ್ಕೆ ನನ್ನ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಗೌರವ ಸಲಹೆಗಾರ ಜಯರಾಜ್ ಹೆಗ್ಡೆ ಮಾತನಾಡಿದರು. ಇದೇ ವೇಳೆ ಶತಮಾನಗಳಿಂದ ದಲಿತ ಮತ್ತು ಶೋಷಿತರ ಮೇಲಿನ ದೌರ್ಜನ್ಯ, ಅಸಂಘಟನೆ, ಶೈಕ್ಷಣಿಕವಾಗಿ ಹಿಂದುಳಿಯುವಿಕೆ, ಸಾಮಾಜಿಕ ದೌರ್ಜನ್ಯಗಳ ಬಗ್ಗೆ ಕೂಲಂಕಷವಾಗಿ ವಿಚಾರಗಳನ್ನು ಮಂಡಿಸಿದರು.

ಮಡಿವಾಳ ಸಮಾಜದ ಜಿಲ್ಲಾಧ್ಯಕ್ಷ ಮತ್ತು ಸಂಚಾಲಕ ಕಾರ್ಯದರ್ಶಿ ಸತ್ಯನಾರಾಯಣ್, ಜೋಗಿ ಮಹೇಶ್, ಕುಂಬಾರ ಸಮಾಜದ ಮಹೇಶ್, ಉಪ್ಪಾರ ಸಮಾಜದ ತಗಡೂರು ಕೃಷ್ಣ, ಜಿಲ್ಲಾ ಅಲೆಮಾರಿ ಸಂಘದ ಅಧ್ಯಕ್ಷ ರಾಮಕೃಷ್ಣ, ಸೋಲಿಗ ಸಮಾಜದ ಶಂಕರ್, ನಾಯಕ ಸಮಾಜದ ಟಿ.ಎಲ್. ಸ್ವಾಮಿ, ಶಿಳ್ಳೆ ಕ್ಯಾತ ಜನಾಂಗದ ಮಂಜುನಾಥ್, ಅಕ್ಮಲ್ ಪಾಷ ಮತ್ತಿತರರಿದ್ದರು.

ಸುಪ್ರೀಂಕೋರ್ಟ್‌ನಲ್ಲಿ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮೇಲೆ 'ಶೂ ಎಸೆತ'ಕ್ಕೆ ಯತ್ನ

ವಕೀಲ ರಾಕೇಶ್ ಕಿಶೋರ್ ಅಮಾನತುಪಡಿಸಿದ ಬಾರ್ ಕೌನ್ಸಿಲ್!

ನವದೆಹಲಿ: ಕೋರ್ಟ್ ಕಲಾಪದ ವೇಳೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮೇಲೆ ಶೂ ಎಸೆಯಲು ಯತ್ನಿಸಿದ ಆಘಾತಕಾರಿ ಘಟನೆ ನಂತರ ಹಿರಿಯ ವಕೀಲ ರಾಕೇಶ್ ಕಿಶೋರ್ ಅವರನ್ನು ಅಭ್ಯಾಸದಿಂದ ಬಾರ್ ಕೌನ್ಸಿಲ್ ಆಫ್ ಇಂಡಿಯಾ ವಜಾಗೊಳಿಸಿದೆ. ರಾಷ್ಟ್ರದ ಅತ್ಯುನ್ನತ ನ್ಯಾಯಾಂಗ ಪೀಠದ ಘನತೆಗೆ ಧಕ್ಕೆ ತರುವ ವಕೀಲರ ದುಷ್ಕೃತ್ಯದ ಗಂಭೀರ ಕೃತ್ಯಕ್ಕೆ ಪ್ರತಿಕ್ರಿಯೆಯಾಗಿ ಶಿಸ್ತು ಕ್ರಮ ತೆಗೆದುಕೊಳ್ಳಲಾಗಿದೆ.

ಸೋಮವಾರ ಬೆಳಗ್ಗೆ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರು ಕೋರ್ಟ್ ರೂಂ ನಂ.1ರಲ್ಲಿ 71 ವರ್ಷದ ವಕೀಲ ರಾಕೇಶ್ ಕಿಶೋರ್ ಗಲಾಟೆ ಮಾಡಿದ್ದು, ವೇದಿಕೆಯ ಬಳಿಗೆ ಬಂದು ತಮ್ಮ ಶೂ ತೆಗೆದು ಮುಖ್ಯ ನ್ಯಾಯಮೂರ್ತಿಯತ್ತ ಎಸೆಯಲು ಯತ್ನಿಸಿದ್ದಾರೆನ್ನಲಾಗಿದೆ.

ನ್ಯಾಯಾಲಯದಲ್ಲಿ ಹಾಜರಿದ್ದ ಭದ್ರತಾ ಸಿಬ್ಬಂದಿ ಅವರನ್ನು ಬಂಧಿಸುತ್ತಿದ್ದಂತೆ, 'ಸನಾತನ ಧರ್ಮದ ಅವಮಾನವನ್ನು ನಾವು ಸಹಿಸುವುದಿಲ್ಲ' ಎಂದು ಕಿಶೋರ್ ಕೂಗುವುದು ಕೇಳಿಸಿತು. ತಕ್ಷಣ ಅವರನ್ನು ನ್ಯಾಯಾಲಯದ ಕೊಠಡಿಯಿಂದ ಹೊರಕ್ಕೆ ಕರೆದೊಯ್ದು ಸುಪ್ರೀಂ ಕೋರ್ಟ್‌ನ ಭದ್ರತಾ ಘಟಕಕ್ಕೆ ಹಸ್ತಾಂತರಿಸಲಾಯಿತು. ಅಡೆತಡೆಗಳ ಹೊರತಾಗಿಯೂ, ಸಿಜೆಐ ಗವಾಯಿ ದಿನದ ಕಲಾಪವನ್ನು ಮುಂದುವರೆಸಿದರು. 'ಇದರಿಂದ ವಿಚಲಿತರಾಗಬೇಡಿ. ನಾವು ವಿಚಲಿತರಾಗುವುದಿಲ್ಲ. ಈ ವಿಷಯಗಳು ನನ್ನ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಅವರು ಹೇಳಿದರು.

ಮಧ್ಯಪ್ರದೇಶದ ಯುನೆಸ್ಕೋ ವಿಶ್ವ ಪರಂಪರೆಗೆ ಸೇರ್ಪಡೆಯಾಗಿರುವ ಖಜುರಾಹೊ ದೇವಾಲಯ ಸಂಕೀರ್ಣದ ಭಾಗವಾಗಿರುವ ಜವಾರಿ ದೇವಾಲಯದಲ್ಲಿ 7 ಅಡಿ ಎತ್ತರದ ವಿಷ್ಣುವಿನ ವಿಗ್ರಹವನ್ನು ಪುನರ್ನಿರ್ಮಿಸಲು ಮತ್ತು ಮರುಸ್ಥಾಪಿಸಲು ನಿರ್ದೇಶನಗಳನ್ನು ಕೋರಿ ಸಲ್ಲಿಸಲಾದ ಅರ್ಜಿಯನ್ನು ಸಿಜೆಐ ಗವಾಯಿ ನೇತೃತ್ವದ ಪೀಠ ವಜಾಗೊಳಿಸಿತ್ತು. ಈ ಪ್ರಕರಣ ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಮೀಕ್ಷೆಯ ವ್ಯಾಪ್ತಿಗೆ ಬರುತ್ತದೆಯೇ ಹೊರತು ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ. ಏನೇ ಮಾಡುವುದಿದ್ದರೂ ಎಎಸ್ಐ ಅನುಮತಿ ನೀಡಬೇಕಾಗಿದೆ. ಕ್ಷಮಿಸಿ ಎಂದು ತಿಳಿಸಿದ್ದರು.

ಸಂಪೂರ್ಣವಾಗಿ ಪ್ರಚಾರ ಹಿತಾಸಕ್ತಿಗಾಗಿ ಈ ಅರ್ಜಿಯನ್ನು ನೀವು ಸಲ್ಲಿಕೆ ಮಾಡಿದ್ದೀರಿ. ಹೋಗಿ ದೇವರಲ್ಲೇ ಏನಾದರೂ ಮಾಡುವಂತೆ ಬೇಡಿಕೊಳ್ಳಿ. ನೀವು ವಿಷ್ಣುವಿನ ಕಟ್ಟಾ ಭಕ್ತ ಎಂದು ಹೇಳುತ್ತೀರಿ. ಆದ್ದರಿಂದ ಈಗಲೇ ಹೋಗಿ ಪ್ರಾರ್ಥಿಸಿ ಮತ್ತು ಸ್ವಲ್ಪ ಧ್ಯಾನ ಮಾಡಿ ಎಂದು ಸಿಜೆಐ ಗವಾಯಿ ಹೇಳಿದ್ದರು. ಇದು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದ್ದು, ವ್ಯಾಪಕ ಪ್ರತಿಕ್ರಿಯೆಗೆ ಕಾರಣವಾಗಿತ್ತು. ಬಳಿಕ ಬಹಿರಂಗ ನ್ಯಾಯಾಲಯದಲ್ಲಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ ಸಿಜೆಐ, ನನ್ನ ಹೇಳಿಕೆಗಳನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ. ನಾನು ಎಲ್ಲಾ ಧರ್ಮಗಳನ್ನು ಗೌರವಿಸುತ್ತೇನೆ ಎಂದು ಹೇಳಿದ್ದಾರೆ.

ಸಿಜೆಐ ಅವರ ವಿರುದ್ಧ ಅನುಚಿತವಾಗಿ ವರ್ತನೆ ಹಿನ್ನೆಲೆಯಲ್ಲಿ ಬಾರ್ ಕೌನ್ಸಿಲ್ ಆಫ್ ಇಂಡಿಯಾ ಶಿಸ್ತಿನ ಕ್ರಮಗಳನ್ನು ಕೈಗೊಂಡಿದೆ. ಕಿಶೋರ್ ಅವರು ಅನಿರ್ದಿಷ್ಟಾವಧಿಯವರೆಗೆ ಕಾನೂನು ಅಭ್ಯಾಸದಿಂದ ವಜಾಗೊಳಿಸಲಾಗಿದೆ. ಈ ಕೃತ್ಯವನ್ನು ಕೌನ್ಸಿಲ್ ಖಂಡಿಸಿದ್ದು, ಇಂತಹ ನಡವಳಿಕೆಯು ವಕೀಲ ವೃತ್ತಿಯ ಸದಸ್ಯರಿಗೆ ತಕ್ಕದಲ್ಲ ಮತ್ತು ಇಡೀ ಭ್ರಾತೃತ್ವಕ್ಕೆ ಅಪಖ್ಯಾತಿ ತರುತ್ತದೆ ಎಂದು ಒತ್ತಿ ಹೇಳಿದೆ. ಇದನ್ನು ಅನಗತ್ಯ ಮತ್ತು ಅಶಿಸ್ತಿನ ಮತ್ತು ನ್ಯಾಯಾಂಗ ಸ್ವಾತಂತ್ರ್ಯದ ಮೇಲಿನ ದಾಳಿ ಎಂದು ಸುಪ್ರೀಂಕೋರ್ಟ್ ಅಡ್ವೊಕೇಟ್ಸ್-ಆನ್-ರೆಕಾರ್ಡ್ ಅಸೋಸಿಯೇಷನ್ (ಎಸ್‌ಸಿಎಒಆರ್‌ಎ) ಖಂಡಿಸಿದೆ.


ಬಿ.ಆರ್.ಗವಾಯಿ


ರಾಕೇಶ್ ಕಿಶೋರ್

"ಇದು ಕೇವಲ ಅವರ ಮೇಲಿನ ದಾಳಿಯಷ್ಟೇ ಅಲ್ಲ, ಸಂವಿಧಾನದ ಮೇಲಿನ ದಾಳಿಯಾಗಿದೆ. ಖಂಡಿಸಲು ಯಾವುದೇ ಪದಗಳು ಸಾಕಾಗುವುದಿಲ್ಲ. ಮುಖ್ಯ ನ್ಯಾಯಮೂರ್ತಿ ಗವಾಯಿ ಅವರು ತುಂಬಾ ಕರುಣಾಮಯಿಯಾಗಿದ್ದಾರೆ. ಆದರೆ ರಾಷ್ಟ್ರವು ತೀವ್ರ ದುಃಖ ಮತ್ತು ಆಕ್ರೋಶದ ಭಾವನೆಯೊಂದಿಗೆ ಒಗ್ಗಟ್ಟಿನಿಂದ ಅವರೊಂದಿಗೆ ನಿಲ್ಲಬೇಕು.

- ಸೋನಿಯಾ ಗಾಂಧಿ, ಕಾಂಗ್ರೆಸ್ ನಾಯಕಿ

ಪ್ರತೀ ಭಾರತೀಯನನ್ನು ಕೆರಳಿಸಿದೆ: ಮೋದಿ ತೀವ್ರ ಖಂಡನೆ

ನವದೆಹಲಿ: ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆತ ಘಟನೆ ದೇಶಾದ್ಯಂತ ತೀವ್ರ ಚರ್ಚೆ ಹಾಗೂ ಆಕ್ರೋಶಕ್ಕೆ ಕಾರಣವಾಗಿರುವಂತೆಯೇ ಪ್ರಧಾನಿ ನರೇಂದ್ರ ಮೋದಿ ಧ್ವನಿಗೂಡಿಸಿದ್ದಾರೆ. ಈ ಘಟನೆ ಹಿನ್ನೆಲೆಯಲ್ಲಿ ಬಿ.ಆರ್.ಗವಾಯಿ ಜೊತೆಗೆ ಮಾತನಾಡಿರುವುದಾಗಿ ಪ್ರಧಾನಿ ತಿಳಿಸಿದ್ದಾರೆ.

ಸುಪ್ರೀಂಕೋರ್ಟ್‌ನಲ್ಲಿ ಇಂದು ಬೆಳಗ್ಗೆ ನಡೆದ ಘಟನೆ ಎಲ್ಲಾ ಭಾರತೀಯರನ್ನು ಕೆರಳಿಸಿದೆ. ನಮ್ಮ ಸಮಾಜದಲ್ಲಿ ಇಂತಹ ಖಂಡನೀಯ ಕೃತ್ಯಗಳು ನಡೆಯಬಾರದು. ಇದು ಸಂಪೂರ್ಣ ಖಂಡನೀಯವಾದದ್ದು ಎಂದಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ನ್ಯಾಯಮೂರ್ತಿ ಗವಾಯಿ ಅವರು ತೋರಿದ ಶಾಂತತೆಯನ್ನು ನಾನು ಮೆಚ್ಚಿದ್ದೇನೆ. ಇದು ನ್ಯಾಯದ ಮೌಲ್ಯಗಳಿಗೆ ಮತ್ತು ನಮ್ಮ ಸಂವಿಧಾನದ ಆತ್ಮವನ್ನು ಬಲಪಡಿಸುವ ಅವರ ಬದ್ಧತೆಯನ್ನು ಎತ್ತಿ ತೋರಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಸಿಜೆಐ ಅವರತ್ತ ಶೂ ಎಸೆಯುವ ಯತ್ನ ಖಂಡಿಸಿ ಗಂಗೋತ್ರಿಯಲ್ಲಿ ಪ್ರತಿಭಟನೆ

ಮೈಸೂರು,ಅ.6(ಪಿಎಂ)- ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್.ಗವಾಯಿ ಅವರತ್ತ ಸುಪ್ರೀಂಕೋರ್ಟ್‌ನಲ್ಲೇ ವಕೀಲನೊಬ್ಬ ಶೂ ಎಸೆಯುವ ಯತ್ನ ಖಂಡಿಸಿ ಮೈಸೂರು ವಿವಿ ದಲಿತ ವಿದ್ಯಾರ್ಥಿ ಒಕ್ಕೂಟದ ವತಿಯಿಂದ ಪಂಜಿನ ಮೆರವಣಿಗೆ ನಡೆಸುವ ಮೂಲಕ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಮಾನಸ ಗಂಗೋತ್ರಿಯ ಗ್ರಂಥಾಲಯದ ಎದುರಿನ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಜಮಾಯಿಸಿದ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು, ಕೃತ್ಯ ಎಸಗಿರುವ ಆರೋಪಿ ರಾಕೇಶ್ ಕಿಶೋರ್ ಭಾವಚಿತ್ರಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಆರೋಪಿಯನ್ನು ಬಂಧಿಸಿ, ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ಆರೋಪಿ ವಕೀಲ ತನ್ನ ದುರ್ವರ್ತನೆಯಿಂದ ಸಂವಿಧಾನಕ್ಕೆ ಅಪಚಾರವೆಸಗಿದ್ದಾನೆ. ನ್ಯಾಯ ದೇಗುಲದಲ್ಲಿ ಅನುಚಿತವಾಗಿ ವರ್ತಿಸಿದ ಆತನನ್ನು ಬಂಧಿಸಿ, ಕಾನೂನಾತ್ಮಕವಾಗಿ ಶಿಕ್ಷೆಗೆ ಒಳಪಡಿಸಬೇಕು. ಇಲ್ಲವಾದರೆ ದೇಶದಾದ್ಯಂತ ಹೋರಾಟ ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮಾನಸ ಗಂಗೋತ್ರಿಯ ಮುಖ್ಯದ್ವಾರದಲ್ಲಿರುವ ರಾಷ್ಟ್ರಕವಿ ಕುವೆಂಪು ಅವರ ಪ್ರತಿಮೆವರೆಗೆ ಪಂಜಿನ ಮೆರವಣಿಗೆ ನಡೆಸಲಾಯಿತು. ಒಕ್ಕೂಟದ ಅಧ್ಯಕ್ಷ ಪುನೀತ್ ಆಲನಹಳ್ಳಿ, ಮೈಸೂರು ವಿವಿ ಸಂಶೋಧಕರ ಸಂಘದ ಮಾಜಿ ಅಧ್ಯಕ್ಷ ಶಿವಶಂಕರ್, ಮರಳ್ಳಿ ಮಹೇಶ್, ರಾಜೇಶ್ ಚಾಕಹಳ್ಳಿ, ಎ.ಆರ್.ರವಿಕುಮಾರ್, ನವೀನ್, ಲೋಕೇಶ್, ವಕೀಲ ಗಿರೀಶ್ ಬೆಂಡರವಾಡಿ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.


ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ವಿದ್ಯಾರ್ಥಿಗಳು ಪಂಜಿನ ಮೆರವಣಿಗೆ ನಡೆಸಿ ಪ್ರತಿಭಟಿಸಿದರು.

ಸಿಜೆಐ ಮೇಲೆ ಶೂ ಎಸೆಯುವ ಯತ್ನ: ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಸಿಎಂ ಆಗ್ರಹ

ಬೆಂಗಳೂರು: ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಾಗಿರುವ ಬಿ.ಆರ್.ಗವಾಯಿ ಅವರಿಗೆ ವಕೀಲನೊಬ್ಬ ಶೂ ಎಸೆಯಲೆತ್ನಿಸಿ ಅವಮಾನ ಮಾಡಿರುವ ಘಟನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಬರೆದುಕೊಂಡಿರುವ ಸಿಎಂ, 'ಈ ಘಟನೆಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಮುಖ್ಯನ್ಯಾಯಮೂರ್ತಿಗಳು ಹಾಗೂ ನ್ಯಾಯಾಲಯಕ್ಕೆ ಅವಮಾನ ಮಾಡಿರುವ ಕಿಡಿಗೇಡಿ ವಕೀಲನನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ದಲಿತ ಸಮುದಾಯಕ್ಕೆ ಸೇರಿರುವ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರು ಸಾಮಾಜಿಕ ಪ್ರತಿರೋಧಗಳನ್ನು ಎದುರಿಸಿ ಅರ್ಹತೆ ಮತ್ತು ಸಾಧನೆ ಮೂಲಕ ಉನ್ನತ ಸ್ಥಾನಕ್ಕೇರಿದವರು. ಜಾತಿ ಮೂಲದ ಅಸಮಾನತೆ ಮತ್ತು ಅಸಹನೆ ಸಂವಿಧಾನ ಜಾರಿಗೆ ಬಂದ 75 ವರ್ಷಗಳ ನಂತರವೂ ಮನುವಾದಿಗಳ ಮನಸ್ಸಲ್ಲಿ ಭದ್ರವಾಗಿ ಉಳಿದುಕೊಂಡಿದೆ ಎನ್ನುವುದಕ್ಕೆ ಇಂದಿನ ಘಟನೆ ಸಾಕ್ಷಿಯಾಗಿದೆ ಎಂದಿದ್ದಾರೆ.

ಗೌರವಾನ್ವಿತ ಮುಖ್ಯನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಅವರು ಒಬ್ಬಂಟಿಯಲ್ಲ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲೆ ನಂಬಿಕೆ ಇಟ್ಟಿರುವ ಕೋಟ್ಯಂತರ ಜಾತ್ಯತೀತ ಮನಸ್ಸುಗಳು ಅವರ ಬೆಂಬಲಕ್ಕೆ ಇವೆ ಎನ್ನುವುದನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಮುಖ್ಯನ್ಯಾಯಮೂರ್ತಿಗಳು ಯಾವುದೇ ಪಕ್ಷ ಇಲ್ಲವೇ ಧರ್ಮಕ್ಕೆ ಸೇರಿದವರಲ್ಲ. ಈ ದೃಷ್ಟಿಯಿಂದ ದೇಶದ ಎಲ್ಲ ಜಾತಿ, ಧರ್ಮ ಮತ್ತು ಪಕ್ಷಗಳ ಜನರು ಸುಪ್ರೀಂ ಕೋರ್ಟ್‌ನಲ್ಲಿ ಇಂದು ನಡೆದಿರುವ ಘಟನೆಯನ್ನು ಒಕ್ಕೊರಲಿನಿಂದ ಖಂಡಿಸಬೇಕೆಂದು ಮನವಿ ಮಾಡಿದ್ದಾರೆ.

ಜಾತಿ ಮತ್ತು ಧರ್ಮದ ಹೆಸರಲ್ಲಿ ಸಮಾಜವನ್ನು ಒಡೆದುಹಾಕಿ, ಪರಸ್ಪರ ದ್ವೇಷ ಮತ್ತು ಅಸಹನೆಯನ್ನು ಹುಟ್ಟುಹಾಕಿರುವ ಕಾರಣಕ್ಕಾಗಿಯೇ ರಾಕೇಶ್ ಕಿಶೋರ್‌ನಂತಹ ಮನುವಾದಿ ಮನಸ್ಸುಗಳು ಸಮಾಜದಲ್ಲಿ ಹುಟ್ಟಿಕೊಂಡಿವೆ ಎನ್ನುವುದನ್ನು ನಾವು ಮರೆಯಬಾರದು. ನಾಥೂರಾವ್ ಗೋಡ್ಸೆಯಂತಹ ಒಬ್ಬ ಕೊಲೆಗಡುಕನನ್ನು ದೇಶಪ್ರೇಮಿ ಎಂದು ಮೆರೆಸಲು ಹೊರಟಿರುವ ರೀತಿಯಲ್ಲಿಯೇ ಕೆಲವು ಪುಂಡರು ವಕೀಲನ ಕುಕೃತ್ಯವನ್ನು ಸಂಭ್ರಮಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಇಂತಹವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಬೇಕಾದ ಅಗತ್ಯ ಇದೆ ಎಂದು ಹೇಳಿದ್ದಾರೆ.

27 ಡಿವೈಎಸ್ಪಿ, 131 ಪೊಲೀಸ್ ಇನ್‌ಸ್ಪೆಕ್ಟರ್ ವರ್ಗಾವರ್ಗಿ

ಬೆಂಗಳೂರು, ಅ. 6- ಇಪ್ಪತ್ತೇಳು ಡಿವೈಎಸ್ಪಿಗಳು ಹಾಗೂ 131 ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಮಂಡ್ಯ ಜಿಲ್ಲೆ ಮಳವಳ್ಳಿ ಉಪ ವಿಭಾಗದ ಡಿವೈಎಸ್ಪಿ ವಿ. ಕೃಷ್ಣಪ್ಪ ಅವರನ್ನು ಲೋಕಾಯುಕ್ತ(ಎಸ್‌ಐಟಿ)ಕ್ಕೆ ವರ್ಗಾವಣೆ ಮಾಡಿದ್ದು, ಅವರ ಸ್ಥಳಕ್ಕೆ ಕೊಪ್ಪಳ ಜಿಲ್ಲೆ ಸೆನ್‌ನಲ್ಲಿದ್ದ ಎಸ್.ಬಿ.ಯಶವಂತಕುಮಾರ್, ಹಾಸನ ಜಿಲ್ಲೆ ಹಾಸನ ಉಪ ವಿಭಾಗದ ಡಿವೈಎಸ್ಪಿ ಪಿ.ಕೆ. ಮುರಳೀಧರ ಅವರನ್ನು ಡಿಸಿಆರ್‌ಇಗೆ ವರ್ಗಾಯಿಸಿದ್ದು, ಅವರ ಸ್ಥಳಕ್ಕೆ ಸ್ಥಳ ವರ್ಗಾವಣೆಯಲ್ಲಿರುವ ಆರ್.ವಿ. ಗಂಗಾಧರಪ್ಪ ಅವರನ್ನು ವರ್ಗಾವಣೆ ಮಾಡಲಾಗಿದೆ. ಸಕಲೇಶಪುರ ಉಪ ವಿಭಾಗದ ಬಿ. ಪ್ರಮೋದ್‌ಕುಮಾರ್ ಅವರನ್ನು ಲೋಕಾಯುಕ್ತಕ್ಕೆ ವರ್ಗಾಯಿಸಿದ್ದು, ಅವರ ಸ್ಥಳಕ್ಕೆ ಲೋಕಾಯುಕ್ತದಲ್ಲಿದ್ದ ಟಿ.ಸಿ. ವೆಂಕಟೇಶ್ ಅವರನ್ನು ವರ್ಗಾವಣೆ ಮಾಡಲಾಗಿದೆ

ಪೊಲೀಸ್ ಇನ್ಸ್‌ಪೆಕ್ಟರ್: ಚಾಮರಾಜನಗರ ಸೈಬರ್ ಕ್ರೈಂ ಠಾಣೆಯ ಇನ್‌ಸ್ಪೆಕ್ಟರ್ ಎಸ್.ಎಲ್. ಸಾಗರ್ ಅವರನ್ನು ಸಂತೇಮರಹಳ್ಳಿ ವೃತ್ತಕ್ಕೆ, ಅಲ್ಲಿದ್ದ ಬಸವರಾಜು ಅವರನ್ನು ಡಿಸಿಆರ್‌ಇಎ ವರ್ಗಾವಣೆ ಮಾಡಲಾಗಿದೆ. ಬೇಗೂರು ವೃತ್ತದ ವಿ.ಸಿ. ವನರಾಜ ಅವರನ್ನು ಸಕಲೇಶಪುರ ಟೌನ್ ಪೊಲೀಸ್ ಠಾಣೆಗೆ, ಧಾರವಾಡ ನಗರ ಸೈಬರ್ ಕ್ರೈಂ ಠಾಣೆಯ ಬಸವನಗೌಡ ಕೆ. ಪಾಟೀಲ ಅವರನ್ನು ಸಕಲೇಶಪುರ ವೃತ್ತಕ್ಕೆ, ಅಲ್ಲಿದ್ದ ಕೆ.ಇ.ನಿರಂಜನಕುಮಾರ್ ಅವರನ್ನು ಚಿಕ್ಕಮಗಳೂರು ಡಿಎಸ್‌ಬಿಗೆ ವರ್ಗಾವಣೆ ಮಾಡಲಾಗಿದೆ.

ಸಕಲೇಶಪುರ ಟೌನ್ ಪೊಲೀಸ್ ಠಾಣೆಯ ಎಂ. ಜಗದೀಶ್ ಅವರನ್ನು ಚಾಮರಾಜನಗರ ಟೌನ್‌ಗೆ, ಅಲ್ಲಿದ್ದ ಎ.ಕೆ. ರಾಜೇಶ್ ಅವರನ್ನು, ಆಂತರಿಕ ಭದ್ರತಾ ವಿಭಾಗಕ್ಕೆ, ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾವಣೆ ಆದೇಶದಲ್ಲಿದ್ದ ಜಿ.ಎ.ಸ್. ಅನಿಲ್‌ಕುಮಾರ್ ಅವರನ್ನು ಕೆ.ಎಂ. ದೊಡ್ಡಿ ಠಾಣೆಗೆ, ಅಲ್ಲಿದ್ದ ಎಸ್. ಆನಂದ್ ಅವರನ್ನು ನಂಜನಗೂಡು ಗ್ರಾಮಾಂತರ ಠಾಣೆಗೆ, ಈ ಠಾಣೆಯಲ್ಲಿದ್ದ ಎಂ.ಸುನೀಲ್ ಕುಮಾರ್ ಅವರನ್ನು ಆಂತರಿಕ ಭದ್ರತಾ ವಿಭಾಗಕ್ಕೆ ವರ್ಗಾಯಿಸಲಾಗಿದೆ.

ಬೆಂಗಳೂರು ವಿಜಯನಗರ ಠಾಣೆಯ ಆರ್. ಹೇಮಂತ ಕುಮಾರ್ ಅವರನ್ನು, ನಾಗಮಂಗಲ ವೃತ್ತಕ್ಕೆ, ಅಲ್ಲಿದ್ದ ಕೆ.ಎಸ್. ನಿರಂಜನ್ ಅವರನ್ನು ಬೆಂಗಳೂರಿನ ವಿವಿಐಪಿ ಭದ್ರತಾ ವಿಭಾಗಕ್ಕೆ, ಬೆಂಗಳೂರು ನಗರಕ್ಕೆ ವರ್ಗಾವಣೆ ಆದೇಶದಲ್ಲಿರುವ ಟಿ.ಟಿ.ಕೃಷ್ಣ ಅವರನ್ನು ಮಂಡ್ಯ ಪಶ್ಚಿಮ ಠಾಣೆಗೆ, ಅಲ್ಲಿರುವ ವಿ. ನವೀನ್ ಸುಪರ್ಕರ್ ಅವರನ್ನು ಮಂಡ್ಯ ಟೌನ್‌ಗೆ, ಸಿಐಡಿಯಲ್ಲಿರುವ ಎನ್. ರವೀಂದ್ರ ಅವರನ್ನು ಕಿಕ್ಕೇರಿ ಠಾಣೆಗೆ, ಅಲ್ಲಿರುವ ಎನ್. ರೇವತಿ ಅವರನ್ನು ಗೃಹರಕ್ಷಕ ದಳಕ್ಕೆ, ಸಿಐಡಿಯಲ್ಲಿರುವ ನಾರಾಯಣಿ ಅವರನ್ನು ಮದ್ದೂರು ವೃತ್ತಕ್ಕೆ, ಅಲ್ಲಿರುವ ವೆಂಕಟೇಗೌಡ ಅವರನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿದೆ.

ಸಿರಾ ಟೌನ್‌ಠಾಣೆ ಎಸ್. ಮಂಜೇಗೌಡ ಅವರನ್ನು ಹಿರಿಸಾವೆ ವೃತ್ತಕ್ಕೆ ಅಲ್ಲಿರುವ ಎಸ್. ಸಂತೋಷ್ ಅವರನ್ನು ಕರ್ನಾಟಕ ಲೋಕಾಯುಕ್ತಕ್ಕೆ, ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾವಣೆ ಆದೇಶದಲ್ಲಿರುವ ಮೋಹಿತ್ ಸಹದೇವ್ ಅವರನ್ನು ಚಾಮರಾಜನಗರ ಜಿಲ್ಲೆ ಬೇಗೂರು ವೃತ್ತಕ್ಕೆ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಕೋಲ್ಡ್ರಿಫ್ ಸಿರಪ್ ಕರ್ನಾಟಕದಲ್ಲಿ ಸರಬರಾಜು ಆಗಿಲ್ಲ

ಕೆಲವು ಕೆಮ್ಮಿನ ಔಷಧಿಗಳ ಮೇಲೆ ನಿಗಾ ಇಡಲು ಸೂಚನೆ: ದಿನೇಶ್ ಗುಂಡೂರಾವ್



ಬೆಂಗಳೂರು: ಮಧ್ಯಪ್ರದೇಶ ಸಿರಪ್ ದುರಂತ ಪ್ರಕರಣದ ಬಳಿಕ ನಮ್ಮ ರಾಜ್ಯದಲ್ಲೂ ಕೂಡ ಈ ಬಗ್ಗೆ ಕ್ರಮ ವಹಿಸಲಾಗಿದೆ. ಔಷಧ ಮಾದರಿ ಪರೀಕ್ಷೆಯಲ್ಲಿ ರಾಜ್ಯ ನಂಬರ್ ಒನ್ ಇದೆ. ಈ ಕಾಫ್ ಸಿರಪ್ ನಮ್ಮ ರಾಜ್ಯದಲ್ಲಿ ಸರಬರಾಜು ಆಗಿಲ್ಲ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಮಧ್ಯಪ್ರದೇಶದ ಘಟನೆ ಅತ್ಯಂತ ಆಘಾತಕಾರಿ. ಮಕ್ಕಳಿಗೆ ಔಷಧ ಕೊಡುವಾಗ ಎಚ್ಚರಿಕೆ ವಹಿಸಬೇಕು. ಇಂದು ಈ ಬಗ್ಗೆ ಒಂದು ಮಾರ್ಗಸೂಚಿ ಕೂಡ ಬಿಡುಗಡೆ ಮಾಡುತ್ತೇವೆ. ಈ ಹಿಂದೆ ಆರೋಗ್ಯ ಸುರಕ್ಷತೆ ಬಗ್ಗೆ ಯಾರೂ ಗಮನ ಹರಿಸಿರಲಿಲ್ಲ. ನಮ್ಮ ಸರ್ಕಾರ ಬಂದ ಬಳಿಕ ಆಹಾರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಜನರಿಗೆ ಆಹಾರ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸುವ ಬಗ್ಗೆ ಕ್ರಮ ವಹಿಸಲಾಗಿದೆ.

ಕರ್ನಾಟಕದಲ್ಲೂ ಎರಡು ಸಿರಪ್ ಪತ್ತೆ ಪ್ರಕರಣ ಕುರಿತು ಮಾತನಾಡಿ, ಇದೇ ತರಹ ಬೇರೆ ಕಂಪನಿಗಳು ಕಾಫ್ ಸಿರಪ್ ತಯಾರಿಕೆ ಮಾಡಿದರೆ ಅದರ ಮಾದರಿ ಸಂಗ್ರಹಣೆ ಮಾಡಿ ತಪಾಸಣೆ ಮಾಡಬೇಕು ಎಂದು ಸೂಚನೆ ಕೊಟ್ಟಿದ್ದೇನೆ. ಈಗಾಗಲೇ ಪ್ರಕ್ರಿಯೆ ಆರಂಭವಾಗಿದೆ. ಒಂದೆರಡು ದಿನದಲ್ಲಿ ಅದರ ವರದಿ ಬರುತ್ತದೆ, ಎಚ್ಚರಿಕೆ ಕ್ರಮ ಕೈಗೊಳ್ಳುತ್ತಿದ್ದೇವೆ ಎಂದರು.

ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಕೆಮ್ಮಿನ ಸಿರಪ್‌ಗಳ ಸೇವನೆಯಿಂದ ಮಕ್ಕಳ ಸಾವು ಸಂಭವಿಸಿದ ವರದಿಗಳ ನಂತರ, ಕರ್ನಾಟಕ ಸರ್ಕಾರವು ಎಲ್ಲಾ ಜಾರಿ ಅಧಿಕಾರಿಗಳಿಗೆ ಕೆಲವು ಕೆಮ್ಮಿನ ಸಿರಪ್‌ಗಳ ಮೇಲೆ ಕಟ್ಟುನಿಟ್ಟಿನ ನಿಗಾ ಇಡಲು ನಿರ್ದೇಶನ ನೀಡಿದೆ.

ನಾವು ಬಂದ ಮೇಲೆ ನಮ್ಮ ಇಲಾಖೆಯನ್ನು ಚುರುಕುಗೊಳಿಸಿದ್ದೇವೆ. ಸಾಕಷ್ಟು ತಪಾಸಣೆ ಮಾಡಿಸುತ್ತಿದ್ದೇವೆ. ಕರ್ನಾಟಕ ಈಗ ಬಹಳ ಮುಂಚೂಣಿಯಲ್ಲಿದೆ. ಔಷಧ ವಿಚಾರದಲ್ಲಿ ಪಾರದರ್ಶಕತೆ ತರುವ ಅವಶ್ಯಕತೆ ಇದೆ ಎಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೆ.

ಈ ವಿಚಾರದಲ್ಲಿ ಬೇರೆ ಬೇರೆ ರಾಜ್ಯಗಳ ಜೊತೆ ಮಾಹಿತಿಗಳನ್ನು ಹಂಚಿಕೊಳ್ಳಬೇಕಾಗುತ್ತದೆ. ತಯಾರಿಕೆ ಮಾಡುವವರು ಒಂದು ಕಡೆ ಇರುತ್ತಾರೆ, ಸರಬರಾಜು ಮಾಡುವವರು ಮತ್ತೊಂದು ಕಡೆ ಇರುತ್ತಾರೆ. ಕರ್ನಾಟಕದಲ್ಲಿ ಮಾದರಿ ಸರಿ ಇಲ್ಲ ಎಂದು ಗೊತ್ತಾದಾಗ ಇಡೀ ದೇಶಕ್ಕೆ ಗೊತ್ತಾಗಬೇಕು. ಈ ಕಾಫ್ ಸಿರಪ್ ನಮ್ಮಲ್ಲಿ ಎಲ್ಲೂ ಸರಬರಾಜು ಆಗಿಲ್ಲ ಎಂದು ಹೇಳಿದರು.

ಇನ್ನೂ ಯಾವುದೇ ವಿತರಕ, ಚಿಲ್ಲರೆ ವ್ಯಾಪಾರಿ ಅಥವಾ ಸರ್ಕಾರಿ ಸಂಸ್ಥೆಯು ಈ ಉತ್ಪನ್ನಗಳನ್ನು ಹೊಂದಿದ್ದರೆ, ಪರೀಕ್ಷೆ ಮತ್ತು ವಿಶ್ಲೇಷಣೆಗಾಗಿ ಮಾದರಿಗಳನ್ನು ತೆಗೆದುಕೊಳ್ಳಬೇಕು. ಔಷಧಗಳು ಮತ್ತು ಸೌಂದರ್ಯವರ್ಧಕ ಕಾಯ್ದೆ, 1940 ರ ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಿದೆ.

ಕೆಮ್ಮಿನ ಸಿರಪ್‌ಗಳ ಗುಣಮಟ್ಟದ ಬಗ್ಗೆ ಕಳವಳಗಳ ನಡುವೆ, ಕೇಂದ್ರ ಆರೋಗ್ಯ ಸಚಿವಾಲಯವು ಭಾನುವಾರ ಎಲ್ಲಾ ಔಷಧ ತಯಾರಕರು ಪರಿಷ್ಕೃತ ವೇಳಾಪಟ್ಟಿಯನ್ನು ಅನುಸರಿಸುವ ಅಗತ್ಯವನ್ನು ಒತ್ತಿ ಹೇಳಿದೆ ಮತ್ತು ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ.

ಔಷಧ ಗುಣಮಟ್ಟದ ಮಾನದಂಡಗಳ ಅನುಸರಣೆಯನ್ನು ಪರಿಶೀಲಿಸಲು ಮತ್ತು ಕೆಮ್ಮು ಸಿರಪ್‌ಗಳ ತರ್ಕಬದ್ಧ ಬಳಕೆಯನ್ನು ಉತ್ತೇಜಿಸಲು, ವಿಶೇಷವಾಗಿ ಮಕ್ಕಳ ಜನಸಂಖ್ಯೆಯಲ್ಲಿ, ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಸಚಿವಾಲಯವು ಉನ್ನತ ಮಟ್ಟದ ಸಭೆಯನ್ನು ಕರೆದಿದೆ.

ದೇಶದಲ್ಲೇ ಪ್ರಮುಖ ಪ್ರಕರಣಗಳ ಪಟ್ಟಿಯಲ್ಲಿ ರೇಣುಕಾಸ್ವಾಮಿ ಕೇಸ್‌ಗೆ 2ನೇ ಸ್ಥಾನ



ನವದೆಹಲಿ: 2024-25ರ ಅವಧಿಯಲ್ಲಿ ನಡೆದ ಪ್ರಕರಣಗಳ ಪೈಕಿ ದೇಶದಲ್ಲೇ ಪ್ರಮುಖ ಪ್ರಕರಣಗಳ ಪಟ್ಟಿಯಲ್ಲಿ ರೇಣುಕಾಸ್ವಾಮಿ ಕೇಸ್ ಎರಡನೇ ಸ್ಥಾನ ಪಡೆದುಕೊಂಡಿದೆ.

ಭಾರತದಲ್ಲಿ ನಡೆದ ಪ್ರಕರಣಗಳ ಪೈಕಿ ಕೋಲ್ಕತ್ತಾದ ಟ್ರೈನಿ ವೈದ್ಯೆಯ ಅತ್ಯಾಚಾರ ಪ್ರಕರಣ ಮೊದಲ ಸ್ಥಾನ ಪಡೆದುಕೊಂಡಿದೆ. ಸಂಜಯ್ ರಾವತ್ ಎಂಬಾತ ಈ ಕೃತ್ಯವನ್ನು ಎಸಗಿದ್ದ. ಈಗಾಗಲೇ ಕೋರ್ಟ್ ಅಪರಾಧಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಇನ್ನೂ ನಟ ದರ್ಶನ್ ಕೊಲೆ ಆರೋಪಿಯಾಗಿರುವ, ರೇಣುಕಾಸ್ವಾಮಿ ಕೇಸ್ ಎರಡನೇ ಸ್ಥಾನದಲ್ಲಿದೆ. ಈಗಾಗಲೇ ಈ ಪ್ರಕರಣ ಸಂಬಂಧ ಐದು ಆರೋಪಿಗಳು ಜೈಲಿನಲ್ಲಿದ್ದಾರೆ.

ಒಂದು ವರ್ಷದ ಅವಧಿಯಲ್ಲಿ ಘಟನೆಯ ತೀವ್ರತೆ ಹಾಗೂ ಸೆನ್ಸೇಷನಲ್ ಎನಿಸಿಕೊಂಡ ಪ್ರಕರಣಗಳ ಆಧಾರದ ಮೇಲೆ ಇವುಗಳನ್ನು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ದೇಶದ ಟಾಪ್ 6ರಲ್ಲಿ ರೇಣುಕಾಸ್ವಾಮಿ ಪ್ರಕರಣ ಎರಡನೇ ಸ್ಥಾನ ಪಡೆದುಕೊಂಡಿದೆ. ಉಳಿದಂತೆ ಪುಣೆ ಪೋಷೆಈ ಕೇಸ್, ಹೈದರಾಬಾದ್ ಟೆಕ್ ಸ್ಕ್ಯಾಮ್, ಗಾಯಕ ಜುಬೀನ್ ಗಾರ್ಗ್ ಸಂಶಯಾಸ್ಪದ ಸಾವು ಪ್ರಮುಖ ಪ್ರಕರಣ ಎನಿಸಿಕೊಂಡಿದೆ.

ಬಿಗ್ ಬಾಸ್ ಸ್ಟುಡಿಯೋ ಬಂದ್‌ಗೆ ಆದೇಶ

ರಾಮನಗರ, ಅ.6- ಬಿಗ್ ಬಾಸ್ ಸೀಸನ್ 12ಕ್ಕೆ ಆರಂಭದಲ್ಲೇ ವಿಘ್ನ ಎದುರಾಗಿದೆ. ಬಿಗ್ ಬಾಸ್ ರಿಯಾಲಿಟಿ ಶೋ ನಡೆಯುತ್ತಿರೋ ಬಿಡದಿ ಸಮೀಪದ ಜಾಲಿವುಡ್ ಸ್ಟುಡಿಯೋಸ್ ಅಂಡ್ ಅಡ್ವೆಂಚರ್ಸ್ ಪಾರ್ಕ್ ಬಂದ್ ಮಾಡಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶ ಹೊರಡಿಸಿದೆ. ಅವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಹಾಗೂ ತ್ಯಾಜ್ಯದ ನೀರನ್ನು ಪರಿಸರಕ್ಕೆ ಬಿಡುವ ಮೂಲಕ ಮಾಲಿನ್ಯ ನಿಯಂತ್ರಣ ಕಾಯ್ದೆಗಳನ್ನ ಉಲ್ಲಂಘನೆ ಮಾಡಿರುವ ಆರೋಪ ಕೇಳಿಬಂದಿದೆ. ಕರ್ನಾಟಕ ಮಾಲಿನ್ಯ ನಿಯಂತ್ರಣ ಕಾಯ್ದೆ ಅನ್ವಯ ತಕ್ಷಣದಿಂದಲೇ ಸ್ಟುಡಿಯೋ ಬಂದ್ ಮಾಡಲು ಆದೇಶ ಹೊರಡಿಸಿದ್ದು, ಕೂಡಲೇ ಜಾಲಿವುಡ್ ಸ್ಟುಡಿಯೋಸ್ ಅಂಡ್ ಅಡ್ವೆಂಚರ್ಸ್ ಪಾರ್ಕ್ ಬಂದ್ ಮಾಡಸಿ ಕ್ರಮವಹಿಸಲು ರಾಮನಗರ ಜಿಲ್ಲಾಧಿಕಾರಿಗೆ ಸೂಚನೆ ನೀಡಲಾಗಿದೆ.

ನಟ ವಿಜಯ್ ದೇವರಕೊಂಡ ಕಾರು ಅಪಘಾತ



ಗದ್ವಾಲ್, ಅ.6- ಎರಡು ದಿನಗಳ ಹಿಂದಷ್ಟೇ ನಟಿ ರಶ್ಮಿಕಾ ಮಂದಣ್ಣ ಅವರ ಜೊತೆ ನಿಶ್ಚಿತಾರ್ಥ ಮಾಡಿಕೊಂಡಿದ್ದ ಟಾಲಿವುಡ್ ಸ್ಟಾರ್ ವಿಜಯ್ ದೇವರಕೊಂಡ ಅವರ ಕಾರು ಸೋಮವಾರ ಅಪಘಾತಕ್ಕೀಡಾಗಿದ್ದು, ಅದೃಷ್ಟವಶಾತ್ ಯಾವುದೇ ಗಾಯಗಳಿಲ್ಲದೆ ಪಾರಾಗಿದ್ದಾರೆ. ಆಂಧ್ರಪ್ರದೇಶದ ಪುಟ್ಟಪರ್ತಿಯಿಂದ ಹೈದರಾಬಾದ್‌ಗೆ ಹಿಂತಿರುಗುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಮತ್ತೊಂದು ಕಾರು ವಿಜಯ್ ದೇವರಕೊಂಡ ಅವರ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಕಾರಿಗೆ ಹಾನಿಯಾಗಿದೆ.

ಸಾಹಿತಿ ಮೊಗಳ್ಳಿ ಗಣೇಶರಿಗೆ ನುಡಿನಮನ

ಗಣೇಶ್ ಅಸಾಧ್ಯ ಬುದ್ಧಿವಂತ: ಮೈಸೂರು ವಿವಿ ಕಲಾ ಡೀನ್ ಪ್ರೊ.ಶೇಖರ್ ಅಭಿಮತ


ಮೈಸೂರಿನ ಮಾನಸಗಂಗೋತ್ರಿ ಬುದ್ಧವನದಲ್ಲಿ ನಡೆದ ದಿವಂಗತ ಮೊಗಳ್ಳಿ ಗಣೇಶ್ ಅವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕಲಾನಿಕಾಯದ ಡೀನ್ ಪ್ರೊ.ಎಂ.ಎಸ್.ಶೇಖರ್ ಮಾತನಾಡಿದರು.

ಮೈಸೂರು, ಅ.6- ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ ಹಾಗೂ ಕರ್ನಾಟಕ ಜಾನಪದ ಸಂಶೋಧಕರ ಸಂಘದ ಸಹಯೋಗದಲ್ಲಿ ಮಾನಸಗಂಗೋತ್ರಿ ಬುದ್ಧವನದಲ್ಲಿ ಸೋಮವಾರ ಸಂಜೆ ಸಾಹಿತಿ ದಿವಂಗತ ಮೊಗಳ್ಳಿ ಗಣೇಶ್ ಅವರಿಗೆ ನುಡಿನಮನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮೈಸೂರು ವಿವಿ ಕಲಾನಿಕಾಯದ ಡೀನ್ ಪ್ರೊ.ಎಂ.ಎಸ್.ಶೇಖರ್ ಮಾತನಾಡಿ, ಮೊಗಳ್ಳಿ ಗಣೇಶ್ ಜಗತ್ತಿನ ಶ್ರೇಷ್ಠ ಕಥೆಗಾರರಲ್ಲಿ ಒಬ್ಬರಾಗಿದ್ದರು. ಚಳವಳಿಯಿಂದ ಅಂತರ ಕಾಯ್ದುಕೊಂಡು ಬರಹವನ್ನು ಬಹಳ ಹಚ್ಚಿಕೊಂಡಿದ್ದರು. ಅವರು ಅಸಾಧಾರಣ ಬುದ್ಧಿವಂತ, ಅನನ್ಯ ಕತೆಗಾರ. ಪಿ.ಲಂಕೇಶರಿಂದ ಪ್ರಭಾವಿತರಾಗಿದ್ದ ಅವರಲ್ಲಿ ಯಾರನ್ನಾದರೂ ಟೀಕಿಸುವ ಎದೆಗಾರಿಕೆ ಇತ್ತು ಎಂದು ತಿಳಿಸಿದರು.

ದಕ್ಕಬೇಕಾದ ಪ್ರಶಸ್ತಿಗಳು, ಸ್ಥಾನಮಾನಗಳು ಸಿಗದಿದ್ದಾಗ ಗಣೇಶ್ ಸಹಜವಾಗಿ ಕುಪಿತನಾಗುತ್ತಿದ್ದರು. ವಿಮರ್ಶಕರು ಕಡೆಗಣಿಸಿದ್ದರ ಬಗ್ಗೆಯೂ ಅವರಲ್ಲಿ ಸಿಟ್ಟಿತ್ತು. ಆತನ ಎದೆಗೂಡಿನಲ್ಲಿ ನಿಗಿನಿಗಿ ಕೆಂಡದ ವಿಚಾರಗಳಿದ್ದವು. ಜಿ.ಎಸ್. ಅಮೂರ್, ಕುರ್ತಕೋಟಿ, ಡಿ.ಆರ್. ನಾಗರಾಜ್, ಯು.ಆರ್.ಅನಂತ ಮೂರ್ತಿ, ಪಿ.ಲಂಕೇಶ್ ಅವರೆಲ್ಲಾ ಮೆಚ್ಚುಗೆ ವ್ಯಕ್ತಪಡಿಸಿದ್ದರು ಎಂದರು.

ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ಮಾತನಾಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಾನು 2ನೇ ವರ್ಷ ಓದುವಾಗ ಮೊಗಳ್ಳಿ ಗಣೇಶ್ ಅವರು ಜನಪದ ಗದ್ಯಕಥನವನ್ನು ಬೋಧಿಸುತ್ತಿದ್ದರು. ಮೈಸೂರು ವಿವಿಯಲ್ಲಿ ಸೇವೆ ಸಲ್ಲಿಸಬೇಕೆಂಬ ಅವರ ಆಸೆ ಈಡೇರಲಿಲ್ಲ. ಅತ್ಯುತ್ತಮ ಕತೆಗಾರ, ವಿದ್ವಾಂಸ ಎನಿಸಿಕೊಂಡರೂ ನಾನಾ ಕಾರಣಗಳಿಂದ ಕೆಲಸ ಸಿಗದಿದ್ದಕ್ಕೆ ಅವರಲ್ಲಿ ಸಿಟ್ಟಿತ್ತು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ.ವಿಜಯಲಕ್ಷ್ಮೀ ಕರಿಕಲ್, ಮೈಸೂರು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ವರಹಳ್ಳಿ ಆನಂದ್, ಜಾನಪದ ಸಂಶೋಧಕರ ಸಂಘದ ಅಧ್ಯಕ್ಷ ಕಲ್ಲಹಳ್ಳಿ ಕುಮಾರ್, ಡಾ.ಮಂಜು ಸೇರಿದಂತೆ ಪದಾಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಡಿ.ಎಸ್.ಎಲ್.ಭೈರಪ್ಪ ಅವರ ನಿವಾಸಕ್ಕೆ ಸಂಸದ ಯದುವೀರ್ ಭೇಟಿ


ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಅವರ ನಿವಾಸಕ್ಕೆ ಸೋಮವಾರ ಭೇಟಿ ನೀಡಿದ ಸಂಸದ ಯದುವೀರ್, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮೈಸೂರು, ಅ.6(ಎಂಕೆ)- ಇತ್ತೀಚೆಗೆ ನಿಧನರಾದ ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ ಅವರ ನಿವಾಸಕ್ಕೆ ಸೋಮವಾರ ಭೇಟಿ ನೀಡಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮೈಸೂರಿನ ಕುವೆಂಪು ನಗರದಲ್ಲಿರುವ ಎಸ್.ಎಲ್.ಭೈರಪ್ಪ ಅವರ ನಿವಾಸಕ್ಕೆ ತೆರಳಿ, ಭೈರಪ್ಪ ಅವರ ಪತ್ನಿ ಶ್ರೀಮತಿ ಸರಸ್ವತಮ್ಮ ಹಾಗೂ ಪುತ್ರ ರವಿಶಂಕರ್ ಅವರಿಗೆ ಸಾಂತ್ವನ ಹೇಳಿದರು.

ಬಳಿಕ ಪ್ರತಿಕ್ರಿಯಿಸಿದ ಸಂಸದ ಯದುವೀರ್, ದಸರಾ ಹಾಗೂ ಕೆಲವು ಧಾರ್ಮಿಕ ವಿಧಿ-ವಿಧಾನಗಳು ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಎಸ್.ಎಲ್. ಭೈರಪ್ಪ ಅವರ ನಿವಾಸಕ್ಕೆ ತೆರಳಲು ಸಾಧ್ಯವಾಗಿರಲಿಲ್ಲ. ಈಗ ಎಲ್ಲಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಸಾಂತ್ವನ ತಿಳಿಸಿದ್ದೇವೆ ಎಂದರು.

'ಕರ್ನಾಟಕ ರತ್ನ'ಕ್ಕೆ ಮನವಿ: ಕರ್ನಾಟಕಕ್ಕೆ ಮತ್ತು ವಿಶೇಷವಾಗಿ ಮೈಸೂರು ಭಾಗಕ್ಕೆ ಜಾಗತಿಕ ಮಟ್ಟದಲ್ಲಿ ಮನ್ನಣೆ ದೊರಕಿಸಿಕೊಟ್ಟಿರುವ ಎಸ್.ಎಲ್.ಭೈರಪ್ಪ ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಿಸುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಹಾಗೆಯೇ ಮೈಸೂರಿನ ನಗರ ಕೇಂದ್ರ ಗ್ರಂಥಾಲಯಕ್ಕೆ ಎಸ್.ಎಲ್. ಭೈರಪ್ಪ ಅವರ ಹೆಸರು ಮರು ನಾಮಕರಣ ಮಾಡಲು ಮುಖ್ಯಮಂತ್ರಿಗಳಿಗೆ ಪತ್ರ ಬರೆಯಲಾಗಿದೆ. ಗ್ರಂಥಾಲಯದ ಆವರಣದಲ್ಲಿ ಭೈರಪ್ಪನವರ ಜೀವನ ಚರಿತ್ರೆ, ಸಾಹಿತ್ಯ ಕೃತಿಗಳನ್ನು ಪ್ರತಿಬಿಂಬಿಸುವ ಶಾಶ್ವತ ಸ್ಮಾರಕವನ್ನು ನಿರ್ಮಿಸಬೇಕು ಎಂದು ಸಹ ವಿನಂತಿಸಲಾಗಿದೆ ಎಂದು ತಿಳಿಸಿದರು.

ಎಸ್.ಎಲ್. ಭೈರಪ್ಪ ಅವರ ಅಗಲಿಕೆ ಇಡೀ ನಾಡಿಗೆ ತೀವ್ರ ನೋವುಂಟು ಮಾಡಿದೆ. ಅವರು ನಮ್ಮನ್ನು ಭೌತಿಕವಾಗಿ ಅಗಲಿದ್ದರೂ ಅಕ್ಷರಗಳ ಮೂಲಕ ನಮ್ಮ ನಡುವೆ ಅಮರರಾಗಿದ್ದಾರೆ ಎಂದು ಸ್ಮರಿಸಿದರು.

ಜಿ.ಎಚ್.ನಾಯಕರು ಪತ್ನಿ ಕುರಿತು ಬರೆದ 'ಸಾರ್ಥಕ ಸಂಗಾತಿ' ಕೃತಿ ಲೋಕಾರ್ಪಣೆ

ಸಾಧನೆಗೆ ಒತ್ತಾಸೆಯಾದ ಪತ್ನಿ ವಿಚಾರ ಪ್ರಸ್ತಾಪಿಸುವಂತೆ ಎಸ್.ಎಲ್.ಭೈರಪ್ಪನವರಿಗೆ ನಾಯಕರು ಸಲಹೆ ನೀಡಿದ್ದರು: ಹಿರಿಯ ಸಾಹಿತಿ ಪ್ರೊ.ಎಚ್.ಜಿ.ಸರಸ್ವತಿ ಬೋರಲಿಂಗಯ್ಯ ಬಹಿರಂಗ

ಮೈಸೂರು, ಅ.6(ಎಸ್‌ಪಿಎನ್)– 'ಜಿ.ಎಚ್.ನಾಯಕರ ಸಮಸ್ತ ಸಾಹಿತ್ಯ–1'ರಲ್ಲಿ ಪತ್ನಿ ಮೀರಾನಾಯಕ್ ಕುರಿತು ಬರೆದಿರುವ 'ಸಾರ್ಥಕ ಸಂಗಾತಿ' (ಮೀರಾ ಜತೆ ಎಂಟು ಹೆಜ್ಜೆ) ಪುಸ್ತಕವನ್ನು ಹಿರಿಯ ಸಾಹಿತಿ ಪ್ರೊ.ಎಚ್.ಜಿ.ಸರಸ್ವತಿ ಎನ್.ಬೋರಲಿಂಗಯ್ಯ ಬಿಡುಗಡೆಗೊಳಿಸಿದರು.

ಮೈಸೂರು ಕುವೆಂಪುನಗರದ ಖ್ಯಾತ ವಿಮರ್ಶಕ ಪ್ರೊ.ಜಿ.ಎಚ್.ನಾಯಕ ಅವರ ನಿವಾಸ(ಕಾಮಾಕ್ಷಿ ಆಸ್ಪತ್ರೆ ಹಿಂಭಾಗ)ದಲ್ಲಿ ಬೆಂಗಳೂರಿನ ಅಭಿನವ ಪ್ರಕಾಶನ ಹಾಗೂ ಎಸ್‌ಬಿಆರ್‌ಆರ್ ಮಹಾಜನ ಪದವಿ ದರ್ಜೆ ಕಾಲೇಜು ಕನ್ನಡ ವಿಭಾಗ ಹಾಗೂ ಮೈಸೂರು ಅಭಿನವ ಬಳಗದ ಸಹಯೋಗದಲ್ಲಿ ನಡೆದ ಸರಳ ಸಮಾರಂಭದಲ್ಲಿ ಬಿಡುಗಡೆಗೊಳಿಸಿ, ಅವರು ಮಾತನಾಡಿದರು.

ಖ್ಯಾತ ವಿಮರ್ಶಕ ಪ್ರೊ.ಜಿ.ಎಚ್.ನಾಯಕ ಅವರ ಪತ್ನಿ ಮೀರಾ ನಾಯಕ ಅವರ ವಿಚಾರ ಮತ್ತು ಜೀವನ ಸಂಗಾತಿಯಾಗಿ ನೀಡಿದ ಪ್ರೋತ್ಸಾಹವನ್ನು ಮೆಚ್ಚಿ, ಆಕೆಯ ಶ್ರಮದಿಂದ ನಾನು ಬೆಳೆದಿದ್ದೇನೆ ಎಂದು ಒಪ್ಪಿ ಕೊಂಡು ಅಕ್ಷರರೂಪ ಕೊಟ್ಟ ಮೊದಲ ಸಾಹಿತಿ ಜಿ.ಎಚ್.ನಾಯಕರು.

ಪ್ರೊ.ಜಿ.ಎಚ್.ನಾಯಕ ಅವರು ತಮ್ಮ ಪತ್ನಿ ಮೀರಾನಾಯಕ್ ಅವರ ಕುರಿತು ಬರೆದಿರುವ ಲೇಖನಗಳ ಸರಮಾಲೆ ಕೃತಿ ರೂಪ ಪಡೆದುಕೊಂಡಿದೆ. ಅವರ ಡೈರಿಯಲ್ಲಿ ಮೀರಾ ಅವರು ನೀಡಿದ ಎಲ್ಲಾ ಪ್ರೋತ್ಸಾಹವನ್ನು ಅಕ್ಷರ ರೂಪಕೊಟ್ಟಿದ್ದಾರೆ. ನಾಯಕರು ಬರೆದಿರುವ ಲೇಖನಗಳಲ್ಲಿ ಪತ್ನಿ ಮೀರಾ ಹೆಸರನ್ನು 120ಕ್ಕೂ ಹೆಚ್ಚು ಬಾರಿ ಉಲ್ಲೇಖಿಸಿರುವುದು ವಿಶೇಷ. ನಾನೇ ಈ ಪುಸ್ತಕದ ಲೇಖನಗಳ ಎಡಿಟಿಂಗ್ ಮಾಡುವಾಗ ನೋಡಿದ್ದು, ಮೀರಾ ಜತೆ ಎಂಟು ಹೆಜ್ಜೆ ಹೆಸರಿನಡಿ ಸಂಗ್ರಹವಾಗಿರುವ ಎಂಟು ಲೇಖನಗಳ 'ಸಾರ್ಥಕ ಸಂಗಾತಿ' ಕೃತಿ ಇಂದು ಹೊರ ಬಂದಿರುವುದು ಸಂತೋಷದ ವಿಚಾರ ಎಂದರು.

ಜಿ.ಎಚ್.ನಾಯಕ ಅವರು ತಮ್ಮ ಕೃತಿಯಲ್ಲಿ ಮೀರಾ ತಮ್ಮ ಬದುಕಿನ ಭಾಗ್ಯ ಎಂದು ಬಣ್ಣಿಸಿದ್ದಾರೆ. ಅವರಿಂದ ನಮ್ಮ ಮನೆ ಹೋರಾಟದ ಕೇಂದ್ರವಾಗಿತ್ತು ಎಂದು ಹೇಳಿರುವುದು ವಿಶೇಷವಾಗಿದೆ. ಅಲ್ಲದೆ, ಹೆಸರಾಂತ ಸಾಹಿತಿ ಡಾ.ಎಸ್.ಎಲ್.ಭೈರಪ್ಪನವರಿಗೆ ತಮ್ಮ ಜೀವನದಲ್ಲಿ ಹೆಂಡತಿ ಪ್ರೋತ್ಸಾಹದ ಬಗ್ಗೆ ಜೀವನ ಚರಿತ್ರೆಯಲ್ಲಿ ಉಲ್ಲೇಖಿಸುವಂತೆ ಹಲವು ಬಾರಿ ಹೇಳಿದ್ದಾರೆ. ನಾನು ಕಂಡಂತೆ ಸಾರ್ವಜನಿಕವಾಗಿ 10ರಿಂದ 12 ಬಾರಿ ವಿವಿಧ ವೇದಿಕೆಗಳಲ್ಲಿ ಪ್ರಸ್ತಾಪಿಸಿದ್ದಾರೆ. ಆದರೆ, ಇದಕ್ಕೆ ಭೈರಪ್ಪನವರು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಒಮ್ಮೆ ಭೈರಪ್ಪನವರಿಗೆ ತಮ್ಮ ಹೆಂಡತಿಯ ಕುರಿತು ಜೀವನ ಚರಿತ್ರೆಯಲ್ಲಿ ಉಲ್ಲೇಖಿಸುವಂತೆ ನೇರವಾಗಿ ಹೇಳಿದ್ದರು. ಇದಕ್ಕೆ ಭೈರಪ್ಪನವರು ಅವರ(ಹೆಂಡತಿ ಬಗ್ಗೆ) ಸಾಧನೆ ಏನಿದೆ? ಎಂದಿದ್ದ ಪ್ರಸಂಗವನ್ನು ನೆನೆದು, ಅದಕ್ಕಾಗಿ ಭೈರಪ್ಪನವರ ಸಾಹಿತ್ಯದಲ್ಲಿ ಮಹಿಳೆಯರಿಗೆ ನೀಡಿರುವ ಸ್ಥಾನಮಾನ ಕುರಿತು ಜಿ.ಎಚ್.ನಾಯಕರ ಜೀವಿತಾವಧಿಯಲ್ಲಿ ಅಸಮಾಧಾನವಿತ್ತು. ಅನೇಕ ಬಾರಿ ಭೈರಪ್ಪನವರು ಮಹಿಳಾ ವಿರೋಧಿ ಎಂಬ ನಿಲುವು ವ್ಯಕ್ತಪಡಿಸಿದ ಪ್ರಸಂಗವನ್ನು ನೆನೆದರು.

ಜಿ.ಎಚ್. ನಾಯಕ ಅವರು ತಮ್ಮ ಆತ್ಮ ಕಥೆಯಲ್ಲಿ ಪತ್ನಿ ಮೀರಾ ನಾಯಕ ಅವರ ಬಗ್ಗೆ ಹೆಚ್ಚು ಬರೆಯಲು ಸಾಧ್ಯವಾಗದೇ ಇದ್ದಕ್ಕೆ ಕೊನೆಗೆ 8 ಲೇಖನಗಳನ್ನು ಬರೆದಿದ್ದಾರೆ. ಅದನ್ನು ಈಗ ಕೃತಿ ರೂಪದಲ್ಲಿ ಅವರ ಕುಟುಂಬ ಸ್ನೇಹಿತರು ಮತ್ತು ಶಿಷ್ಯಂದಿರು ಪ್ರಕಟಗೊಳಿಸಿರುವುದು ಸಂತೋಷದ ವಿಚಾರ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿ.ಎಚ್.ನಾಯಕ ಅವರ ಪತ್ನಿ ಮೀರಾ ನಾಯಕ ಅವರನ್ನು ಸನ್ಮಾನಿಸಲಾಯಿತು. ಸಾಹಿತಿ ಡಾ.ಬಿ.ಆರ್.ಜಯಕುಮಾರಿ, ಹಿರಿಯ ರಂಗಕರ್ಮಿ ಪ್ರಸನ್ನ ಕೆರಗೋಡು, ಪ್ರೊ.ಎಚ್.ಆರ್.ತಿಮ್ಮೇಗೌಡ, ಜಿ.ಪಿ.ಬಸವರಾಜು, ಪಿ.ಚಂದ್ರಿಕಾ, ಕೀರ್ತಿಶ್ರೀ ನಾಯಕ್, ಚಕಿತ ಸಚಿನ್, ಪತ್ರಿಕೋದ್ಯಮಿ ರಶ್ಮಿ ಕೋಟಿ, ಎನ್.ಆರ್.ಸ್ನೇಹ, ಸುಶೀಲ ಬಸವಲಿಂಗಯ್ಯ, ಪಂಡಿತಾರಾಧ್ಯ, ನರಹಳ್ಳಿ ಬಾಲ ಸುಬ್ರಹ್ಮಣ್ಯಂ, ಜಿ.ಪಿ.ಸದಾಶಿವ, ಅಭಿನವ ಪ್ರಕಾಶನದ ಅಭಿನವ ರವಿಕುಮಾರ್, ಚಿಂತನಚಿತ್ತಾರ ಪ್ರಕಾಶನದ ನಿಂಗರಾಜು ಚಿತ್ತಣ್ಣವರ್ ಉಪಸ್ಥಿತರಿದ್ದರು.



'ಸಾರ್ಥಕ ಸಂಗಾತಿ' (ಮೀರಾ ಜತೆ ಎಂಟು ಹೆಜ್ಜೆ) ಪುಸ್ತಕವನ್ನು ಹಿರಿಯ ಸಾಹಿತಿ ಪ್ರೊ.ಎಚ್.ಜಿ.ಸರಸ್ವತಿ ಎನ್.ಬೋರಲಿಂಗಯ್ಯ ಬಿಡುಗಡೆಗೊಳಿಸಿದರು.

> **6** ನಾನು(ಸರಸ್ವತಿ), ಮೀರಾ ಪಿಯುಸಿ ಓದುವಾಗಿನಿಂದ ಸ್ನೇಹಿತೆಯರು. ಆ ಕಾಲಕ್ಕೆ ನಾನು ಮತ್ತು ಇತರೆ ಸ್ನೇಹಿತೆಯರು ಸೀರೆ ಉಟ್ಟು ಕಾಲೇಜಿಗೆ ಹೋಗುತ್ತಿದ್ದೆವು. ಆದರೆ, ಮೀರಾ ಮಾತ್ರ ಸ್ಕರ್ಟ್ ಹಾಕಿಕೊಂಡು ಮಾರ್ಡನ್ ಹೆಣ್ಣಿನಂತೆ ಕಾಲೇಜಿಗೆ ಬರುತ್ತಿದ್ದರು. ಬೆರಗು ಗಣ್ಣಿನಿಂದ ಎಲ್ಲರನ್ನು ತನ್ನತ್ತ ಸೆಳೆಯುವಂತಿದ್ದರು. ನಂತರ ಮೀರಾಗೆ 1963ರಲ್ಲಿ ನಾಯಕರ ಜೊತೆ ಮದುವೆ ಯಾಯಿತು. ಎನ್.ಬೋರಲಿಂಗಯ್ಯನವರ ಜೊತೆ ನನಗೆ 1969ರಲ್ಲಿ ಮದುವೆಯಾಗಿ ಮೈಸೂರಿಗೆ ಬಂದೆ.
>
> -ಪ್ರೊ.ಎಚ್.ಜಿ.ಸರಸ್ವತಿ ಎನ್.ಬೋರಲಿಂಗಯ್ಯ, ಹಿರಿಯ ಸಾಹಿತಿ

ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದಿಂದ ಶಾಕ್; ಪರೀಕ್ಷಾ ಶುಲ್ಕ 710 ರೂ.ವರೆಗೆ ಹೆಚ್ಚಳ

ಬೆಂಗಳೂರು: ರಾಜ್ಯ ಸರ್ಕಾರ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಹೆಚ್ಚಳ ಮಾಡಿದೆ.

2025–26ನೇ ಸಾಲಿನ ಪರೀಕ್ಷಾ ಶುಲ್ಕವನ್ನು 5% ಏರಿಕೆ ಮಾಡಿ ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ ಆದೇಶ ಹೊರಡಿಸಿದೆ. ಅದರನ್ವಯ 2025–26ನೇ ಸಾಲಿನಲ್ಲಿ ನಡೆಯಲಿರುವ ಎಲ್ಲಾ ಪರೀಕ್ಷೆಗಳಿಗೆ ಪ್ರಸ್ತುತ ಇರುವ ದರಕ್ಕೆ ಶೇ.5 ರಷ್ಟು ಸೇರಿಸಿ ಶುಲ್ಕ ವಿಧಿಸಲಾಗುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಪರಿಷ್ಕೃತ ಪರೀಕ್ಷಾ ಶುಲ್ಕ ಹೀಗಿದೆ: ಪ್ರಥಮ ಬಾರಿ ಹಾಜರಾಗುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ 676 ರೂ. ನಿಂದ 710 ರೂ.ಗೆ ಹೆಚ್ಚಳ, ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ ಹೊಸದಾಗಿ ನೋಂದಣಿಯಾಗುವ ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ ಹಾಗೂ ಅರ್ಜಿ ಶುಲ್ಕ 236 ರೂ.ನಿಂದ 248 ರೂ.ಗೆ ಹೆಚ್ಚಳ, ಈಗಾಗಲೇ ಖಾಸಗಿ ಅಭ್ಯರ್ಥಿಯಾಗಿ ನೋಂದಣಿಯಾಗಿ ಪರೀಕ್ಷಾ ಶುಲ್ಕ ಪಾವತಿಸಿದ ಅಭ್ಯರ್ಥಿಗಳ ನೋಂದಣಿ ನವೀಕರಣ ಶುಲ್ಕ 69 ರೂ. ನಿಂದ 72 ರೂ.ಗೆ ಹೆಚ್ಚಳ.



ಫೈಲ್ ಚಿತ್ರ

ಪುನರಾವರ್ತಿತ ಶಾಲಾ/ ಖಾಸಗಿ ಅಭ್ಯರ್ಥಿಗಳ ಪರೀಕ್ಷಾ ಶುಲ್ಕ

- ಒಂದು ವಿಷಯಕ್ಕೆ– 427 ರೂ. ನಿಂದ 448 ರೂ.ಗೆ ಹೆಚ್ಚಳ
- ಎರಡು ವಿಷಯಕ್ಕೆ– 532 ರೂ. ನಿಂದ 559 ರೂ.ಗೆ ಹೆಚ್ಚಳ.
- ಮೂರು ಮತ್ತು ಮೂರಕ್ಕಿಂತ ಜಾಸ್ತಿ ವಿಷಯಗಳು 716 ರೂ. ನಿಂದ 752 ರೂ.ಗೆ ಹೆಚ್ಚಳ.

ಐದು ಮಂದಿ ಸಾಧಕರಿಗೆ ವಾಲ್ಮೀಕಿ ಪ್ರಶಸ್ತಿ



ಕೆ. ಉಚ್ಚಂಗಪ್ಪ, ಲಕ್ಷ್ಮಣ ನಾಯಕೋಡಿ, ಪಿ. ತಿಪ್ಪೇಸ್ವಾಮಿ, ನಾಗರಾಜು, ಮುತ್ತಮ್ಮ

ಬೆಂಗಳೂರು: 2025ನೇ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ರಾಜ್ಯದ ಐದು ಮಂದಿಯನ್ನು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಆಯ್ಕೆ ಮಾಡಿದೆ.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಬೆಂಗಳೂರು ಕೇಂದ್ರ ವಿಭಾಗದಿಂದ ನಾಗರಾಜು ಗಾಣದ ಹುಣಸೆ (ವಾದ್ಯವು ಕ್ಷೇತ್ರ) ಹಾಗೂ ಪಿ. ತಿಪ್ಪೇಸ್ವಾಮಿ (ರಂಗ ಭೂಮಿ ಕ್ಷೇತ್ರ) ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಮೈಸೂರು ವಿಭಾಗದಿಂದ ಜೆ.ಕೆ ಮುತ್ತಮ್ಮ (ಸಂಘಟನೆ ಕ್ಷೇತ್ರ), ಬೆಳಗಾವಿ ವಿಭಾಗದಲ್ಲಿ ಮಳಸಿದ್ದ ಲಕ್ಷ್ಮಣ ನಾಯಕೋಡಿ (ಸಮಾಜ ಸೇವೆ ಕ್ಷೇತ್ರ) ಮತ್ತು ಕಲಬುರಗಿ ವಿಭಾಗದಲ್ಲಿ ಕೆ. ಉಚ್ಚಂಗಪ್ಪ (ಸಾಮಾಜಿಕ ಕ್ಷೇತ್ರ) ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.